# THE GOSPEL ACCORDING TO ST. MARK.

## ಮಾರ್ಕನ ಸುವಾರ್ತೆಯ ಪೀಠಿಕೆ.

ಈ ಸುವಾರ್ತೆಯನ್ನು ಬರೆದವನು ಮಾರ್ಕನೆಂಬ ಪ್ರತಿನಾಮವುಳ್ಳ ಯೋಹಾನನೆಂಬವನು. (ಅಪೊ. ಕ್ರಿ. ೧೨. ೧೨, ೨೫.) ಈತನ ತಾಯಿ ಯೆರೂಸಲೇಮಿನಲ್ಲಿ ವಾಸ ಮಾಡಿದ ಮರಿಯಳೆಂಬವಳು. (ಅಪೊ. ಕ್ರಿ. ೧೨. ೧೨.) ಅವಳು ಬಾರ್ನಬನಿಗೆ ನೆಂಟಳಾಗಿದ್ದಳು. (ಕೊಲೊ. ೪. ೧೦.) ಮಾರ್ಕನು ಅಪೊಸ್ತಲನಾದ ಪೇತ್ರನ ಬೋಧನೆಯನ್ನು ಕೇಳಿ ಗುಣ ಪಟ್ಟನೆಂದು ತೋರುತ್ತದೆ. (೧ ಪೇತ್ರ. ೫. ೧೩.) ಪೇತ್ರನು ಆಗಾಗ್ಯೆ ಮರಿಯಳ ಮನೆಗೆ ಹೋಗುವ ವಾಡಿಕೆ ಇತ್ತು. (ಅಪೊ. ಕ್ರಿ. ೧೨. ೧೨.) ಪೌಲನೂ ಬಾರ್ನಬನೂ ಯೆರೂಸಲೇಮನ್ನು ಬಿಟ್ಟು ಹೊರಟು ಅಂತಿಯೋಕ್ಯಕ್ಕೆ ಹೋಗಿ ಅಲ್ಲಿಂದ ಹೊರಟು, ಸುವಾರ್ತೆಯನ್ನು ಪ್ರಸಂಗಿಸುವದಕ್ಕೆ ಹಲವು ದೇಶಗಳಲ್ಲಿ ಪ್ರಯಾಣ ಮಾಡಿದಾಗ ಮಾರ್ಕನು ಅವರ ಸಂಗಡ ಪಂಫುಲ್ಯದವರಿಗೂ ಹೋಗಿ, ತಿರಿಗಿ ಬಂದು ಬಿಟ್ಟನೆಂದು ತೋರುತ್ತದೆ. (ಅಪೊ. ಕ್ರಿ. ೧೨. ೨೫; ೧೩. ೫, ೧೩.) ಅದರಿಂದ ಆರು ವರುಷಗಳ ತರುವಾಯ ಅಪೊಸ್ತಲನಾದ ಪೌಲನು ಎರಡನೇ ಸಾರಿ ಪ್ರಯಾಣ ಮಾಡಿದಾಗ ಮಾರ್ಕನನ್ನು ಕೂಡ ಕರಕೊಂಡು ಹೋಗಲಿಲ್ಲ. ಆದದರಿಂದ ಅವನು ಬಾರ್ನಬನ ಸಂಗಡ ಕುಪ್ರ ದ್ವೀಪಕ್ಕೆ ಹೋದನು. (ಅಪೊ. ಕ್ರಿ. ೧೫. ೩೭, ೩೯.) ತರುವಾಯ ಪೌಲನು ರೋಮಪುರಿಯಲ್ಲಿ ಸೆರೆಯಲ್ಲಿದ್ದಾಗ, ಮಾರ್ಕನು ಹೋಗಿ ಅವನನ್ನು ನೋಡಿ, ದೇವ ಊಳಿಗದಲ್ಲಿ ಅವನಿಗೆ ಅನುಕೂಲವಾಗಿದ್ದನೆಂದು ಹೇಳಿರುವದರಿಂದ ಇಬ್ಬರಿಗೂ ಸಂಭವಿಸಿದ್ದ ಮನಸ್ತಾಪವು ನಿವರ್ತಿಯಾಯಿತೆಂದು ಕಾಣುತ್ತದೆ. (ಕೊಲೊ. ೪. ೧೦. ೨ ತಿಮೊ. ೪. ೧೧. ಫಿಲೇ. ೨೪.) ಮಾರ್ಕನು ಒಂದು ಕಾಲದಲ್ಲಿ ಪೇತ್ರನ ಸಂಗಡ ಇದ್ದನೆಂದು ತೋರುತ್ತದೆ. (೧ ಪೇತ್ರ. ೫. ೧೩.) ಅವನು ಪೇತ್ರನ ಅನುಮತಿಯ ಪ್ರಕಾರ ಐಗುಪ್ತಕ್ಕೆ ಹೋಗಿ, ಅಲೆಕ್ಸಂದ್ರಿಯ ಪಟ್ಟಣದಲ್ಲಿ ಸುವಾರ್ತೆಯನ್ನು ಪ್ರಸಂಗಿಸಿ, ಕ್ರಿಸ್ತಸಭೆಯನ್ನು ಸ್ಥಾಪಿಸಿ, ಮೊದಲನೇ ಅಧ್ಯಕ್ಷನಾಗಿದ್ದನೆಂದೂ, ತರುವಾಯ ಮಹಾ ಕೀರ್ತಿ ಹೊಂದಿದ ವೇದಶಾಸ್ತ್ರಶಾಲೆಯನ್ನು ಅಲ್ಲಿ ಸ್ಥಾಪಿಸಿದನೆಂದೂ, ಕಡೇಲಿ ಅಲ್ಲಿಯೇ ರಕ್ತಸಾಕ್ಷಿಯ ಮರಣ ಹೊಂದಿದನೆಂದೂ, ಸಭೆಯ ಚರಿತ್ರೆಯಲ್ಲಿ ಹೇಳಿರುತ್ತದೆ. ಆದರೆ ಅದನ್ನು ಕುರಿತು ದೃಢವಾಗಿ ಹೇಳ ಕೂಡದು.

ಮಾರ್ಕನು ಪೂರ್ವಕ್ರೈಸ್ತರ ಮಧ್ಯದಲ್ಲಿ ವಾಸಿಸುತ್ತಾ ಬಂದದರಿಂದಲೂ, ಅಪೊಸ್ತಲರ ಸಂಗಡ ಬಳಿಕೆಯಾಗಿದ್ದದರಿಂದಲೂ, ಅವರಿಂದ ಯೇಸುವನ್ನು ಕುರಿತು ಅನೇಕ ಕಾರ್ಯಗಳನ್ನು ಕೇಳಿ ತಿಳುಕೊಂಡಿರುವನು. ಮುಖ್ಯವಾಗಿ ಅವನು ಪೇತ್ರನ ಸಂಗಡ ಅಧಿಕ ಸ್ನೇಹವಾಗಿದ್ದದರಿಂದ ಅವನಿಂದ ಅನೇಕ ಸಂಗತಿಗಳನ್ನು ಕೇಳಿ ತಿಳುಕೊಂಡಿರುವನು. ಅದರಿಂದ ಈ ಸುವಾರ್ತೆಯ ಪುಸ್ತಕವನ್ನು ಬರೆಯ ತಕ್ಕವನಾಗಿದ್ದನು. ಆದರೆ ಇದು ಬರೆಯಲ್ಪಟ್ಟ ಕಾಲವೂ ಸ್ಥಳವೂ ನಿಶ್ಚಯವಾಗಿ ತಿಳಿಯಲಿಲ್ಲ.

ಮತ್ತಾಯನ ಲೂಕನ ಸುವಾರ್ತೆಗಳಲ್ಲಿ ಇಲ್ಲದ ಸಂಗತಿಗಳು ಇದರಲ್ಲಿ ವಿಶೇಷವಾಗಿ ಇಲ್ಲ. ಆದಾಗ್ಯೂ ಈ ಸುವಾರ್ತೆಯ ಧೋರಣೆಯಲ್ಲಿಯೂ ತಾತ್ಪರ್ಯದಲ್ಲಿಯೂ ಕೆಲವು ವ್ಯತ್ಯಾಸಗಳುಂಟು. ಲೋಕರಕ್ಷಕನು ಮೋಶೆಯ ನ್ಯಾಯಪ್ರಮಾಣಕ್ಕಾದರೂ, ಯೆಹೂದ್ಯರಿಗಾದರೂ ಸಮ್ಮಂಧ ಪಟ್ಟವನೆಂದು ಇದರಲ್ಲಿ ತೋರಿಸಲಿಲ್ಲ. ಪೂರ್ವ ಪ್ರವಾದಿಗಳ ವಾಕ್ಯಗಳನ್ನು ಐದು ಸಾರಿ ಮಾತ್ರ ಹೇಳಿದ್ದಾನೆ. ಇದರಲ್ಲಿ ಕ್ರಿಸ್ತನ ಉಪದೇಶಗಳು ಅಧಿಕವಾಗಿಲ್ಲ. ಲೋಕರಕ್ಷಕನು ಸರ್ವಶಕ್ತಿಯುಳ್ಳ ದೇವರ ಮಗನೆಂದು ಪ್ರಕಟವಾಗ ತಕ್ಕ ಅದ್ಭುತ ಕ್ರಿಯೆಗಳನ್ನು ಮಾತ್ರ ವಿವರವಾಗಿ ಹೇಳಿ ಇದೆ. ಮತ್ತು ರಕ್ಷಕನ ಅತಿಶಯವಾದ ಕ್ರಿಯೆಗಳನ್ನು ಕುರಿತು ಹೇಳುವದರಲ್ಲಿ ಬೇರೆ ಸುವಾರ್ತಿಕರಿಗಿಂತ ಮಾರ್ಕನು ಕಣ್ಣಿನ ಮುಂದೆ ನಡೆದ ಭಾವನೆಯಾಗಿ ಬರೆದಿದ್ದಾನೆ.

ಈ ಸುವಾರ್ತೆಯ ಸಂಗತಿಗಳನ್ನು ನಾಲ್ಕು ಭಾಗಗಳಾಗಿ ವಿಭಾಗಿಸ ಬಹುದು.

I. ಸ್ನಾನಿಕನಾದ ಯೋಹಾನನ ಪ್ರಸಂಗವು, ಕ್ರಿಸ್ತನ ಸ್ನಾನವೂ ಶೋಧನೆಯೂ. ೧. ೧—೧೩.

II. ಗಲಿಲಾಯ ದೇಶದಲ್ಲಿ ರಕ್ಷಕನು ಮಾಡಿದ ಮುಖ್ಯ ಕಾರ್ಯಗಳು. ೧. ೧೪—೯. ೫೦. ವರಿಗೆ.

III. ಆತನು ಕಡೆಯಾಗಿ ಯೆರೂಸಲೇಮಿಗೆ ಮಾಡಿದ ಪ್ರಯಾಣವೂ, ಪಟ್ಟಣದಲ್ಲಿ ರಾಜಕೀಯ ಪ್ರವೇಶ ಮಾಡಿದ್ದೂ, ಅಲ್ಲಿ ನಡೆದ ಮುಖ್ಯ ಸಂಗತಿಗಳೂ, ಆತನ ಕಷ್ಟಗಳೂ, ಮರಣವೂ, ಪುನರುತ್ಥಾನವೂ. ೧೦; ೧೧. ೧—೧೬. ೧೪. ವರಿಗೂ.

IV. ಆತನು ಕಡೆಯಾಗಿ ತನ್ನ ಶಿಷ್ಯರಿಗೆ ಕೊಟ್ಟ ಕಟ್ಟಳೆಯೂ, ಪರಲೋಕಕ್ಕೆ ಏರಿ ಹೋದದ್ದೂ. ೧೬. ೧೫—೨೦.

# THE GOSPEL OF MARK.

## ಮಾರ್ಕನು ಬರೆದ ಸುವಾರ್ತೆ.

*A. D.* 26.] [ಕ್ರಿ. ತ. ೨೬.

### ಸ್ನಾನಿಕನಾದ ಯೋಹಾನನ ಉದ್ಯೋಗವು; ಕ್ರಿಸ್ತನ ಸ್ನಾನವೂ ಶೋಧನೆಯೂ.

I. ದೇವರ ಮಗನಾದ ಯೇಸು ಕ್ರಿಸ್ತನ ಸುವಾರ್ತೆಯ [1]ಪ್ರಾರಂಭವು.
೨ ಇಗೋ, ನಾನು ನನ್ನ ದೂತನನ್ನು ನಿನ್ನ ಮುಖದ ಮುಂದೆ ಕಳುಹಿಸುತ್ತೇನೆ; ಅವನು ನಿನ್ನ ಮಾರ್ಗವ
೩ ನ್ನು ನಿನ್ನ ಮುಂದೆ ಸಿದ್ಧ ಮಾಡುವನು. (ಮಲಕಿ. ೩. ೧.) ಕರ್ತನ ಮಾರ್ಗವನ್ನು ಸಿದ್ಧ ಮಾಡಿರಿ, ಅವನ
ಹಾದಿಗಳನ್ನು ನೆಟ್ಟಗೆ ಮಾಡಿರಿ, ಎಂದು ಅರಣ್ಯದಲ್ಲಿ ಕೂಗುವವನ ಶಬ್ದವದೆ ಎಂಬದಾಗಿ, (ಯೆಶಾ. ೪೦. ೩.)
೪ ಪ್ರವಾದಿಗಳಲ್ಲಿ ಬರೆದಿರುವ ಪ್ರಕಾರ, ಯೋಹಾನನು ಅರಣ್ಯದಲ್ಲಿ ಸ್ನಾನ ಕೊಡುತ್ತಾ, [2]ಪಾಪಗಳ ಪರಿ
೫ ಹಾರಕ್ಕಾಗಿ ಮಾನಸಾಂತರದ ಸ್ನಾನವನ್ನು ಸಾರುತ್ತಾ ಇದ್ದನು. ಮತ್ತು ಯೆಹೂದ ದೇಶವೆಲ್ಲವೂ ಯೆ
ರೂಸಲೇಮಿನವರೂ ಅವನ ಬಳಿಗೆ ಹೊರಟು ಹೋಗಿ, ಎಲ್ಲರು ತಮ್ಮ ಪಾಪಗಳನ್ನು ಅರಿಕೆ ಮಾಡಿ, ಯೊ
ರ್ದನ್ ನದಿಯಲ್ಲಿ ಅವನಿಂದ ಸ್ನಾನ ಹೊಂದಿದರು.
೬ ಯೋಹಾನನು ಒಂಟೇ ಕೂದಲಿನ ವಸ್ತ್ರವನ್ನುಟ್ಟು, ತನ್ನ ನಡುವಿನ ಸುತ್ತ ತೊಗಲಿನ ನಡುಕಟ್ಟನ್ನು ಕಟ್ಟಿ
೭ ಕೊಂಡು, ಮಿಡಿತೆಗಳನ್ನೂ ಕಾಡ ಜೇನನ್ನೂ ತಿನ್ನುತ್ತಾ ಇದ್ದನು. ಅವನು ಸಾರಿ ಹೇಳಿದ್ದೇನಂದರೆ, ನನ
ಗಿಂತ ಶಕ್ತನು ನನ್ನ ಹಿಂದೆ ಬರುತ್ತಾನೆ; ಅವನ [3]ಕೆರಗಳ ಬಾರನ್ನು ಬೊಗ್ಗಿ ಕೊಂಡು ಬಿಚ್ಚುವದಕ್ಕೆ ನಾನು
೮ ಯೋಗ್ಯನಲ್ಲ. ನಾನು ನೀರಿನಿಂದ ನಿಮಗೆ ಸ್ನಾನ ಕೊಟ್ಟದ್ದೇನೆ; ಆದರೆ ಅವನು ಪರಿಶುದ್ಧಾತ್ಮದಿಂದ ನಿಮಗೆ
ಸ್ನಾನ ಕೊಡುವನು.
೯ ಆ ದಿವಸಗಳಲ್ಲಿ ಆದದ್ದೇನಂದರೆ, ಯೇಸು ಗಲಿಲಾಯದ ನಜರೇತಿನಿಂದ ಬಂದು, ಯೋಹಾನನಿಂದ ಯೊರ್ದ
೧೦ ನಿನಲ್ಲಿ ಸ್ನಾನ ಹೊಂದಿದನು. ಅವನು ನೀರಿನೊಳಗಿಂದ ಏರಿ ಬಂದ ಕೂಡಲೆ, ಆಕಾಶಗಳು ಭೇದವಾಗಿ, ಪರಿ
೧೧ ಶುದ್ಧಾತ್ಮವು ಪಾರಿವಾಳದಂತೆ ಅವನ ಮೇಲೆ ಇಳಿದು ಬರುವದನ್ನು ನೋಡಿದನು. ಮತ್ತು, ನಾನು ಆನಂದ
ಪಡುವ ನನ್ನ ಪ್ರಿಯ ಮಗನು ನೀನೇ, ಎಂಬ ಶಬ್ದವು ಆಕಾಶದಿಂದ ಉಂಟಾಯಿತು.
೧೨,೧೩ ಸಂಗಡಲೇ ಆತ್ಮವು ಅವನನ್ನು [4]ಅರಣ್ಯಕ್ಕೆ [5]ನೈಯಿತು. ಅಲ್ಲಿ ಅವನು ಸೈತಾನನಿಂದ ಶೋಧಿಸಲ್ಪಡು

1. ೧—೧೩. ವರಿಗೂ ಪೀಠಿಕೆ. ಇದರಲ್ಲಿ ಕ್ರಿಸ್ತನ ಹೆಸರು, ಉದ್ಯೋಗ ಮುಂತಾದವುಗಳನ್ನು ಸೂಚಿಸುತ್ತದೆ. ೧. ಆತನಿಗೆ ಮುಂದೂತನಾಗಿದ್ದ ಸ್ನಾನಿಕನಾದ ಯೋಹಾನನ ಪ್ರಸಂಗದಿಂದ ಪೂರ್ವ ಪ್ರವಾದನೆ ಈಡೇರಿತು. (೨—೫.) ತನ್ನ ಹಿಂದೆ ಬಂದ ಲೋಕರಕ್ಷಕನ ಮಹಿಮೆಯನ್ನು ಕುರಿತು ಯೋಹಾನನು ಸಾಕ್ಷಿ ಕೊಟ್ಟದ್ದು. (೬—೮.) ಕ್ರಿಸ್ತನ ಸ್ನಾನವು, ಆತ್ಮನ ಅಭಿಷೇಕವು, ತಂದೆಯ ಸಾಕ್ಷಿ, ಅರಣ್ಯದಲ್ಲಿ ಆತನಿಗೆ ಸಂಭವಿಸಿದ ಶೋಧನೆ. (೯—೧೩.) ಈ ಸಂಗತಿಗಳನ್ನು ಮತ್ತಾ. ೩ನೇ ೪ನೇ ಸಂಧಿಗಳಲ್ಲಿ ವಿವರವಾಗಿ ತೋರಿಸಿರುವದರಿಂದ ಅವುಗಳ ವ್ಯಾಖ್ಯಾನ ನೋಡ ಬೇಕು.

2. ಪಾಪಪರಿಹಾರಕ್ಕೆ ಮಾನಸಾಂತರವು ಅವಶ್ಯವಾಗಿಯೂ, ಸ್ನಾನವು ಗುರುತಾಗಿಯೂ ಇರುತ್ತದೆ. ಪಾಪಪರಿಹರಿಸುವವನು ಪಾಪಾತ್ಮರನ್ನು ರಕ್ಷಿಸುವ ಉದ್ದಿಶ್ಯ ಅವತರಿಸಿದ ಕ್ರಿಸ್ತನೇ.

3. ಮತ್ತಾ. ೩. ೧೧. ವಚನದ ವ್ಯಾಖ್ಯಾನದಲ್ಲಿ ನೋಡ ಬೇಕು.

4. ಕ್ರಿಸ್ತನು ಶೋಧಿಸಲ್ಪಟ್ಟ ಸ್ಥಳವು ಯಾವದೆಂದು ತಿಳಿಯಲಿಲ್ಲ. ಮೋಶೆ ಎಲೀಯ ಎಂಬವರು ಉಪವಾಸ ಮಾಡಿದ ಸೀನಾಯ ಅರಣ್ಯವೆಂದು ಕೆಲವರು ನೆನಸುತ್ತಾರೆ. ಯೆರಿಕೋವಿಗೆ ಸಮೀಪದಲ್ಲಿರುವ ಕ್ವಾರೆಂಟಾನಾ ಬೆಟ್ಟವೆಂದು ಪಾರಂಪರ್ಯವಾಗಿ ಹೇಳುತ್ತಾರೆ. ಕ್ರಿಸ್ತನು ಮೃಗಗಳ ಸಂಗಡ ಇದ್ದನೆಂದು ಹೇಳಿರುವದರಿಂದ ಆತನು ಶೋಧಿಸಲ್ಪಟ್ಟ ಸ್ಥಳವು ಯೊರ್ದನ್ ನದಿ ಉತ್ಪತ್ತಿಯಾಗುವ ಅರಣ್ಯವೆಂದು ತೋರುತ್ತದೆ. ಅದರಲ್ಲಿ ಜಂಬೂ ಪೊದೆಗಳೂ ದಟ್ಟವಾಗಿರುವದರಿಂದ ಮೃಗಗಳಿಗೆ ವಸ್ತಿಯಾದ ಸ್ಥಳವಾಗಿತ್ತು.

5. ಮತ್ತಾ. ೯. ೩೮. ವಚನದ ವ್ಯಾಖ್ಯಾನ ನೋಡ ಬೇಕು.

೩೬, ೩೭ ಮತ್ತು ಸೀಮೋನನೂ ಅವನ ಸಂಗಡ ಇದ್ದವರೂ ಅವನನ್ನು ಹಿಂದಟ್ಟಿ, ಅವನನ್ನು ಕಂಡು, [1]ಎಲ್ಲರು
೩೮ ನಿನ್ನನ್ನು ಹುಡುಕುತ್ತಾರೆಂದು ಅವನಿಗೆ ಹೇಳಿದಾಗ; ಅವನು ಅವರಿಗೆ, ನಾನು ಅಲ್ಲಿಯೂ ಸಾರುವ ಹಾಗೆ
ಸಮೀಪವಾಗಿರುವ ಊರುಗಳಿಗೆ ಹೋಗುವ; ಯಾಕಂದರೆ [2]ಅದಕ್ಕಾಗಿ ಹೊರಟು ಬಂದಿದ್ದೇನೆ, ಅಂದನು.
೩೯ ಆಗಲವನು ಗಲಿಲಾಯುವೆಲ್ಲಾದರಲ್ಲಿ ಅವರ ಸಭೆಮನೆಗಳಲ್ಲಿ ಸಾರುತ್ತಾ, ದೆವ್ವಗಳನ್ನು ಹೊರಡಿಸುತ್ತಾ ಬಂದನು.
೪೦ ಆಗ [3]ಒಬ್ಬ ಕುಷ್ಠರೋಗಿಯು ಅವನ ಬಳಿಗೆ ಬಂದು, ಅವನನ್ನು ಬೇಡಿ ಕೊಂಡು, ಮೊಣಕಾಲೂರಿ,
೪೧ ನಿನಗೆ ಮನಸ್ಸಿದ್ದರೆ, ನನ್ನನ್ನು ಶುಚಿ ಮಾಡ ಬಲ್ಲಿ, ಎಂದು ಅವನಿಗೆ ಹೇಳಲು; ಯೇಸು ಅಂತಃಕರಣ
೪೨ ಪಟ್ಟು, ಕೈ ಚಾಚಿ, ಅವನನ್ನು ಮುಟ್ಟಿ, ಮನಸ್ಸುಂಟು, ಶುಚಿಯಾಗು ಎಂದು ಅವನಿಗೆ ಹೇಳಿದನು. ಅವನು
೪೩ ಹೇಳಿದ ಕೂಡಲೆ ಕುಷ್ಠವು ಅವನನ್ನು ಬಿಟ್ಟಿತು, ಅವನು [4]ಶುಚಿಯಾದನು. ಮತ್ತು ಅವನಿಗೆ ಖಂಡಿತವಾಗಿ
೪೪ ಆಜ್ಞಾಪಿಸಿ, ಸಂಗಡಲೇ ಅವನನ್ನು ಕಳುಹಿಸಿ ಬಿಟ್ಟು, [5]ಯಾರಿಗೂ ಏನೂ ಹೇಳ ಬೇಡ, ನೋಡಿಕೋ;
ಆದರೆ ಹೋಗಿ, ಯಾಜಕನಿಗೆ ನಿನ್ನನ್ನು ತೋರಿಸಿ ಕೊಂಡು, ಮೋಶೆಯು ನೇಮಿಸಿದವುಗಳನ್ನು ನಿನ್ನ ಶುದ್ಧೀ
ಕರಣಕ್ಕೋಸ್ಕರ [6]ಅವರಿಗೆ ಸಾಕ್ಷಿಯಾಗಿ ಅರ್ಪಿಸೆಂದು, ಅವನಿಗೆ ಹೇಳಿದನು.
೪೫ ಆದರೆ ಅವನು ಹೊರಟು, ಬಹಳವಾಗಿ ಸಾರುವದಕ್ಕೂ ಆ ಕಾರ್ಯವನ್ನು ಹಬ್ಬಿಸುವದಕ್ಕೂ ಆರಂಭಿಸಿದ
ಕಾರಣ, ಯೇಸು ಇನ್ನು ಬಹಿರಂಗವಾಗಿ [7]ಪಟ್ಣದಲ್ಲಿ ಪ್ರವೇಶಿಸಲಾರದೆ, ಹೊರಗೆ ಅರಣ್ಯಸ್ಥಳಗಳಲ್ಲಿ ಇದ್ದ
ನು; ಮತ್ತು ಎಲ್ಲಾ ಕಡೆಯಿಂದ ಅವನ ಬಳಿಗೆ ಬಂದರು.

ಕ್ರಿಸ್ತನು ಒಬ್ಬ ಪಕ್ಷವಾಯುವಿನವನಿಗೆ ಸ್ವಸ್ಥಮಾಡಿ, ಪಾಪಗಳನ್ನು ಮನ್ನಿಸ ತನಗೆ ಅಧಿಕಾರ ಉಂಟೆಂದು ದೃಷ್ಟಾಂತ ಪಡಿಸಿದ್ದು.

**2.** [8]ಕೆಲವು ದಿವಸಗಳಾದ ಮೇಲೆ ಅವನು ತಿರಿಗಿ ಕಪೆರ್ನೌಮಿನಲ್ಲಿ ಪ್ರವೇಶಿಸಿದನು. ಮತ್ತು, ಅವನು ಮನೆ
೨ ಯಲ್ಲಿ ಇದ್ದಾನೆಂದು ಸುದ್ದಿಯಾದಾಗಲೇ, ಬಾಗಲಿನ ಸಮೀಪದಲ್ಲಾದರೂ ಸ್ಥಳ ಸಾಲದ ಹಾಗೆ, ಅನೇಕ
ರು ಕೂಡಿ ಕೊಳ್ಳಲು, ಅವರಿಗೆ ವಾಕ್ಯವನ್ನು ಹೇಳಿದನು.

1. ಅನೇಕ ಜನರು ಆತನ ಬಳಿಗೆ ಬಂದು, ತಮ್ಮ ಸಂಗಡ ಇರ ಬೇಕೆಂದು ಆತನನ್ನು ಬೇಡಿ ಕೊಂಡರು. (ಲೂಕ. ೪. ೪೨.) ಆತನು ಗಲಿಲಾಯದಲ್ಲಿ ತನ್ನ ದಿವ್ಯ ಉದ್ಯೋಗವನ್ನು ಪ್ರಾರಂಭಿಸಿದ ಕಾಲದಲ್ಲಿ ಜನರು ಆತನ ಮೇಲೆ ಬಹಳ ಪ್ರೀತಿಯಾಗಿದ್ದರೆಂದು ಇದರಿಂದ ತೋರುತ್ತದೆ. (೪೫.)

2. ಸುವಾರ್ತೆಯನ್ನು ಸಾರುವದಕ್ಕಾಗಿಯೇ ನಾನು ಲೋಕಕ್ಕೆ ಬಂದೆನೆಂಬುವದು ಈ ವಾಕ್ಯದ ಅರ್ಥವು. (ಲೂಕ. ೪. ೪೩. ಯೋಹಾ. ೧೪. ೨೮.) ಅದ್ಭುತಗಳನ್ನು ಮಾಡುವದಕ್ಕಿಂತ ಪಾಪಾತ್ಮರಿಗೆ ಜ್ಞಾನೋಪದೇಶ ಮಾಡುವದೇ ಆತನು ಈ ಲೋಕಕ್ಕೆ ಬಂದ ಮುಖ್ಯ ಗುರಿಯು.

3. ಎಲ್ಲಾ ರೋಗಗಳಿಗಿಂತ ಕುಷ್ಠರೋಗವು ಅತಿ ಕಠಿಣವಾದದ್ದು. ಅದು ಎಲುವುಗಳಲ್ಲಿಯೂ ಮೆದಳಿನಲ್ಲಿಯೂ ಪ್ರಾರಂಭಿಸಿ, ಮೂರು ನಾಲ್ಕು ವರುಷಗಳ ತರುವಾಯ ಹೊರಗೆ ತೋರುವದು. ಅದರಿಂದ ದೇಹವೆಲ್ಲಾ ಕೊಳೆತು ಹೋಗುವದು. ಈ ರೋಗದಲ್ಲಿ ಹುಟ್ಟಿದವರು ಐವತ್ತು ವರುಷ ಬದುಕಿದರೂ ಬದುಕುವರು. ಪ್ರಾರಂಭದಲ್ಲಿ ಅದರ ಉಪದ್ರವು ಸ್ವಲ್ಪವಾಗಿದ್ದು, ರೋಗ ಬಲಿಯುತ್ತಾ ಬರಲು, ನಡುನೆತ್ತಿ ಮೊದಲುಗೊಂಡು ಅಂಗಾಲಿನ ಮಟ್ಟಿಗೂ ಶರೀರವೆಲ್ಲಾ ವ್ರಣವಾಗುವದು. (ಯೆಶಾ. ೧. ೬.) ಈ ರೋಗವುಳ್ಳವರು ನಡೆದಾಡುವ ಹೆಣಕ್ಕೆ ಸಮಾನ. (ಅಂಕೆ. ೧೨. ೧೨.) ತಂದೆಗೆ ಇರುವ ರೋಗವು ರಕ್ತದ ಮೂಲವಾಗಿ ಮಗನಿಗೂ ಬರುವದಾಗಿದ್ದರೂ, ಇದು ಅಂಟುರೋಗವಲ್ಲ. (೨ ಅರ. ೫. ೨೭.) ಇದು ಮನುಷ್ಯರಿಂದ ತೀರದಂಥ ವ್ಯಾಧಿಯು. (೨ ಅರ. ೫. ೭.) ಇದು ಪಾಪವೆಂಬ ರೋಗಕ್ಕೆ ಗುರುತಾಗಿದೆ. (ಲೇವಿ. ೧೩. ೧೪. ಸಂಧಿಗಳು.) ಕುಷ್ಠರೋಗಿ ದಂಡಿನ ಹೊರಗೆ ಏಕಾಂತವಾಸಿಯಾಗಿದ್ದು, ಅಶುದ್ಧನು ಅಶುದ್ಧನು ಎಂದು ಕೂಗುತ್ತಾ ಇರ ಬೇಕು. (ಲೇವಿ. ೧೩. ೪೫.)

4. ತೀರದ ವ್ಯಾಧಿ ಸರ್ವಶಕ್ತನ ಮಾತಿನಿಂದ ಒಂದೇ ಕ್ಷಣದಲ್ಲಿ ತೀರಿತು. ಎಂದಿಗೂ ಮನುಷ್ಯರು ಮುಟ್ಟದೆ ಇದ್ದ ಅವನನ್ನು ತನ್ನ ಪರಿಶುದ್ಧ ಹಸ್ತದಿಂದ ಮುಟ್ಟಿ ಸ್ವಸ್ಥ ಪಡಿಸಿದನು. ಆತನು ಮುಟ್ಟಿದಾಗಲೇ ಕುಷ್ಠರೋಗವು ಹಾರಿ ಹೋಯಿತು.

5. ಯಾಜಕನು ನೋಡಿ ಅವನ ಕುಷ್ಠರೋಗವು ತೀರಿತೆಂದು ಹೇಳ ಬೇಕು. ಅದಕ್ಕೆ ಮುಂಚೆ ಅವನೇ ಅದನ್ನು ಹೇಳಿದರೆ ಜನರು ನಂಬಲಾರರು. ಆದದರಿಂದ ಅದನ್ನು ಯಾರಿಗೂ ಹೇಳ ಬೇಡವೆಂದು ಹೇಳಿದನು. ಕ್ರಿಸ್ತನು ಸದ್ದೂಕಾಯರು ಫರಿಸಾಯರ ಹಾಗೆ ಮನುಷ್ಯರ ಹೊಗಳಿಕೆಯನ್ನು ಹುಡುಕಲಿಲ್ಲವೆಂಬುವದು ಇದರಿಂದ ತಿಳಿಯಲಾಗುತ್ತದೆ.

6. ಯಾಜಕರು ಅವನನ್ನು ನೋಡಿ ಶುದ್ಧನೆಂದು ಹೇಳುವದು ಕುಷ್ಠರೋಗ ನಿಜವಾಗಿ ನಿವರ್ತಿಯಾಯಿತೆಂಬುವದಕ್ಕೆ ಜನರಿಗೆ ಸಾಕ್ಷಿಯಾಗಿರುವದು. ಮತ್ತು ಕುಷ್ಠವು ಪರಿಹಾರವಾದದರಿಂದ ರಕ್ಷಕನ ಸರ್ವತ್ರಾಣವು ಯಾಜಕರಿಗೂ ಜನರಿಗೂ ತಿಳಿಯ ಬರುವದು.

7. ಇದು ಕಪೆರ್ನೌಮ್ ಪಟ್ಣವು. (೨೧. ವಚನ.)

8. ಕೆಲವು ದಿವಸಗಳ ತರುವಾಯ ಆತನು ಕಪೆರ್ನೌಮಿಗೆ ತಿರಿಗಿ ಬಂದಾಗ ಜನರು ಸಮೂಹಗಳಾಗಿ ಆತನ ಬಳಿಗೆ ಬಂದರು. (೧, ೨. ವ.) ಅಲ್ಲಿರುವಾಗ ಆತನಿಗೆ ಜನರ ವಿರೋಧ



೩ ಆಗ ನಾಲ್ಕು ಮಂದಿಯಿಂದ ಹೊರಲ್ಪಟ್ಟ ಒಬ್ಬ ಪಕ್ಷವಾಯುರೋಗಿಯನ್ನು ಅವನ ಬಳಿಗೆ ತೆಗೆದು ಕೊಂ
೪ ಡು ಬಂದರು. ಸಮೂಹದ ನಿಮಿತ್ತ ಅವನ ಸಮೀಪಕ್ಕೆ ಬರಲಾರದೆ, ಅವನು ಇದ್ದಲ್ಲಿಯ ಮಾಳಿಗೆ ತೆಗೆ
೫ ದು, ಕೊರೆದು, ಆ ಪಕ್ಷವಾಯುರೋಗಿ ಬಿದ್ದಿರುವ ಮಂಚವನ್ನು ಇಳಿಸಿದರು. ಯೇಸು ಅವರ ವಿಶ್ವಾಸ
ವನ್ನು ನೋಡಿ, ಆ ಪಕ್ಷವಾಯುರೋಗಿಗೆ, ಮಗನೇ, ನಿನ್ನ ಪಾಪಗಳು ನಿನಗೆ ಪರಿಹರಿಸಲ್ಪಟ್ಟವೆ, ಅಂದನು.
೬, ೭ ಆದರೆ ಶಾಸ್ತ್ರಿಗಳಲ್ಲಿ ಕೆಲವರು ಅಲ್ಲಿ ಕೂತು ಕೊಂಡು, ಇವನು ಯಾಕೆ ಹೀಗೆ ದೂಷಣೆ ಹೇಳುತ್ತಾನೆ?
ದೇವರೊಬ್ಬನೇ ಹೊರ್ತು ಮತ್ತ್ಯಾವನು ಪಾಪಗಳನ್ನು ಪರಿಹರಿಸ ಬಲ್ಲನು? ಎಂದು ತಮ್ಮ ಹೃದಯಗಳಲ್ಲಿ
೮ ಆಲೋಚಿಸುತ್ತಾ ಇದ್ದರು. ಸಂಗಡಲೇ ಯೇಸು, ಹೀಗೆ ತಮ್ಮಲ್ಲಿ ಆಲೋಚಿಸುತ್ತಾರೆಂದು, ತನ್ನ ಆತ್ಮದಲ್ಲಿ
ತಿಳುಕೊಂಡು, ಅವರಿಗೆ ಹೇಳಿದ್ದೇನಂದರೆ, ನಿಮ್ಮ ಹೃದಯಗಳಲ್ಲಿ ಯಾಕೆ ಇವುಗಳನ್ನು ಆಲೋಚಿಸಿ ಕೊ
೯ ಳ್ಳುತ್ತೀರಿ? ಯಾವದು ಸುಲಭ? ಪಕ್ಷವಾಯುರೋಗಿಗೆ, ನಿನ್ನ ಪಾಪಗಳು ಪರಿಹರಿಸಲ್ಪಟ್ಟವೆ, ಅನ್ನುವ
೧೦ ದೋ? ಎದ್ದು, ನಿನ್ನ ಮಂಚವನ್ನು ಎತ್ತಿ ಕೊಂಡು ನಡಿ, ಅನ್ನುವದೋ? ಆದರೆ ಭೂಮಿಯ ಮೇಲೆ ಪಾ
ಪಗಳನ್ನು ಪರಿಹರಿಸುವದಕ್ಕೆ ಮನುಷ್ಯನ ಮಗನಿಗೆ ಅಧಿಕಾರ ಉಂಟೆಂದು ನೀವು ತಿಳಿಯುವ ಹಾಗೆ, ಅವನು
೧೧ ಪಕ್ಷವಾಯುರೋಗಿಗೆ ಎದ್ದು, ನಿನ್ನ ಮಂಚವನ್ನು ಎತ್ತಿ ಕೊಂಡು, ನಿನ್ನ ಮನೆಗೆ ಹೋಗೆಂದು ನಿನಗೆ
೧೨ ಹೇಳುತ್ತೇನೆ, ಅಂದನು. ಸಂಗಡಲೇ ಅವನು ಎದ್ದು, ತನ್ನ ಮಂಚವನ್ನು ಎತ್ತಿ ಕೊಂಡು, ಎಲ್ಲರ ಮುಂದೆ
ಹೊರಟು ಹೋದನು. ಆದಕ್ಕೆ ಎಲ್ಲರೂ ಭ್ರಮಿಸಿ, ನಾವು ಇಂಥಾದ್ದನ್ನು ಎಂದೂ ನೋಡಲಿಲ್ಲವೆಂದು,
ದೇವರನ್ನು ಮಹಿಮೆ ಪಡಿಸಿದರು.

ಮತ್ತಾಯನು ಕರೆಯಲ್ಪಟ್ಟದ್ದು; ಅವನ ಮನೆಯಲ್ಲಿ ನಡೆದ ಔತಣದಲ್ಲಿ ಉಪವಾಸವನ್ನು ಕುರಿತು ಸಂಭಾಷಿಸಿದ್ದು.

೧೩ ಅವನು ತಿರಿಗಿ ಸಮುದ್ರದ ಕಡೆಗೆ ಹೊರಟು ಹೋದನು; ಮತ್ತು ಸಮೂಹವೆಲ್ಲಾ ಅವನ ಬಳಿಗೆ ಬಂದಾ
ಗ, ಅವರಿಗೆ ಬೋಧಿಸಿದನು.
೧೪ [1]ಹಾದು ಹೋಗುವಾಗ [2]ಅಲ್ಫಾಯನ ಮಗನಾದ ಲೇವಿಯು ಸುಂಕಕ್ಕೆ ಕೂತಿರುವದನ್ನು ನೋಡಿ,
ಅವನಿಗೆ, ನನ್ನನ್ನು ಹಿಂಬಾಲಿಸು, ಅಂದನು. ಅವನು ಎದ್ದು, ಅವನನ್ನು ಹಿಂಬಾಲಿಸಿದನು.
೧೫ ಯೇಸು ಅವನ ಮನೆಯಲ್ಲಿ ಊಟಕ್ಕೆ ಕೂತಿರುವಾಗ ಆದದ್ದೇನಂದರೆ, ಅವನ ಸಂಗಡಲೂ ಅವನ ಶಿಷ್ಯರ
ಸಂಗಡಲೂ ಅನೇಕ ಸುಂಕದವರೂ ಪಾಪಿಷ್ಠರೂ ಕೂತು ಕೊಂಡಿದ್ದರು; ಯಾಕಂದರೆ ಅನೇಕರಾಗಿ ಅವ
ನನ್ನು ಹಿಂಬಾಲಿಸಿದರು.

ಉಂಟಾಯಿತು. ಮೊದಲು: ಆತನು ಪಕ್ಷವಾಯುವಿನವನನ್ನು ಸ್ವಸ್ಥ ಪಡಿಸಿ, ಪಾಪವನ್ನು ಮನ್ನಿಸುವ ಅಧಿಕಾರವು ತನಗುಂಟೆಂದು ಪ್ರಕಟ ಮಾಡಿದ್ದರಿಂದಲೂ, (೩—೧೨.) ಎರಡನೇದು: ಲೇವಿಯ ಮನೆಯಲ್ಲಿ ಸುಂಕದವರ ಸಂಗಡ ಭೋಜಿಸಿದ್ದರಿಂದಲೂ, (೧೩—೧೭.) ಮೂರನೇದು: ಉಪವಾಸ ಮಾಡಲು ಅಪ್ಪಣೆ ಕೊಡದೆ ಇದ್ದದರಿಂದಲೂ, (೧೮—೨೨.) ನಾಲ್ಕನೇದು: ಹಿರಿಯರ ಸಂಪ್ರದಾಯಕ್ಕೆ ವಿರೋಧವಾಗಿ ಸಬ್ಬತಿನಲ್ಲಿ ತೆನೆಗಳನ್ನು ಕಿತ್ತು ತಿಂದ ಶಿಷ್ಯರಿಗೆ ಸಹಾಯವಾಗಿ ಮಾತಾಡಿದ್ದರಿಂದಲೂ, (೨೩—೨೮.) ಆ ದಿವಸದಲ್ಲಿ ಬಣಗಿದ ಕೈಯುಳ್ಳವನನ್ನು ಗುಣ ಮಾಡಿದ್ದರಿಂದಲೂ, (೩. ೧—೫.) ಆತನನ್ನು ಜನರು ವಿರೋಧಿಸಿದರು. ಅದರಿಂದಲಾತನು ಹೊರಟು ತಿಬೇರಿಯ ಸಮುದ್ರದ ಪೂರ್ವ ಕಡೆಗೆ ಹೋದನು. ಸಮೂಹಗಳು ಆತನನ್ನು ಹಿಂಬಾಲಿಸಿದವು. ಅವರಲ್ಲಿದ್ದ ರೋಗಿಷ್ಠರನ್ನು ಸ್ವಸ್ಥ ಮಾಡಿದನು. (೭—೧೨.) ಮಾರ್ಕ. ೨. ೧—೧೨. ವಚನಗಳ ವ್ಯಾಖ್ಯಾನವನ್ನು ಲೂಕ. ೫. ೧೭—೨೬. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

1. ೧೪—೨೨. ವಚನಗಳ ವ್ಯಾಖ್ಯಾನವನ್ನು ಮತ್ತಾ. ೯. ೯—೧೭. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

2. ಈ ಅಲ್ಫಾಯನು ಯಾಕೋಬನ ತಂದೆಯಾದ ಅಲ್ಫಾಯನಲ್ಲ. (ಮತ್ತಾ. ೧೦. ೩.) ಹಾಗಿದ್ದರೆ ಮತ್ತಾಯನೂ ಯಾಕೋಬನೂ ಸಹೋದರರಾಗಿರುವರು. ಅವರು ಸಹೋದರರಾಗಿದ್ದರೆಂದು ಎಲ್ಲಿಯೂ ಹೇಳಲ್ಪಡಲಿಲ್ಲ. ಮತ್ತಾಯನ ಸುವಾರ್ತೆಯಲ್ಲಿ ಸುಂಕದವನಾದ ಮತ್ತಾಯನೆಂದು ಹೇಳಿರಲು, ಇದರಲ್ಲಿಯೂ ಲೂಕನ ಸುವಾರ್ತೆಯಲ್ಲಿಯೂ ಲೇವಿ ಎಂದು ಹೇಳಿದೆ. ಲೇವಿ ಎಂಬುವದು ಅವನ ಹಳೇ ಹೆಸರಾಗಿರ ಬಹುದು. ಅವನು ಅಪೊಸ್ತಲನಾದ ತರುವಾಯ ಮತ್ತಾಯನೆಂಬ ಹೆಸರು ಬಂದಿರ ಬಹುದು. ಮತ್ತಾಯ ಅಂದರೆ ದೇವವರವೆಂಬ ಅರ್ಥವು. ಸುಂಕದವನಾಗಿದ್ದ ಅವನು ಕರ್ತನಿಗೆ ದಾಸನಾಗುವಂತೆ ಕೃಪೆ ಹೊಂದಿದ್ದರಿಂದ ಅವನಿಗೆ ಆ ಹೆಸರು ತಕ್ಕದ್ದಾಗಿದೆ.

೧೬ ಆಗ ಶಾಸ್ತ್ರಿಗಳೂ ಫರಿಸಾಯರೂ, ಅವನು ಸುಂಕದವರ ಪಾಪಿಷ್ಠರ ಸಂಗಡ ಉಣ್ಣುವದನ್ನು ನೋಡಿ,
ಅವನ ಶಿಷ್ಯರಿಗೆ, ಅವನು ಸುಂಕದವರ ಪಾಪಿಷ್ಠರ ಸಂಗಡ ಉಂಡು, ಕುಡಿಯುವದೇನು? ಅಂದರು.
೧೭ ಯೇಸು ಅದನ್ನು ಕೇಳಿ, ಸ್ವಸ್ಥವಾಗಿರುವವರಿಗಲ್ಲ, ಅಸೌಖ್ಯವಾಗಿರುವವರಿಗೆ ವೈದ್ಯನು ಬೇಕು; ನಾನು ನೀತಿ
ವಂತರನ್ನಲ್ಲ, ಪಾಪಿಷ್ಠರನ್ನು ಮಾನಸಾಂತರಕ್ಕೆ ಕರೆಯ ಬಂದಿದ್ದೇನೆಂದು ಅವರಿಗೆ ಹೇಳಿದನು.

೧೮ ಇದಲ್ಲದೆ ಯೋಹಾನನ ಶಿಷ್ಯರೂ ಫರಿಸಾಯರ ಶಿಷ್ಯರೂ ಉಪವಾಸ ಮಾಡುತ್ತಿರಲಾಗಿ, [1]ಅವನ ಬಳಿಗೆ
ಬಂದು, ಯೋಹಾನನ ಶಿಷ್ಯರೂ ಫರಿಸಾಯರ ಶಿಷ್ಯರೂ ಉಪವಾಸ ಮಾಡುವದೂ, ನಿನ್ನ ಶಿಷ್ಯರು ಉಪ
ವಾಸ ಮಾಡದೆ ಇರುವದೂ, ಯಾಕೆ? ಅಂದರು.

೧೯ ಯೇಸು ಅವರಿಗೆ ಹೇಳಿದ್ದೇನಂದರೆ, ಮದಲಿಂಗನು ಅವರ ಸಂಗಡ ಇರುವಾಗ ಮದುವೆಯವರು ಉಪವಾಸ
ಮಾಡಲಾಗುವದೋ? ಮದಲಿಂಗನು ಅವರ ಸಂಗಡ ಇರುವಷ್ಟು ಕಾಲ ಉಪವಾಸ ಮಾಡಲಾಗದು.
೨೦ ಆದರೆ ಮದಲಿಂಗನು ಅವರ ಬಳಿಯಿಂದ ವೈಯಲ್ಪಡುವ ದಿವಸಗಳು ಬರುವವು; ಆಗ ಆ ದಿವಸಗಳಲ್ಲಿ
೨೧ ಉಪವಾಸ ಮಾಡುವರು. ಮತ್ತು ಹಳೇ ವಸ್ತ್ರಕ್ಕೆ ಹೊಸ ಬಟ್ಟೆಯ ತುಂಡು ಯಾವನೂ ಹಚ್ಚುವದಿಲ್ಲ;
ಹಚ್ಚಿದರೆ, ಹೊಸದಾದ ಅದರ ತ್ಯಾಪೆಯು ಹಳೇದನ್ನು ಹಿಂಜುವದರಿಂದ ಹರಕು ಹೆಚ್ಚಾಗುವದು.
೨೨ ಮತ್ತು ಹೊಸ ದ್ರಾಕ್ಷೇ ರಸವನ್ನು ಹಳೇ ಬುದ್ದಲಿಗಳಲ್ಲಿ ಯಾವನೂ ಹಾಕುವದಿಲ್ಲ; ಹಾಕಿದರೆ, ಹೊಸ
ದ್ರಾಕ್ಷೇ ರಸವು ಬುದ್ದಲಿಗಳನ್ನು ಒಡೆದು ಬಿಡುವದು; ದ್ರಾಕ್ಷೇ ರಸವು ಚೆಲ್ಲಿ, ಬುದ್ದಲಿಗಳು ಕೆಟ್ಟು ಹೋಗು
ವವು; ಆದರೆ ಹೊಸ ದ್ರಾಕ್ಷೇ ರಸವನ್ನು ಹೊಸ ಬುದ್ದಲಿಗಳಲ್ಲಿ ಹಾಕ ಬೇಕು.

ಸಬ್ಬತಿನಲ್ಲಿ ಶಿಷ್ಯರು ತೆನೆಗಳನ್ನು ಕಿತ್ತದ್ದಕ್ಕೂ, ಕ್ರಿಸ್ತನು ತಾನು ಸಬ್ಬತಿನಲ್ಲಿ ರೋಗಗಳನ್ನು ವಾಶಿ ಮಾಡಿದ್ದಕ್ಕೂ ಬಂದ ಆಕ್ಷೇಪಣೆಯನ್ನು ಪರಿಹರಿಸಿದ್ದು; ಫರಿಸಾಯರು ಆತನನ್ನು ಕೊಲ್ಲ ಹುಡುಕಿದಾಗ ಅವರಿಗೆ ತೊಲಗಿ ಹೋದದ್ದು; ಜನಸಮೂಹಗಳು ಆತನನ್ನು ಹಿಂಬಾಲಿಸಿದ್ದು.

೨೩ [2]ಇದಲ್ಲದೆ ಅವನು ಸಬ್ಬತಿನಲ್ಲಿ ಪೈರಿನ ಹೊಲಗಳನ್ನು ದಾಟಿ ಹೋಗುವಾಗ ಏನಾಯಿತಂದರೆ, ಅವನ
೨೪ ಶಿಷ್ಯರು ನಡೆಯುತ್ತಾ ತೆನೆಗಳನ್ನು ಕೀಳಲಾರಂಭಿಸಿದರು. ಫರಿಸಾಯರು ಅವನಿಗೆ, ಇಗೋ, ಅವರು
ಸಬ್ಬತಿನಲ್ಲಿ ಮಾಡ ಬಾರದ್ದನ್ನು ಮಾಡುವದೇನು? ಅನ್ನಲಾಗಿ;
೨೫ ಅವನು ಅವರಿಗೆ, ದಾವೀದನು ಅಗತ್ಯವಿದ್ದಾಗ, ಅವನೂ ಅವನ ಸಂಗಡ ಇದ್ದವರೂ ಹಸಿದಾಗ, ಏನು
೨೬ ಮಾಡಿದನೆಂದೂ, ಅವನು ಪ್ರಧಾನ ಯಾಜಕನಾದ [3]ಅಬಿಯಾತರನ ಕಾಲದಲ್ಲಿ ದೇವರ ಮನೆಯಲ್ಲಿ ಪ್ರವೇ
ಶಿಸಿ, ಯಾಜಕರು ಹೊರ್ತು ಮತ್ತಾರ್ಯರೂ ತಿನ್ನ ಬಾರದ ಸಮ್ಮುಖದ ರೊಟ್ಟಿಗಳನ್ನು ತಿಂದು, ತನ್ನ ಸಂಗಡ
೨೭ ಇದ್ದವರಿಗೆ ಸಹ ಕೊಟ್ಟನೆಂದೂ ನೀವು ಎಂದಾದರೂ ಓದಲಿಲ್ಲವೋ? ಅಂದನು. ಮತ್ತು ಅವರಿಗೆ, ಮನು
೨೮ ಷ್ಯನು ಸಬ್ಬತಿಗೋಸ್ಕರವಲ್ಲ, [4]ಸಬ್ಬತು ಮನುಷ್ಯನಿಗೋಸ್ಕರ ಉಂಟಾಯಿತು. ಹೀಗಿರಲಾಗಿ, ಮನುಷ್ಯನ
ಮಗನು ಸಬ್ಬತಿಗೂ ಕರ್ತನಾಗಿದ್ದಾನೆ, ಅಂದನು.

1. ಮತ್ತಾಯನ ಸುವಾರ್ತೆಯಲ್ಲಿ ಯೋಹಾನನ ಶಿಷ್ಯರು ಈ ಪ್ರಶ್ನೆ ಕೇಳಿದರೆಂದೂ, (ಮತ್ತಾ. ೯. ೧೪.) ಲೂಕನ ಸುವಾರ್ತೆಯಲ್ಲಿ ಫರಿಸಾಯರು ಕೇಳಿದರೆಂದೂ (ಲೂಕ. ೫. ೩೩.) ಬರದದೆ. ಈ ಸುವಾರ್ತೆಯಲ್ಲಿ ಆ ಎರಡೂ ಸರಿ ಎಂದು ತಿಳಿಯ ಬಹುದು.

2. ೨೩—೨೮. ವಚನಗಳ ವ್ಯಾಖ್ಯಾನವನ್ನು ಮತ್ತಾ. ೧೨. ೧—೮. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

3. ಆ ಕಾಲದಲ್ಲಿ ಅಹಿಮೇಲೆಕನು ಪ್ರಧಾನ ಯಾಜಕನಾಗಿದ್ದನು. (೧ಸಮು. ೨೧. ೧—೬.) ಹಾಗಿರಲಾಗಿ ಅಬಿಯಾತರನೆಂದು ಇಲ್ಲಿ ಯಾಕೆ ಹೇಳಲ್ಪಟ್ಟಿತೆಂದು ಒಂದು ಆಕ್ಷೇಪಣೆ ಹುಟ್ಟುತದೆ. ಯೆಹೂದ್ಯರಲಿ ಸಾಧಾರಣವಾಗಿ ಒಬ್ಬನಿಗೆ ಎರಡು ಹೆಸರುಗಳು ಇರುವ ಪ್ರಕಾರ ಅಹಿಮೇಲೆಕನಿಗೆ ಅಬಿಯಾತರನೆಂಬ ಹೆಸರು ಸಹ ಇರ ಬಹುದು. ಇಲ್ಲದಿದ್ದರೆ ದಾವೀದನು ಸಮ್ಮುಖದ ರೊಟ್ಟಿಗಳನ್ನು ತಿಂದಾಗ ಅಬಿಯಾತರನು ಕೂಡ ಇದ್ದದರಿಂದಲೂ, (೧ಸಮು. ೨೨. ೨೨.) ಅವನ ತಂದೆಯು ಕೊಲ್ಲಲ್ಪಟ್ಟಾಗ ಅವನು ಪ್ರಧಾನ ಯಾಜಕನ ಪಟ್ಟವನ್ನು ಹೊಂದಿದ್ದರಿಂದಲೂ, ದಾವೀದನ ಚರಿತ್ರೆಯಲ್ಲಿ ಅಬಿಯಾತರನ ಹೆಸರು ಆಗಾಗ್ಯೆ ಬರುವದರಿಂದಲೂ, ಈ ಸುವಾರ್ತೆಯಲ್ಲಿ ಅದೇ ಹೆಸರನ್ನು ಹೇಳಿ ಇದೆ.

4. ಮತ್ತಾ. ೧೨. ೮. ವಚನದ ವ್ಯಾಖ್ಯಾನದಲ್ಲಿ ನೋಡ ಬೇಕು. ಸಬ್ಬತನ್ನು ವ್ಯರ್ಥ ಭಕ್ತಿ ಆಚಾರಗಳಿಂದ ಆಚರಿಸುವವರಿಗೂ, ಆ ದಿವಸವನ್ನು ತಮ್ಮ ಭಕ್ತಿಯ ವೃದ್ಧಿಗೆ ಹೇತುವೆಯಾಗಿ ಆಚರಿಸದೆ,



**3.** [1]ಅವನು ತಿರಿಗಿ ಸಭೆಮನೆಯಲ್ಲಿ ಪ್ರವೇಶಿಸಿದಾಗ, ಅಲ್ಲಿ ಒಣಗಿದ ಕೈಯುಳ್ಳ ಒಬ್ಬ ಮನುಷ್ಯನಿದ್ದನು.
೨ ಆಗ ಅವನ ಮೇಲೆ ತಪ್ಪು ಹೊರಿಸುವ ಹಾಗೆ, ಸಬ್ಬತಿನಲ್ಲಿ ಅವನನ್ನು ಸ್ವಸ್ಥ ಮಾಡುವನೇನೋ ಎಂದು,
ಅವನನ್ನು ಹೊಂಚಿ ನೋಡಿದರು.

೩ ಆಗಲವನು ಆ ಒಣಗಿದ ಕೈಯುಳ್ಳ ಮನುಷ್ಯನಿಗೆ, ಎದ್ದು, ಮಧ್ಯದಲ್ಲಿ ನಿಂತುಕೋ ಎಂದು ಹೇಳಿ,
೪ ಅವರಿಗೆ, ಸಬ್ಬತಿನಲ್ಲಿ ಒಳ್ಳೇದನ್ನು ಮಾಡುವದೋ? ಕೆಟ್ಟದ್ದನ್ನು ಮಾಡುವದೋ? ಪ್ರಾಣವನ್ನು ರಕ್ಷಿಸುವದೋ?
೫ [2]ಕೊಲ್ಲುವದೋ? ಯಾವದು ನ್ಯಾಯ? ಅಂದನು. ಆದರೆ ಅವರು ಸುಮ್ಮನಿದ್ದರು. ಆಗಲವನು ಅವರ
ಹೃದಯದ ಕಾಠಿಣ್ಯದ ನಿಮಿತ್ತ ಮಹಾ ದುಃಖ ಪಟ್ಟು, [3]ಕೋಪದಿಂದ ಸುತ್ತಲು ಅವರನ್ನು ನೋಡಿ,
ಆ ಮನುಷ್ಯನಿಗೆ, ನಿನ್ನ ಕೈ ಚಾಚು, ಅಂದನು. ಚಾಚಿದಾಗ, ಅವನ ಕೈ ಮತ್ತೊಂದರ ಹಾಗೆ ಸ್ವಸ್ಥವಾ
ಯಿತು.

೬ ಸಂಗಡಲೇ [4]ಫರಿಸಾಯರು ಹೊರಟು ಹೋಗಿ, ಅವನನ್ನು ಸಂಹರಿಸ ಬೇಕೆಂದು, ಹೆರೋದ್ಯರ ಸಂಗಡ
ಅವನಿಗೆ ವಿರೋಧವಾಗಿ ಆಲೋಚನೆ ಮಾಡಿದರು.

೭ ಮತ್ತು ಯೇಸು ತನ್ನ ಶಿಷ್ಯರ ಸಂಗಡ ಸಮುದ್ರದ ಬಳಿಗೆ ಹೋದನು. ಆಗ ಗಲಿಲಾಯದಿಂದಲೂ ಯೆ
೮ ಹೂದದಿಂದಲೂ, ಯೆರೂಸಲೇಮಿನಿಂದಲೂ, [5]ಇದೂಮ್ಯದಿಂದಲೂ, ಯೊರ್ದನಿನ ಆಚೆಯಿಂದಲೂ, ಬಹು
ಸಮೂಹವು ಅವನನ್ನು ಹಿಂಬಾಲಿಸಿತು. ಮತ್ತು ತೂರ್ ಸಿದೋನ್ ಶೀಮೆಗಳವರು, ಅವನ ಕ್ರಿಯೆಗಳ
ಸುದ್ದಿ ಕೇಳಿ, ಬಹು ಸಮೂಹವಾಗಿ [6]ಅವನ ಬಳಿಗೆ ಬಂದರು.

೯ ಆಗಲವನು ಸಮೂಹದ ನಿಮಿತ್ತ, ತನ್ನನ್ನು ಒತ್ತದ ಹಾಗೆ, [7]ದೋಣಿಯು ತನಗೆ ಕಾದು ಕೊಂಡಿರ ಬೇ
೧೦ ಕೆಂದು, ತನ್ನ ಶಿಷ್ಯರಿಗೆ ಹೇಳಿದನು; ಯಾಕಂದರೆ ಅವನು ಅನೇಕರನ್ನು ಸ್ವಸ್ಥ ಮಾಡಿದ್ದರಿಂದ ಜಾಡ್ಯಗಳುಂ
೧೧ ಟಾದವರಷ್ಟು, ಅವನನ್ನು ಮುಟ್ಟ ಬೇಕೆಂದು, ಅವನ ಮೇಲೆ ಬೀಳುತ್ತಿದ್ದರು. ಅಶುದ್ಧಾತ್ಮಗಳು ಸಹ ಅವ
೧೨ ನನ್ನು [8]ನೋಡುವಾಗ, ಅವನಿಗೆ ಅಡ್ಡ ಬಿದ್ದು, ನೀನೇ ದೇವರ ಮಗನೆಂದು ಕೂಗಿದವು. ಆದರೆ ತನ್ನನ್ನು
[9]ಪ್ರಸಿದ್ಧಿ ಮಾಡದ ಹಾಗೆ, ಅವರನ್ನು ಬಹಳವಾಗಿ ಗದರಿಸಿದನು.

ಆಸಡ್ಡೆ ಮಾಡುವವರಿಗೂ ಈ ವಾಕ್ಯವು ಒಳ್ಳೇ ಪ್ರಸಂಗವಾಗಿದೆ. ಸಬ್ಬತನ್ನು ಏರ್ಪಡಿಸಿದ್ದು ಯೆಹೂದ್ಯರ ಆಚರಣೆಗೆ ಶೇರಿದ್ದಲ್ಲ. ಮನುಷ್ಯನು ಸೃಷ್ಟಿಸಲ್ಪಟ್ಟಾಗ, ಅದು ಅವನಿಗೂ ಅವನ ಸಂತತಿಯವರಿಗೂ ಆತ್ಮಪ್ರಯೋಜನ ಉಂಟು ಮಾಡುವ ಸಂಭ್ರಮದ ದಿವಸವಾಗಿ, ದೇವರು ದಯಪಾಲಿಸಿದ ದಿವಸವಾಗಿದೆ. ಅದನ್ನು ಆಚರಿಸುವವರಿಗೆ ದೇವರ ಆಶೀರ್ವಾದವುಂಟು.

1. ೧—೬. ವಚನಗಳ ವ್ಯಾಖ್ಯಾನವನ್ನು ಮತ್ತಾ. ೧೨. ೧೦—೧೪. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

2. ಜೀವವನ್ನು ಕಾಪಾಡ ತಕ್ಕ ಸಮಯವೂ ಶಕ್ತಿಯೂ ಇರುವಾಗ, ಹಾಗೆ ಮಾಡದಿದ್ದರೆ, ಜೀವವನ್ನು ಕೊಲ್ಲುವ ಹಾಗಿರುವದು. (ಸಾಮತಿ. ೨೪. ೧೧, ೧೨.)

3. ಪಾಪಾತ್ಮನ ಪರಿತಾಪವಾದ ಸ್ಥಿತಿಯನ್ನು ನೋಡಿ ದುಃಖಪಡುವದಲ್ಲದೆ, ಅವನ ಕಠಿಣತ್ವವನ್ನು ನೋಡಿ ಕೋಪವನ್ನು ಸಹ ಹೊಂದುವದೂ ತೋರಿಸುವದೂ ನ್ಯಾಯವಲ್ಲವೋ? ಯೇಸು ಕೋಪದಿಂದ ನೋಡಿದನೆಂದು ಈ ಸುವಾರ್ತೆಯಲ್ಲಿ ಮಾತ್ರ ಹೇಳಿ ಇದೆ.

4. ಫರಿಸಾಯರೂ ಹೆರೋದ್ಯರೂ ಒಬ್ಬರಿಗೊಬ್ಬರು ತೀರದ ಹಗೆಯುಳ್ಳವರಾಗಿದ್ದಾಗ್ಯೂ, ಸತ್ಯಪರನೂ ದಯಾಪರನೂ ಆದ ಕ್ರಿಸ್ತನನ್ನು ವಿರೋಧಿಸುವದರಲ್ಲಿ ಉಭಯತ್ರರೂ ಐಕ್ಯವಾದರು.

5. ಇದೂಮ್ಯ ದೇಶವು ಯೆಹೂದ್ಯ ದೇಶಕ್ಕೆ ದಕ್ಷಿಣ ಕಡೆ ಇತ್ತು.

6. ಅಷ್ಟು ಜನಸಮೂಹಗಳು ಆತನ ಬಳಿಗೆ ಬಂದದ್ದನ್ನು ನೋಡುವಾಗ ಆತನ ಕೀರ್ತಿ ಎಲ್ಲಿಯೂ ಪ್ರಸಿದ್ಧಿಯಾಗಿತ್ತೆಂದು ತಿಳಿಯ ಬಹುದು.

7. ಆ ದೋಣಿಯು ಕ್ರಿಸ್ತನೂ ಆತನ ಶಿಷ್ಯರೂ ಯಾವಾಗಲೂ ಯಾತ್ರೆ ಮಾಡುವದಕ್ಕೆ ಅವರ ವಶದಲ್ಲಿ ಇತ್ತೆಂದು ತೋರುತ್ತದೆ. (ಮತ್ತಾ. ೮. ೨೩.)

8. ದೆವ್ವ ಹಿಡಿದವರು ಕ್ರಿಸ್ತನನ್ನು ಕಂಡಾಗಲೇ ಆತನು ದೇವರ ಕುಮಾರನೆಂದು ತಿಳಿದು, ಆತನ ಪಾದಗಳ ಮುಂದೆ ಸಾಷ್ಟಾಂಗ ಬಿದ್ದು ವಂದಿಸಿದರು. ಆತನ ಮಹತ್ವವು ಪಿಶಾಚಿಗಳಿಗೆ ಚನ್ನಾಗಿ ತಿಳಿಯುವದು.

9. ಮಾರ್ಕ. ೧. ೨೫. ಮತ್ತಾ. ೧೬. ೨೦. ವಚನಗಳ ವ್ಯಾಖ್ಯಾನ ನೋಡ ಬೇಕು.

ಕ್ರಿಸ್ತನು ಹನ್ನೆರಡು ಮಂದಿ ಅಪೊಸ್ತಲರನ್ನು ಆದು ಕೊಂಡು, ಏರ್ಪಡಿಸಿದ್ದು.

೧೩, ೧೪ [1]ಅವನು [2]ಬೆಟ್ಟವನ್ನೇರಿ, ಬೇಕಾದವರನ್ನು ಕರೆದನು. ಅವರು ಅವನ ಬಳಿಗೆ ಬಂದಾಗ, ತನ್ನ ಸಂಗಡ
೧೫ ಇರುವ ಹಾಗೆಯೂ, ಸಾರುವದಕ್ಕೆ ತಾನು ಕಳುಹಿಸುವ ಹಾಗೆಯೂ, ರೋಗಗಳನ್ನು ಸ್ವಸ್ಥ ಮಾಡುವದ
ಕ್ಕೂ ದೆವ್ವಗಳನ್ನು ಹೊರಡಿಸುವದಕ್ಕೂ ಅಧಿಕಾರವುಳ್ಳವರಾಗುವ ಹಾಗೆಯೂ, [3]ಹನ್ನೆರಡು ಮಂದಿಯನ್ನು
ನೇಮಿಸಿದನು.

೧೬, ೧೭ ಮತ್ತು ಸೀಮೋನನಿಗೆ ಪೇತ್ರನೆಂಬ ಹೆಸರಿಟ್ಟನು. ಮತ್ತು ಜೆಬೆದಾಯನ ಮಗನಾದ ಯಾಕೋಬನ
ನ್ನೂ, ಯಾಕೋಬನ ಸಹೋದರನಾದ ಯೋಹಾನನನ್ನೂ, ಇವರಿಗೆ [4]ಬೊವನೆರ್ಗೆಸ್ ಎಂಬ ಹೆಸರಿಟ್ಟನು;
೧೮ ಅದೇನಂದರೆ ಗುಡುಗಿನ ಮಕ್ಕಳು; ಮತ್ತು ಅಂದ್ರೆಯನನ್ನೂ, ಫಿಲಿಪ್ಪನನ್ನೂ, ಬಾರ್ತೊಲೊಮಾಯನ
ನ್ನೂ, ಮತ್ತಾಯನನ್ನೂ, ತೋಮನನ್ನೂ, ಅಲ್ಫಾಯನ ಮಗನಾದ ಯಾಕೋಬನನ್ನೂ, ತದ್ದಾಯನನ್ನೂ,
೧೯ ಕಾನಾನ್ಯನಾದ ಸೀಮೋನನನ್ನೂ, ಅವನನ್ನು ಒಪ್ಪಿಸಿದ ಇಸ್ಕರಿಯೋತೆಂಬ ಯೂದನನ್ನೂ ನೇಮಿಸಿದನು.

ಕ್ರಿಸ್ತನನ್ನು ಆತನ ಮನೆಯವರು ಭ್ರಮೆಗೊಂಡಿದ್ದಾನೆಂದೂ, ಶಾಸ್ತ್ರಿಗಳು ದೆವ್ವ ಹಿಡಿದವನೆಂದೂ ದೂಷಿಸಿದ್ದಕ್ಕೆ ಕ್ರಿಸ್ತನು ಕೊಟ್ಟ ಉತ್ತರ.

೨೦ ಅವರು [5]ಮನೆಗೆ ಬಂದಾಗ, ಸಮೂಹವು ತಿರಿಗಿ ಕೂಡಿ ಬಂದದರಿಂದ, ಅವರು ರೊಟ್ಟಿ ತಿನ್ನುವದಾ
೨೧ ದರೂ ಆಗದೆ ಹೋಯಿತು. ಅವನ [6]ಜನರು ಅದನ್ನು ಕೇಳಿ, ಭ್ರಮೆಗೊಂಡಿದ್ದಾನೆಂದು ಹೇಳಿ, ಅವನನ್ನು
ಹಿಡಿಯ ಹೋದರು.

1. ತನ್ನ ಸಂಗಡ ಇರುವದಕ್ಕೂ, ತನ್ನನ್ನು ಕುರಿತು ಮತ್ತೊಬ್ಬರಿಗೆ ತಿಳಿಸುವದಕ್ಕೂ, ರಕ್ಷಕನು ಹನ್ನೆರಡು ಮಂದಿ ಅಪೊಸ್ತಲರನ್ನು ಈಗ ಏರ್ಪಡಿಸಿದನು. (೩. ೧೩—೧೯.) ಆತನನ್ನು ಹಿಂಬಾಲಿಸಿದ ಜನಸಮೂಹಗಳಲ್ಲಿ ಆತನ ಮನೆಯವರು ಆತನು ಭ್ರಮೆಗೊಂಡಿದ್ದಾನೆಂದೂ, ಯೆರೂಸಲೇಮಿನಲ್ಲಿದ್ದ ಅಧಿಕಾರಿಗಳು ಆತನು ದೆವ್ವ ಹಿಡಿದವನೆಂದೂ ಹೇಳಿದರು. (೨೦—೨೨.) ಆತನು ತನ್ನ ಶತ್ರುಗಳ ಬುದ್ಧಿಹೀನತ್ವವನ್ನೂ ಕಪಟವನ್ನೂ ತೋರಿಸಿ, ತನ್ನ ಬಂಧುಗಳ ಅವಿಶ್ವಾಸಕ್ಕಾಗಿ ಅವರನ್ನು ಗದರಿಸಿ, ತನ್ನ ಉತ್ತಮ ಶಿಷ್ಯರೇ ತನ್ನ ಬಂಧುಗಳೆಂದು ಹೇಳಿದನು. (೨೩—೩೫.)

2. ಮತ್ತಾ. ೫. ೧. ವಚನದ ವ್ಯಾಖ್ಯಾನ ನೋಡ ಬೇಕು.

3. ಹನ್ನೆರಡು ಮಂದಿ ಅಪೊಸ್ತಲರನ್ನು ನೇಮಿಸಿದನು. ಮತ್ತಾಯನ ಸುವಾರ್ತೆಯಲ್ಲಿ ಅವರು ಈಡೇರಿಸಿದ ಕೆಲಸದ ವಿಧವನ್ನೂ ಅದರ ಗುರಿಯನ್ನೂ ವಿಸ್ತಾರವಾಗಿ ಹೇಳಿ ಇದೆ. ಈ ಸುವಾರ್ತೆಯಲ್ಲಿ ಅವರು ನೇಮಿಸಲ್ಪಟ್ಟ ಕಾರಣವನ್ನು ಕ್ಲುಪ್ತವಾಗಿಯೂ ದಿಟ್ಟವಾಗಿಯೂ ಹೇಳಲ್ಪಟ್ಟದೆ. ಅವರು ತಮ್ಮ ಪರಮ ಗುರುವಿನೊಡನೆ ಇದ್ದು, ಆತನು ಬಹಿರಂಗವಾಗಿ ಬೋಧಿಸಿದ ಬೋಧನೆಗಳನ್ನೂ (ಮತ್ತಾ. ೫. ೭. ಸಂಧಿ.) ಅಂತರಂಗವಾಗಿ ಬೋಧಿಸಿದ ದಿವ್ಯ ಸತ್ಯಗಳನ್ನೂ (ಯೋಹಾ. ೧೪. ೧೬.) ಕೇಳಿ, ಆತನ ದಿವ್ಯ ಲಕ್ಷಣಗಳು, ಅದ್ಭುತ ಕ್ರಿಯೆಗಳು, ಕಷ್ಟಗಳು, ಮರಣವು, ಪುನರುತ್ಥಾನವು, ಇವುಗಳನ್ನೆಲ್ಲಾ ಕಂಡು, ಬೋಧಿಸಲ್ಪಟ್ಟು, ಆತನ ಕೃಪೆಯಿಂದಲೂ, ಆತ್ಮದ ಸಹಾಯದಿಂದಲೂ, ಆತನ ಚರಿತ್ರೆಯನ್ನು ಲೋಕದವರಿಗೆ ಹೇಳ ತಕ್ಕವರಾಗಿದ್ದರು. ಆತನ ಬಳಿಯ ಉಪದೇಶಿಸಲ್ಪಟ್ಟವರೇ ಹೊರ್ತು, ಆತನ ರಕ್ಷಣೆಯ ಮಹತ್ವಗಳನ್ನು ಹೇಳುವದಕ್ಕೆ ಮತ್ತ್ಯಾರೂ ತಕ್ಕವರಲ್ಲ.

4. "ಬೊವನೆರ್ಗೆಸ್" ಎಂಬುವದು ಅರಾಮ್ಯ ಭಾಷೆಯ ಶಬ್ದವು. ಅದರ ಅರ್ಥವು ಗುಡುಗಿನ ಮಕ್ಕಳು ಎಂಬುವದು. ಯಾಕೋಬನೂ ಯೋಹಾನನೂ ಮಹಾ ವೈರಾಗ್ಯವುಳ್ಳವರಾಗಿದ್ದರು. ತಮ್ಮ ಗುರುವನ್ನು ಅಂಗೀಕರಿಸದೆ ಹೋದ ಸಮಾರ್ಯರನ್ನು ಆಕಾಶದಿಂದ ಬೆಂಕಿ ಇಳಿದು ದಹಿಸ ಬೇಕೆಂದು ಹೇಳಿದ್ದನ್ನೂ, (ಲೂಕ. ೯. ೫೪.) ಕರ್ತನ ಬಲ ಎಡಪಾರ್ಶ್ವಗಳಲ್ಲಿ ಇರ ತಕ್ಕ ಘನವನ್ನು ತಮಗೆ ದಯ ಪಾಲಿಸ ಬೇಡಿ ಕೊಂಡದ್ದನ್ನೂ (ಮತ್ತಾ. ೨೦. ೨೧.) ನೋಡುವಾಗ ಅವರ ವೈರಾಗ್ಯವೂ ಆಶೆಯೂ ತೋರುತ್ತದೆ. ಸುವಾರ್ತೆ ಎಂಬ ತುತೂರಿಯನ್ನು ಊದುವದರಲ್ಲಿ ಗುಡುಗಿನಂತೆ ಶಬ್ದಿಸುವವರಾಗಿದ್ದದರಿಂದ ಅವರಿಗೆ ಆ ಹೆಸರು ಬಂತೆಂದು ಕೆಲವರು ನೆನಸುತ್ತಾರೆ.

5. ೧೯ನೇ ವಚನಕ್ಕೂ ೨೦ನೇ ವಚನಕ್ಕೂ ಮಧ್ಯೆ ನಡೆದ ಸಂಗತಿಗಳನ್ನು ಸುವಾರ್ತೆಗಳ ಸಂಗತಿಗಳ ಕ್ರಮದಲ್ಲಿ ४೦—४೬ನೇ ಪ್ರಕರಣಗಳಲ್ಲಿ ನೋಡ ಬಹುದು.

6. ಆತನ ಮನೆಯವರು ಆತನು ಭೋಜನ ಪಾನಗಳಿಲ್ಲದೆ, ಎಡೆ ಬಿಡದೆ ಪ್ರಸಂಗಿಸುವದನ್ನು ನೋಡಿ, ಆತನಿಗೆ ಬುದ್ಧಿ ಸ್ವಾಧೀನವಿಲ್ಲವೆಂದು ನೆನಸಿ, ಆತನು ಬೋಧಿಸುವದನ್ನು ನಿಲ್ಲಿಸುವ ಹಾಗೆ ಬಲವಂತ ಮಾಡ ಬಂದರು. (ಮತ್ತಾ. ೧೨. ४೬.) ಅವರು ಬಂದದ್ದನ್ನು ೩೧ನೇ ವಚನದಲ್ಲಿ ನೋಡ ಬಹುದು.



೨೨ ಮತ್ತು ಯೆರೂಸಲೇಮಿನಿಂದ ಇಳಿದು ಬಂದ [1]ಶಾಸ್ತ್ರಿಗಳು ಅವನಿಗೆ [2]ಬೆಲ್ಜೆಬೂಲುಂಟೆಂದೂ, ದೆವ್ವಗಳ
ಅಧಿಪತಿಯಿಂದ ದೆವ್ವಗಳನ್ನು ಹೊರಡಿಸುತ್ತಾನೆಂದೂ, ಹೇಳಿದರು.
೨೩ ಆಗಲವರನ್ನು ಹತ್ತಿರ ಕರೆದು, ಸಾಮ್ಯಗಳಿಂದ ಅವರಿಗೆ ಹೇಳಿದ್ದೇನಂದರೆ, ಸೈತಾನನು ಸೈತಾನನನ್ನು ಹೊ
೨೪ ರಡಿಸುವದು ಹ್ಯಾಗೆ? ಮತ್ತು ಒಂದು ರಾಜ್ಯವು ತನಗೆ ವಿರೋಧವಾಗಿ ಭೇದವಾದರೆ, ಆ ರಾಜ್ಯವು
೨೫ ನಿಲ್ಲಲಾರದು. ಮತ್ತು ಮನೆಯು ತನಗೆ ವಿರೋಧವಾಗಿ ಭೇದವಾದರೆ, ಆ ಮನೆಯು ನಿಲ್ಲಲಾರದು.
೨೬ ಮತ್ತು ಸೈತಾನನು ತನಗೆ ವಿರೋಧವಾಗಿ ಎದ್ದು, ಭೇದವಾದರೆ, ನಿಲ್ಲಲಾರನು; ಅವನಿಗೆ ಅಂತ್ಯವು ಬಂತು.
೨೭ ಯಾವನಾದರೂ ಬಲಿಷ್ಠನ ಮನೆಯಲ್ಲಿ ಹೊಕ್ಕು, ಅವನ ಸಾಮಾನುಗಳನ್ನು ಸುಲುಕೊಳ್ಳಲಾರನು. ಮೊ
ದಲು ಬಲಿಷ್ಠನನ್ನು ಕಟ್ಟಿ ಹಾಕ ಬೇಕಲ್ಲ? ಆಗಲವನ ಮನೆಯನ್ನು ಸುಲುಕೊಳ್ಳುವನು.
೨೮ ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಎಲ್ಲಾ ಪಾಪಗಳೂ, ಅವರು ದೂಷಿಸುವ ಎಲ್ಲಾ ದೂಷಣೆಗಳೂ,
೨೯ ಮನುಷ್ಯರ ಮಕ್ಕಳಿಗೆ ಪರಿಹರಿಸಲ್ಪಡುವವು; ಆದರೆ ಪರಿಶುದ್ಧಾತ್ಮವನ್ನು ದೂಷಿಸುವವನ್ಯಾವನೋ, ಅವ
೩೦ ನಿಗೆ ಎಂದೆಂದಿಗೂ ಪರಿಹಾರವಾಗುವದಿಲ್ಲ; ಆದರೆ ನಿತ್ಯ ಆಜ್ಞೆಗೊಳಗಾಗಿದ್ದಾನೆ. ಯಾಕಂದರೆ, ಅವನಿಗೆ
ಅಶುದ್ಧಾತ್ಮವುಂಟೆಂದು ಹೇಳಿ ಇದ್ದರು.
೩೧ ಆಗಲವನ ಸಹೋದರರೂ ತಾಯಿಯೂ ಬಂದು, ಹೊರಗೆ ನಿಂತು, ಅವನನ್ನು ಕರೇ ಕಳುಹಿಸಿದರು;
೩೨ ಆದರೆ ಅವನ ಸುತ್ತಲಾಗಿ ಸಮೂಹವು ಕೂತು ಕೊಂಡಿತ್ತು. ಹೀಗಿರಲಾಗಿ, ಇಗೋ, ನಿನ್ನ ತಾಯಿಯೂ
ಸಹೋದರರೂ ಹೊರಗೆ ಇದ್ದು, ನಿನ್ನನ್ನು ಹುಡುಕುತ್ತಾರೆಂದು, ಅವನಿಗೆ ಹೇಳಿದಾಗ;
೩೩ ಅವನು ಅವರಿಗೆ, ನನ್ನ ತಾಯಿಯೂ ನನ್ನ ಸಹೋದರರೂ ಯಾರು? ಎಂದು ಉತ್ತರ ಕೊಟ್ಟು,
೩೪ ತನ್ನ ಬಳಿಯಲ್ಲಿ ಕೂತು ಕೊಂಡವರನ್ನು [3]ಸುತ್ತಲಾಗಿ ನೋಡಿ, ಇಗೋ, ನನ್ನ ತಾಯಿಯೂ ನನ್ನ ಸಹೋ
೩೫ ದರರೂ. ಯಾಕಂದರೆ ದೇವರ ಚಿತ್ತವನ್ನು ಮಾಡುವವನ್ಯಾವನೋ ಅವನೇ ನನ್ನ ಸಹೋದರನೂ,
ಸಹೋದರಿಯೂ, ತಾಯಿಯೂ ಆಗಿದ್ದಾನೆ, ಅಂದನು.

ಬಿತ್ತುವವನು, ಅಂತರಂಗವಾಗಿ ಮೊಳೆತ ಬೀಜವು, ಸಾಸಿವೆ ಕಾಳು, ಇವುಗಳನ್ನು ಕುರಿತ ಸಾಮ್ಯಗಳು.

**4.** [4]ತಿರಿಗಿ ಅವನು ಸಮುದ್ರದ ಬಳಿಯಲ್ಲಿ ಬೋಧಿಸಲಾರಂಭಿಸಿದನು. ಬಹು ಸಮೂಹವು ಅವನ ಬಳಿಗೆ
ಕೂಡಿ ಬಂದದರಿಂದ, ಅವನು ಹಡಗವನ್ನೇರಿ, ಸಮುದ್ರದಲ್ಲಿ ಕೂತು ಕೊಂಡನು. ಮತ್ತು ಸಮೂಹವೆಲ್ಲಾ
ಸಮುದ್ರದ ಬಳಿಯಲ್ಲಿ ಭೂಮಿಯ ಮೇಲಿತ್ತು.
೨ ಆಗಲವನು ಸಾಮ್ಯಗಳಿಂದ ಅವರಿಗೆ ಬಹಳವಾಗಿ ಬೋಧಿಸಿ, ತನ್ನ ಬೋಧನೆಯಲ್ಲಿ ಅವರಿಗೆ ಹೇಳಿದ್ದೇನಂ
೩, ೪ ದರೆ, ಕೇಳಿರಿ; ಇಗೋ, ಬಿತ್ತುವವನು ಬಿತ್ತ ಹೊರಟನು. ಬಿತ್ತುವಾಗ ಆದದ್ದೇನಂದರೆ, ಕೆಲವು ಮಾ

1. ರಕ್ಷಕನ ದಿವ್ಯ ಬೋಧನೆಗಳು ಪ್ರಬಲವಾಗದಂತೆ ಅಭ್ಯಂತರಿಸುವ ಉದ್ದಿಶ್ಯ ಶಾಸ್ತ್ರಿಗಳು ಯೆರೂಸಲೇಮಿನಿಂದ ಬಂದು, ಜನರು ಆತನನ್ನು ಕುರಿತು ಒಳ್ಳೇ ಅಭಿಪ್ರಾಯಗೊಳ್ಳದಂತೆ, ಬೆಲ್ಜೆಬೂಲನಿಂದ ದೆವ್ವಗಳನ್ನು ಹೊರಡಿಸುತ್ತಾನೆ, ಅಂದರು. (ಮತ್ತಾ. ೧೨. ೨४. ಲೂಕ. ೧೧. ೧೫, ೨೨—೩೫. ಮತ್ತಾ. ೧೨. ೨४—೫೦. ವಚನಗಳ ವ್ಯಾಖ್ಯಾನ ನೋಡ ಬೇಕು.)

2. ಮತ್ತಾ. ೧೦. ೨೫. ವಚನದ ವ್ಯಾಖ್ಯಾನ ನೋಡ ಬೇಕು.

3. ೫ನೇ ವಚನದಲ್ಲಿ ಕೋಪದಿಂದ ನೋಡಿದನೆಂದೂ, ಈ ವಚನದಲ್ಲಿ ಸಂತೋಷದಿಂದ ನೋಡಿದನೆಂದೂ ಬರೆದದೆ. ಮಾರ್ಕನು ಮಾತ್ರ ಆತನ ಮುಖಛಾಯೆಯಲ್ಲಿ ತೋರಲ್ಪಟ್ಟ ಗುಣಗಳನ್ನು ಹೇಳುತ್ತಾನೆ. ಪಾಪಿಷ್ಠರ ಮೇಲೆ ಕರ್ತನ ಕೋಪದೃಷ್ಟಿಯೂ, ಭಕ್ತರ ಮೇಲೆ ಆತನ ಕೃಪಾದೃಷ್ಟಿಯೂ ತೋರುವದು.

4. ಕ್ರಿಸ್ತನ ಬಳಿಗೆ ಬಂದ ಜನರ ಗುಣಕ್ಕೆ ತಕ್ಕ ಹಾಗೆ ಆತನ ಬೋಧನೆಯಲ್ಲಿಯೂ ವ್ಯತ್ಯಾಸವು ತೋರಿತು. ಸಾಮ್ಯಗಳಿಂದ ಬೋಧಿಸಲಾರಂಭಿಸಿದನು. (४. ೧, ೨, ೩೩, ೩४. ಮತ್ತಾ. ೧೩. ೧, ೩. ವ್ಯಾಖ್ಯಾನ ನೋಡ ಬೇಕು.) ಬಿತ್ತುವವನು, (೩—೯.) ಅಂತರಂಗವಾಗಿ ಮೊಳೆತ ಬೀಜವು, (೨೬—೨೯.) ಸಾಸಿವೆ ಕಾಳು, (೩೦—೩೨.) ಇವುಗಳನ್ನು ಕುರಿತ ಸಾಮ್ಯಗಳು ಈ ಸಂಧಿಯಲ್ಲಿ ಉಂಟು. ಸಾಮ್ಯಗಳಾಗಿ ಬೋಧಿಸಿದ ಕಾರಣವನ್ನು ೧೩—೨೦ಲ್ಲಿಯೂ, ಅದರ ಫಲವನ್ನು ೨೧—೨೫ಲ್ಲಿಯೂ ನೋಡ ಬಹುದು. ಎರಡನೇ ಸಾಮ್ಯದಲ್ಲಿ ದಿವ್ಯ ಊಳಿಗಕ್ಕೆ ದೇವರ ಸಹಾಯವೂ ಮನುಷ್ಯರ ಸಾಧನೆಯೂ ಬೇಕು ಎಂದೂ, ಮೂರನೇ ಸಾಮ್ಯದಲ್ಲಿ ಕರ್ತನ ಕೆಲಸವು ನಿಶ್ಚಯವಾಗಿ ವೃದ್ಧಿ ಹೊಂದುವದೆಂದೂ ತೋರುತ್ತದೆ. (೧—೨೦. ವಚನಗಳ ವ್ಯಾಖ್ಯಾನವನ್ನು ಮತ್ತಾ. ೧೩. ೩—೨೩. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.)

೫ ರ್ಗದ ಹತ್ತರ ಬಿತ್ತು; ಆಕಾಶದ ಪಕ್ಷಿಗಳು ಬಂದು, ಅದನ್ನು ತಿಂದು ಬಿಟ್ಟವು. ಬೇರೆ ಕೆಲವು ಬಹಳ ಮಣ್ಣು
ಇಲ್ಲದ ಬಂಡೆಯ ಸ್ಥಳದಲ್ಲಿ ಬಿತ್ತು; ಅದಕ್ಕೆ ಆಳವಾದ ಮಣ್ಣು ಇಲ್ಲದ ಕಾರಣ, ಸಂಗಡಲೇ ಮೊಳಿಯಿತು;
೬ ಆದರೆ ಸೂರ್ಯನು ಮೂಡಿದಾಗ, ಅದು ಬೆಂದು, ಅದಕ್ಕೆ ಬೇರು ಇಲ್ಲದ್ದರಿಂದ ಒಣಗಿ ಹೋಯಿತು.
೭ ಬೇರೆ ಕೆಲವು ಮುಳ್ಳುಗಳಲ್ಲಿ ಬಿತ್ತು; ಮುಳ್ಳುಗಳು ಬೆಳೆದು, ಅದನ್ನು ಅಣಗಿಸಿದ್ದರಿಂದ ಅದು ಫಲ ಕೊಡ
೮ ಲಿಲ್ಲ. ಬೇರೆ ಕೆಲವು ಒಳ್ಳೇ ಭೂಮಿಯಲ್ಲಿ ಬಿದ್ದು, ಬೆಳೆದು, ಅಭಿವೃದ್ಧಿಯಾಗುವ ಫಲ ಕೊಟ್ಟಿತು; ಒಂದು
೯ ಮೂವತ್ತರಷ್ಟು, ಒಂದು ಅರವತ್ತರಷ್ಟು, ಒಂದು ನೂರರಷ್ಟು. ಆಗಲವನು ಅವರಿಗೆ, ಕೇಳ ಕಿವಿಗಳುಳ್ಳವನು
ಕೇಳಲಿ, ಅಂದನು.

೧೦ ಮತ್ತು ಏಕಾಂತದಲ್ಲಿರುವಾಗ, ಅವನ ಸುತ್ತಲಿರುವವರು ಹನ್ನೆರಡು ಮಂದಿಯ ಸಂಗಡ ಆ ಸಾಮ್ಯದ
೧೧ ವಿಷಯ ಅವನನ್ನು ಕೇಳಿದರು. ಅವನು ಅವರಿಗೆ ಹೇಳಿದ್ದೇನಂದರೆ, ದೇವರ ರಾಜ್ಯದ ಮರ್ಮವನ್ನು ತಿಳಿ
೧೨ ಯ ನಿಮಗೆ ಕೊಡಲ್ಪಟ್ಟದೆ; ಆದರೆ ಆ [1]ಹೊರಗಿನವರಿಗೆ—ಅವರು ಕಾಣಲೇ ಕಂಡು ನೋಡದ ಹಾಗೆ,
ಕೇಳಲೇ ಕೇಳಿ ಗ್ರಹಿಸದ ಹಾಗೆ, ತಿರುಗಿ ಕೊಂಡು ಪಾಪಪರಿಹಾರ ಹೊಂದದ ಹಾಗೆ— ಎಲ್ಲವು ಸಾಮ್ಯಗ
ಳಲ್ಲಿ ಆಗುತ್ತದೆ. (ಯೆಶಾ. ೬. ೯, ೧೦.)

೧೩ ಮತ್ತು ಅವರಿಗೆ ಹೇಳಿದ್ದು, ಈ ಸಾಮ್ಯವನ್ನು ಅರಿಯಿರಾ? ಹೀಗಿದ್ದರೆ, ಸಾಮ್ಯಗಳನ್ನೆಲ್ಲಾ ಹ್ಯಾಗೆ ತಿಳಿ
೧೪, ೧೫ ಯುವಿರಿ? ಬಿತ್ತುವವನು ವಾಕ್ಯವನ್ನು ಬಿತ್ತುತ್ತಾನೆ; ವಾಕ್ಯವು ಬಿತ್ತಲ್ಪಡುವ ಮಾರ್ಗದ ಬಳಿಯಲ್ಲಿ
ಇರುವವರು ಇವರೇ—ಕೇಳಿದ [2]ಕೂಡಲೆ ಸೈತಾನನು ಬಂದು, ಅವರ ಹೃದಯಗಳಲ್ಲಿ ಬಿತ್ತಲ್ಪಟ್ಟ ವಾಕ್ಯ
೧೬ ವನ್ನು ತೆಗೆಯುತ್ತಾನೆ. ಅದೇ ಪ್ರಕಾರ ಬಂಡೆಯ ಸ್ಥಳದಲ್ಲಿ ಬಿತ್ತಲ್ಪಡುವವರು ಯಾರಂದರೆ, ವಾಕ್ಯವನ್ನು
೧೭ ಕೇಳಿದ ಕೂಡಲೆ ಸಂತೋಷವಾಗಿ ಅದನ್ನು ಅಂಗೀಕರಿಸಿ, ತಮ್ಮಲ್ಲಿ ಬೇರು ಇಲ್ಲದೆ, ಸ್ವಲ್ಪ ಕಾಲಕ್ಕೆ ಮಾತ್ರ
ಇರುತ್ತಾರೆ. ತರುವಾಯ ವಾಕ್ಯದ ನಿಮಿತ್ತ ಉಪದ್ರವಾಗಲಿ ಹಿಂಸೆಯಾಗಲಿ ಉಂಟಾದರೆ, ಕೂಡಲೇ
೧೮, ೧೯ ಆಟಂಕ ಪಡುತ್ತಾರೆ. ಮುಳ್ಳುಗಳಲ್ಲಿ ಬಿತ್ತಲ್ಪಟ್ಟವರು ಯಾರಂದರೆ, ವಾಕ್ಯವನ್ನು ಕೇಳುವವರು; ತರುವಾ
ಯ ಈ ಲೋಕದ ಚಿಂತೆಗಳೂ ಐಶ್ವರ್ಯದ ಮೋಸವೂ ಮಿಕ್ಕಾದವುಗಳ ವಿಷಯವಾದ ಆಶೆಗಳೂ ಒಳಗೆ
೨೦ ಹೊಕ್ಕು, ವಾಕ್ಯವನ್ನು ಅಣಗಿಸುವದರಿಂದ ಅದು ನಿಷ್ಫಲವಾಗುತ್ತದೆ. ಒಳ್ಳೇ ಭೂಮಿಯ ಮೇಲೆ ಬಿತ್ತ
ಲ್ಪಟ್ಟವರು ಯಾರಂದರೆ, ವಾಕ್ಯವನ್ನು ಕೇಳಿ, ಅಂಗೀಕರಿಸಿ, ಒಂದು ಮೂವತ್ತರಷ್ಟೂ, ಒಂದು ಅರವತ್ತರಷ್ಟೂ,
ಒಂದು ನೂರರಷ್ಟೂ ಫಲ ಫಲಿಸುವವರು.

೨೧ ಮತ್ತು ಅವರಿಗೆ ಹೇಳಿದ್ದು, [3]ದೀಪವು ಬಳ್ಳದ ಕೆಳಗಾದರೂ, ಮಂಚದ ಕೆಳಗಾದರೂ, ಇಡಲ್ಪಡುವದಕ್ಕೆ
೨೨ ಬರುತ್ತದೋ? ದೀಪಸ್ತಂಭದ ಮೇಲೆ ಇಡಲ್ಪಡುವದಕ್ಕಲ್ಲವೋ? ಯಾಕಂದರೆ, ಬಹಿರಂಗವಾಗದಂಥ ಅಂತ
ರಂಗವಾದದ್ದು ಒಂದೂ ಇಲ್ಲ; ಮತ್ತು ಬಹಿರಂಗವಾಗುವದಕ್ಕೋಸ್ಕರವಲ್ಲದೆ ಏನೂ ಗುಪ್ತವಾಗಲಿಲ್ಲ.
೨೩ ಒಬ್ಬನು ಕೇಳ ಕಿವಿಗಳುಳ್ಳವನಾಗಿದ್ದರೆ, ಕೇಳಲಿ.

1. ಯೆಹೂದ್ಯರು ಅಜ್ಞಾನರನ್ನು ಅನ್ಯಜಾತಿಯವರೆಂದೂ ಹೊರಗಿನವರೆಂದೂ ಹೇಳುವರು. ಕ್ರಿಸ್ತನ ಬೋಧನೆಯ ಪ್ರಕಾರ ನಡಿಯದೆ ಇರುವವರೆಲ್ಲರೂ ಹೊರಗಿನವರೆಂದು ಈ ವಚನದಿಂದ ತೋರುತ್ತದೆ. (ಯೋಹಾ. ೮. ೩೧—೪೭.)

2. ಮನುಷ್ಯರು ತಮ್ಮ ಆತ್ಮರಕ್ಷಣೆಯ ವಿಷಯ ಚಿಂತಿಸುವದಕ್ಕೆ ಆಲಸ್ಯ ಮಾಡುವರು. ಪಿಶಾಚನು ತನ್ನ ಕೆಟ್ಟ ಕೆಲಸವನ್ನು ಆಲಸ್ಯ ಮಾಡದೆ ಸಂಗಡಲೇ ಮಾಡುತ್ತಾನೆ. ಈ ಸುವಾರ್ತೆಯಲ್ಲಿ ಸೈತಾನನೆಂದೂ, ಮತ್ತಾಯನ ಸುವಾರ್ತೆಯಲ್ಲಿ ದುಷ್ಟನೆಂದೂ, ಲೂಕನ ಸುವಾರ್ತೆಯಲ್ಲಿ ಪಿಶಾಚನೆಂದೂ ಹೇಳಲ್ಪಟ್ಟದೆ. (ಮತ್ತಾ. ೧೩. ೧೯. ಲೂಕ. ೮. ೧೨.) ಈ ಹೆಸರುಗಳಿಂದ ಅ

3. ದೀಪವನ್ನು ಕುರಿತ ಸಾಮ್ಯವು ಮತ್ತಾ. ೫. ೧೫ಲ್ಲಿ ಉಂಟು. ಇಲ್ಲಿ ಈ ಸಾಮ್ಯವನ್ನು ಹೇಳುವ ಗುರಿಯನ್ನು ನೋಡುವಾಗ, ಪರಮ ಗುರುವಾದ ಕ್ರಿಸ್ತನ ಬಳಿಯಲ್ಲಿ ಉಪದೇಶ ಹೊಂದುವವರು ದೀಪಸ್ತಂಭದ ಮೇಲಿರುವ ದೀಪವು ಪ್ರಕಾಶಿಸುವ ಪ್ರಕಾರ ಬೇರೊಬ್ಬರಿಗೆ ಉಪದೇಶಿಸುವವರಾಗಿಯೂ, ಅವರ ಮನಸ್ಸಿನ ಕತ್ತಲನ್ನು ಪರಿಹರಿಸಿ, ಸತ್ಯವೆಂಬ ಬೆಳಕನ್ನು ಹತ್ತಿಸುವವರಾಗಿಯೂ ಇರ ಬೇಕು ಎಂಬುವದೇ ಇದರ ತಾತ್ಪರ್ಯವು. ಅವರು ಅಂತರಂಗದಲ್ಲಿ ಕೇಳುವ ಜ್ಞಾನೋಪದೇಶಗಳನ್ನು ಬಹಿರಂಗವಾಗಿ ಬೋಧಿಸ ಬೇಕು. (೨೧, ೨೨. ವ.) ಆದದರಿಂದ ಅವರು ಜ್ಞಪ್ತಿಯಿಂದ ಕೇಳಿ ಅದರ ಪ್ರಕಾರ ನಡೆದರೆ, ಅದಕ್ಕೆ ತಕ್ಕ



೨೪ ಮತ್ತು ಅವರಿಗೆ ಹೇಳಿದ್ದು, ನೀವು ಕೇಳುವದೇನೆಂದು ನೋಡಿ ಕೊಳ್ಳಿರಿ; ಯಾವ ಅಳತೆಯಿಂದ ಅಳೆಯು
ತ್ತೀರೋ, [1]ಅದರಿಂದ ನಿಮಗೆ ಅಳೆಯಲ್ಪಡುವದು; ಮತ್ತು ಕೇಳುವವರಾದ ನಿಮಗೆ ಹೆಚ್ಚಾಗಿ ಕೊಡಲ್ಪ
೨೫ ಡುವದು. ಯಾಕಂದರೆ ಉಂಟಾದವನು ಯಾವನೋ, ಅವನಿಗೆ ಕೊಡಲ್ಪಡುವದು; ಮತ್ತು ಇಲ್ಲದವನು
ಯಾವನೋ, ಅವನಿಂದ [2]ಇದ್ದದ್ದು ಸಹ ತೆಗೆಯಲ್ಪಡುವದು.

೨೬, ೨೭ ಇನ್ನು ಅವನು ಹೇಳಿದ್ದೇನಂದರೆ, ಒಬ್ಬ ಮನುಷ್ಯನು ಭೂಮಿಯಲ್ಲಿ ಬೀಜ ಹಾಕಿ, ರಾತ್ರಿ ಹಗಲು ಮಲ
ಗುತ್ತಾ, ಏಳುತ್ತಾ ಇರಲಾಗಿ, ಆ ಬೀಜವು ಅವನಿಗೆ ತಿಳಿಯದೆ ಮೊಳೆತು ಬೆಳಿಯುವದು ಹ್ಯಾಗೋ,
೨೮ ಹಾಗೆಯೇ [3]ದೇವರ ರಾಜ್ಯವು. ಹ್ಯಾಗಂದರೆ ಭೂಮಿಯು ತಾನಾಗಿ, ಮೊದಲು ಮೊಳಿಕೆಯನ್ನು, ಆ
೨೯ ಮೇಲೆ ತೆನೆಯನ್ನು, ಆ ಮೇಲೆ ತೆನೆಯಲ್ಲಿ ಪೂರ್ಣ ಕಾಳನ್ನು ಫಲಿಸುತ್ತದೆ. ಆದರೆ ಫಲವಾದ ಕೂಡಲೇ
ಕೊಯ್ಯುವ ಕಾಲವು ಬಂದದರಿಂದ, ಕುಡುಗೋಲನ್ನು ಕಳುಹಿಸುತ್ತಾನೆ.

೩೦ ಇನ್ನು [4]ಅವನು ಹೇಳಿದ್ದೇನಂದರೆ, ದೇವರ ರಾಜ್ಯವನ್ನು ಯಾವದಕ್ಕೆ ಸಮಾನ ಮಾಡುವ? ಎಂಥ ಸಾ
೩೧ ಮ್ಯಕ್ಕೆ ಅದನ್ನು ಸಮ ಮಾಡುವ? ಸಾಸಿವೆ ಕಾಳಿಗೆ ಸಾಮ್ಯವಾಗಿದೆ; ಅದು ಭೂಮಿಯ ಮೇಲೆ ಬಿತ್ತ
೩೨ ಲ್ಪಡುವಾಗ, ಭೂಮಿಯ ಮೇಲಿರುವ ಎಲ್ಲಾ ಬೀಜಗಳಲ್ಲಿ ಸಣ್ಣದಾಗಿದೆ. ಬಿತ್ತಲ್ಪಟ್ಟ ಮೇಲೆ ಮೊಳೆತು,
ಎಲ್ಲಾ ಪಲ್ಯಗಳಿಗಿಂತ ದೊಡ್ಡದಾಗಿ, ಆಕಾಶದ ಪಕ್ಷಿಗಳು ಅದರ ನೆರಳಿನಲ್ಲಿ ವಾಸ ಮಾಡ ತಕ್ಕಷ್ಟು ದೊಡ್ಡ
ಕೊಂಬೆಗಳನ್ನು ಬಿಡುತ್ತದೆ.

೩೩, ೩೪ ಇಂಥಾ ಅನೇಕ ಸಾಮ್ಯಗಳಿಂದ [5]ಕೇಳಲಾಗುವ ಪ್ರಕಾರ, ಅವರಿಗೆ ವಾಕ್ಯವನ್ನು ಹೇಳಿದನು; ಸಾಮ್ಯ
ವಿಲ್ಲದೆ ಅವರ ಸಂಗಡ ಮಾತಾಡಲಿಲ್ಲ; ಆದರೆ ತನ್ನ ಶಿಷ್ಯರಿಗೆ ಏಕಾಂತವಾಗಿ ಎಲ್ಲವುಗಳನ್ನು ವಿವರಿಸಿದನು.

ಕ್ರಿಸ್ತನು ಬಿರುಘಾಳಿಯನ್ನು ಶಾಂತ ಪಡಿಸಿದ್ದು; ದೆವ್ವ ಹಿಡಿದವನನ್ನೂ ರೋಗಿಷ್ಠರನ್ನೂ ಸ್ವಸ್ಥ ಮಾಡಿ, ಸತ್ತವನನ್ನು ಎಬ್ಬಿಸಿದ್ದು.

೩೫ ಮತ್ತು [6]ಆ ದಿವಸದಲ್ಲಿ ಸಾಯಂಕಾಲವಾದಾಗ, ಆಚೆಗೆ ದಾಟಿ ಹೋಗುವ, ಎಂದು ಅವರಿಗೆ ಹೇಳಿದನು.

1. ಮನುಷ್ಯರನ್ನು ಕುರಿತು ಹೇಳಲ್ಪಟ್ಟ ಉಪಮಾನವು ಇಲ್ಲಿ ದೇವರ ವಾಕ್ಯವನ್ನು ಕುರಿತು ಹೇಳಲ್ಪಟ್ಟದೆ. ಅದನ್ನು ಅಂಗೀಕರಿಸಿ ಅದರಂತೆ ನಡಿಯುವವರಿಗೆ ಪರಮ ಸೌಖ್ಯವೂ, ಅದನ್ನು ತಳ್ಳಿ ಬಿಡುವವರಿಗೆ ದಂಡನೆಯೂ ಬರುವದು. (೨ ಕೊರಿ. ೨. ೧೫, ೧೬.)

2. ಮತ್ತಾ. ೧೩. ೧೨. ವಚನದ ವ್ಯಾಖ್ಯಾನ ನೋಡ ಬೇಕು.

3. ತನ್ನ ಬೋಧನೆಯನ್ನು ಕೇಳಿ ಅದನ್ನು ಮತ್ತೊಬ್ಬರಿಗೆ ಬೋಧಿಸ ಬೇಕೆಂದು ತನ್ನ ಶಿಷ್ಯರಿಗೆ ಆಜ್ಞಾಪಿಸಿದ ಪರಮ ಗುರುವು, ಈ ದಿವ್ಯ ಸೇವೆಯನ್ನು ನಡಿಸುವದರಲ್ಲಿ ಅವರು ದಣಿಯದ ಹಾಗೆ ಈ ಸಾಮ್ಯವನ್ನು ಹೇಳುತ್ತಾನೆ. ಇದು ಈ ಸುವಾರ್ತೆಯಲ್ಲಿ ಮಾತ್ರ ಉಂಟು. ಸಂಸಾರಿಯಾದವನು ತಾನು ಬಿತ್ತುವ ಬೀಜವನ್ನು ತನಗೆ ತಿಳಿಯದ ಪ್ರಕಾರವಾಗಿ ದೇವರು ಅಂತರಂಗವಾಗಿಯೂ ಆಶ್ಚರ್ಯವಾಗಿಯೂ ಮೊಳಿಸಿ ಫಲವುಂಟು ಮಾಡುವನೆಂದು ನಂಬಿ ಪ್ರಯಾಸ ಪಡುವ ಪ್ರಕಾರ ದೇವರ ಸೇವಕರು ಸಹ ತಾವು ಬಿತ್ತುವ ದೇವರ ವಾಕ್ಯವೆಂಬ ಜೀವವುಳ್ಳ ಬೀಜವನ್ನು ದೇವರು ಅತಿಶಯವಾದ ವಿಧವಾಗಿ ಫಲಿಸ ಮಾಡಲು ಕೃಪೆಯನ್ನು ದಯ ಪಾಲಿಸುವನೆಂಬ ಪೂರ್ಣ ನಂಬಿಕೆಯಿಂದ ಬೋಧಿಸ ಬೇಕು. ಪರಿಶುದ್ಧಾತ್ಮನೆಂಬ ಕೃಪಾವೃಷ್ಟಿಯು ಸುರಿಯುವಾಗ ದೇವರ ವಾಕ್ಯವೆಂಬ ಬೀಜವು ಮೊಳೆತು ಫಲ ಕೊಡುವದು ಎಂಬುವದಕ್ಕೆ ಸಂದೇಹವಿಲ್ಲ. ಮೊದಲು ಮೊಳಿಕೆಯೂ, ತರುವಾಯ

ಸಭೆಯ ವೃದ್ಧಿಯೂ, ದೇವದಾಸರಲ್ಲಿ ಭಕ್ತಿವೃದ್ಧಿಯೂ, ಪರಿಶುದ್ಧಾತ್ಮನಿಂದ ಕ್ರಮ ಕ್ರಮವಾಗಿ ನಡೆಯುತ್ತಾ ಬರುವದು. ಕ್ರಿಸ್ತನಲ್ಲಿ ಬಾಲಕರು ಯೌವನಸ್ಥರಾಗುವರು. ಯೌವನಸ್ಥರು ತಂದೆಗಳಾಗುವರು. (೧ ಯೋಹಾ. ೨. ೧೩—೧೮.)

4. ೩೦—೩೨. ವಚನಗಳ ವ್ಯಾಖ್ಯಾನವನ್ನು ಮತ್ತಾ. ೧೩. ೩೧, ೩೨. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

5. ಅವರ ತಿಳುವಳಿಕೆಗೂ ಸಾಮರ್ಥ್ಯಕ್ಕೂ ತಕ್ಕ ಹಾಗೆ ಅವರಿಗೆ ಬೋಧಿಸಿದನು. ಶಿಷ್ಯರು ಸಹ ತರುವಾಯ ಹಾಗೆಯೆ ಮಾಡಿದರು. (೧ ಕೊರಿ. ೩. ೧. ಇಬ್ರಿ. ೫. ೧೧—೧೪.)

6. ಕೆಟ್ಟ ಮನುಷ್ಯರಿಂದ ಕರ್ತನಿಗೆ ಸಂಭವಿಸಿದ ವಿರೋಧದ ನಿಮಿತ್ತ ಆತನ ಮಹಿಮೆಯೂ ತ್ರಾಣವೂ ಪ್ರಕಟವಾಗದೆ ಇರಲಿಲ್ಲ. ತಿಬೇರಿಯ ಸಮುದ್ರವನ್ನು ದಾಟುವಾಗ, ಘಾಳಿಯನ್ನೂ ಸಮುದ್ರವನ್ನೂ ಗದರಿಸಿ ಶಾಂತವಾಗ ಮಾಡಿದನು. (೩೫—೪೧.) ಸಮುದ್ರಕ್ಕೆ ಪೂರ್ವ ದಿಕ್ಕಿನ ದೇಶದಲ್ಲಿ ದೆವ್ವ ಹಿಡಿದ ಒಬ್ಬ ಮನುಷ್ಯನನ್ನು ಗುಣ ಮಾಡಿದನು. (೫. ೧—೨೦.) ಗಲಿಲಾಯುಕ್ಕೆ ತಿರಿಗಿ ಬಂದಾಗ ಯಾಯಿರನ ಮಗಳನ್ನು ಜೀವದಿಂದ ಎಬ್ಬಿಸಿದನು. ಅವನ ಮನೆಗೆ ಹೋಗುವ ಮಾರ್ಗದಲ್ಲಿ ರಕ್ತಕುಸುಮವುಳ್ಳ ಸ್ತ್ರೀಯನ್ನು ಸ್ವಸ್ಥ ಮಾಡಿದನು. (೨೧—೪೩.) ಇಂಥಾ ಮಹತ್ವವುಳ್ಳ ದೇವರನ್ನು ನಜರೇತಿನವರು ಅಲಕ್ಷ್ಯ ಮಾಡಿದ್ದರಿಂದ ಅವರ ಅವಿಶ್ವಾಸದ ನಿಮಿತ್ತ ಆತನು ಅಲ್ಲಿ ತನ್ನ ಮಹಿಮೆಯನ್ನು

೩೬ [1]ಆಗಲವರು ಸಮೂಹಕ್ಕೆ ಅಪ್ಪಣೆ ಕೊಟ್ಟು, ಹಡಗದಲ್ಲಿ ಇದ್ದ ಹಾಗೆಯೇ ಅವನನ್ನು ತಕ್ಕೊಂಡು ಹೋದ
ರು. ಇದಲ್ಲದೆ ಬೇರೆ ದೋಣಿಗಳು ಸಹ ಅವನ ಸಂಗಡ ಇದ್ದವು.
೩೭ ಆಗ ಮಹಾ ಬಿರುಘಾಳಿ ಉಂಟಾಗಿ, ತೆರೆಗಳು ಹಡಗದ ಮೇಲೆ, ಅದು ಆಗಲೇ ತುಂಬುವ ಹಾಗೆ,
೩೮ ಬಿದ್ದವು; ಆದರೆ ಅವನು ಹಿಂಭಾಗದಲ್ಲಿ [2]ತಲೆಗಿಂಬಿನ ಮೇಲೆ ನಿದ್ದೆ ಮಾಡುತ್ತಿದ್ದನು. ಆಗಲವರು ಅವನನ್ನು
ಎಬ್ಬಿಸಿ, ಬೋಧಕನೇ, ನಾವು ನಾಶವಾಗುವದು ನಿನಗೆ ಚಿಂತೆ ಇಲ್ಲವೋ? ಎಂದು ಅವನಿಗೆ ಹೇಳಿದರು.
೩೯ ಆಗಲವನು ಎಚ್ಚತ್ತು, ಘಾಳಿಯನ್ನು ಗದರಿಸಿ, ಸಮುದ್ರಕ್ಕೆ, ಸುಮ್ಮನಿರು, ನಿಶ್ಶಬ್ದವಾಗು, ಅಂದನು.
೪೦ ಆಗ ಘಾಳಿ ನಿಂತು ಹೋಗಿ, ಮಹಾ ಶಾಂತವಾಯಿತು. ತರುವಾಯ ಅವನು ಅವರಿಗೆ, [3]ಯಾಕೆ ಹೀಗೆ
೪೧ ಹೇಡಿಗಳಾಗಿದ್ಧೀರಿ? ನೀವು ವಿಶ್ವಾಸವಿಲ್ಲದೆ ಇರುವದು ಹ್ಯಾಗೆ? ಅಂದನು. ಆಗಲವರು ಮಹಾ ಭಯ
ಪಟ್ಟು, ಇವನು ಎಂಥವನು? ಯಾಕಂದರೆ ಘಾಳಿಯೂ ಸಮುದ್ರವೂ ಇವನಿಗೆ ವಿಧೇಯವಾಗಿವೆ, ಎಂದು
ಒಬ್ಬರಿಗೊಬ್ಬರು ಹೇಳಿದರು.

**5.** ಆಗ ಸಮುದ್ರದ ಆಚೆಗೆ ಗದರೇನರ ದೇಶಕ್ಕೆ ಬಂದರು. (೨) ಮತ್ತು ಅವನು ಹಡಗದಿಂದಿಳಿದಾಗಲೇ,
೩ ಸಮಾಧಿಗಳೊಳಗಿಂದ ಅಶುದ್ಧಾತ್ಮವುಳ್ಳ [4]ಒಬ್ಬ ಮನುಷ್ಯನು ಅವನೆದುರಿಗೆ ಬಂದನು. ಇವನು [5]ಸಮಾಧಿ
೪ ಗಳಲ್ಲಿ ವಾಸವಾಗಿದ್ದನು; ಅವನನ್ನು ಯಾರೂ ಸಂಕೋಲೆಗಳಿಂದಾದರೂ ಕಟ್ಟಲಾರದೆ ಇದ್ದರು. ಯಾಕಂ
ದರೆ ಅನೇಕ ಸಾರಿ ಬಂಧಗಳಿಂದಲೂ ಸಂಕೋಲೆಗಳಿಂದಲೂ ಕಟ್ಟಲ್ಪಟ್ಟು, ಸಂಕೋಲೆಗಳನ್ನು ಮುರಿದು,
೫ ಬಂಧಗಳನ್ನು ಹರಿದಿದ್ದನು. ಮತ್ತು ಯಾರೂ ಅವನನ್ನು ಸಾಧು ಮಾಡಲಾರದೆ ಇದ್ದರು; ರಾತ್ರಿ ಹಗ
ಲು ಯಾವಾಗಲೂ ಅವನು ಬೆಟ್ಟಗಳಲ್ಲಿಯೂ ಸಮಾಧಿಗಳಲ್ಲಿಯೂ ಕೂಗುತ್ತಾ, ಕಲ್ಲುಗಳಿಂದ ತನ್ನನ್ನು
ಕೊಯಿದು ಕೊಳ್ಳುತ್ತಾ ಇದ್ದನು.
೬, ೭ ಆದರೆ ದೂರದಿಂದ ಯೇಸುವನ್ನು ನೋಡಿದಾಗ, ಓಡಿ ಬಂದು, ಅವನಿಗೆ ನಮಸ್ಕರಿಸಿ, ಮಹೋನ್ನತನಾದ
ದೇವರ ಮಗನಾದ ಯೇಸುವೇ, [6]ನಿನಗೂ ನನಗೂ ಏನು? ನನ್ನನ್ನು ಪೀಡಿಸ ಬೇಡೆಂದು, ನಿನಗೆ ದೇವರಾ
೮ ಣೆ ಇಡುತ್ತೇನೆಂದು, ಮಹಾ ಶಬ್ದದಿಂದ ಕೂಗಿದನು. ಯಾಕಂದರೆ, ಅಶುದ್ಧಾತ್ಮವೇ, ಆ ಮನುಷ್ಯನಿಂದ
ಹೊರಡು ಎಂದು ಅವನಿಗೆ ಹೇಳಿ ಇದ್ದನು.

1. ೩೬—೪೧. ವಚನದ ವ್ಯಾಖ್ಯಾನವನ್ನು ಮತ್ತಾ. ೮. ೨೪—೨೭. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

2. ಇದು ದೋಣಿ ನಡಿಸುವವರು ಕುಳಿತು ಕೊಳ್ಳುವ ಆಸನವಾಗಿರ ಬಹುದು. ಕ್ರಿಸ್ತನು ಪ್ರಸಂಗಿಸುತ್ತಿದ್ದ ದಿವಸದಲ್ಲಿಯೇ ಆತನು ಸಮುದ್ರದ ಮೇಲೆ ಯಾತ್ರೆ ಮಾಡಿದ್ದೂ, ಅನೇಕ ಸಣ್ಣ ದೋಣಿಗಳು ಕೂಡ ಇದ್ದದ್ದೂ, ಆತನು ದೋಣಿಯ ಹಿಂಭಾಗದಲ್ಲಿ ತಲೆಗಿಂಬಿನ ಮೇಲೆ ನಿದ್ದೆ ಮಾಡಿದ್ದೂ, ಈ ಮೊದಲಾದ ಕೆಲ ವಿಶೇಷಗಳನ್ನು ಈ ಸುವಾರ್ತೆಯಲ್ಲಿ ಮಾತ್ರ ನೋಡ ಬಹುದು.

3. ಆತನು ಘಾಳಿಯನ್ನು ಶಾಂತ ಪಡಿಸುವದಕ್ಕೆ ಮುಂಚೆ ಶಿಷ್ಯರನ್ನು ಗದರಿಸಿದನೆಂದು ಮತ್ತಾಯನ ಸುವಾರ್ತೆಯಲ್ಲಿ ಹೇಳಲ್ಪಟ್ಟದೆ. ಘಾಳಿ ಶಾಂತವಾದ ತರುವಾಯ ಅವರನ್ನು ಗದರಿಸಿದನೆಂದು ಮಾರ್ಕ ಲೂಕನ ಸುವಾರ್ತೆಗಳಲ್ಲಿ ಹೇಳಲ್ಪಟ್ಟದೆ. ಸಮುದ್ರಕ್ಕೆ, ಸುಮ್ಮನಿರು ಅನ್ನಲು, ಅದು ಶಾಂತವಾಯಿತು. ಮೋಶೆ ತನ್ನ ಕೋಲಿನಿಂದ ಸಮುದ್ರವನ್ನು ಹೊಡಿಯಲು, ಅದು ಎರಡು ಭಾಗವಾಯಿತು. ಯೆಹೋಶುವನು ಒಡಂಬಡಿಕೆಯ ಪೆಟ್ಟಿಗೆಯನ್ನು ಹೊತ್ತು ಕೊಂಡು ಯೊರ್ದನಿನಲ್ಲಿ ಕಾಲಿಡಲು, ಅದು ಮಾರ್ಗ ಕೊಟ್ಟಿತು. ಎಲೀಷನು ಎಲೀಯನ ಒಲಿಯಿಂದ ನದಿ

ಕ್ಕೂ ಕರ್ತನಾದ ಕ್ರಿಸ್ತನು ಒಂದು ಮಾತಿನಿಂದ ಸಮುದ್ರದ ಘೋಷವನ್ನೂ ಘಾಳಿಯ ಬಲವನ್ನೂ ನಿಲ್ಲಿಸಿದನು.

4. ಮತ್ತಾಯನ ಸುವಾರ್ತೆಯಲ್ಲಿ ಇಬ್ಬರು ಮನುಷ್ಯರೆಂದೂ, ಈ ಸುವಾರ್ತೆಯಲ್ಲಿಯೂ ಲೂಕನ ಸುವಾರ್ತೆಯಲ್ಲಿಯೂ ಒಬ್ಬನೆಂದೂ ಹೇಳಲ್ಪಟ್ಟದೆ. ಅವರಿಬ್ಬರಲ್ಲಿ ಒಬ್ಬನು ಎಲ್ಲರಿಗೂ ಪ್ರಬಲವಾಗಿ ತಿಳಿಯಲ್ಪಟ್ಟ ಮನುಷ್ಯನಾಗಿರುವನು. ಆದದರಿಂದ ಅವನನ್ನು ಕುರಿತು ಮುಖ್ಯವಾಗಿ ಎರಡು ಸುವಾರ್ತೆಗಳಲ್ಲಿಯೂ ಹೇಳಲ್ಪಟ್ಟದೆ.

5. ಕಾನಾನ್ ದೇಶದ ಬೆಟ್ಟಗಳಲ್ಲಿ ಅನೇಕ ಗವಿಗಳುಂಟು. ಅವುಗಳಲ್ಲಿ ಆಡುಗಳಿರಲೂ ಜನರು ವಾಸಿಸಲೂ ಹೆಣಗಳನ್ನು ಇರಿಸಲೂ ತಕ್ಕದ್ದಾಗಿ ಅಗಿದು ಕೆಲಸ ಮಾಡಿರುವರು. (ನ್ಯಾಯಾಧಿ. ೬. ೨.) ಅವು ದೇಶದ ನ್ಯಾಯಪ್ರಮಾಣದ ಫಲವನ್ನು ಕಳಕೊಂಡವರಿಗೂ ಹುಚ್ಚರಿಗೂ ವಾಸ ಮಾಡ ತಕ್ಕ ಆಶ್ರಯಗಳಾಗಿದ್ದವು.

6. ನಮ್ಮ ಕಾರ್ಯದಲ್ಲಿ ಯಾಕೆ ಕೈ ಹಾಕುತ್ತೀ? ಎಂಬಂತೆ ಆ ದೆವ್ವ ಹಿಡಿದವನು ಹೇಳಿದನು. (೨ಸಮು. ೧೬. ೧೦. ಎಜ್ರ. ೪. ೩.) ಈ ದೆವ್ವಗಳು ದೇವರ ಮಗನು ಯಾರೆಂದು ತಿಳಿದು ನಡುಗುತಾ ನಂಬಿದನು. ನೋಡ ಬಹುದು. (ಯಾಕೋಬ. ೨. ೧೯.)



೯ ಮತ್ತು, ನಿನ್ನ ಹೆಸರೇನೆಂದು, ಅವನನ್ನು ಕೇಳಿದಾಗ, ಅವನು ಪ್ರತ್ಯುತ್ತರವಾಗಿ, ನನ್ನ ಹೆಸರು [1]ಲೆಗೆಯೋನ್
೧೦ ಯಾಕಂದರೆ ಅನೇಕರಾಗಿದ್ಧೇವೆ, ಅಂದನು. ಮತ್ತು ತಮ್ಮನ್ನು ದೇಶದೊಳಗಿಂದ ಕಳುಹಿಸಿ ಬಿಡದ ಹಾಗೆ
ಅವನನ್ನು ಬಹಳವಾಗಿ ಬೇಡಿ ಕೊಂಡನು.
೧೧, ೧೨ ಆದರೆ ಅಲ್ಲಿ, ಬೆಟ್ಟಗಳ ಸಮೀಪದಲ್ಲಿ, ಮೇಯುವ ಹಂದಿಗಳ ದೊಡ್ಡ ಮಂದೆ ಇತ್ತು. ಮತ್ತು ದೆವ್ವಗಳೆಲ್ಲಾ,
ನಾವು [2]ಹಂದಿಗಳಲ್ಲಿ ಪ್ರವೇಶಿಸುವ ಹಾಗೆ, ಅವುಗಳೊಳಗೆ ನಮ್ಮನ್ನು ಕಳುಹಿಸೆಂದು, ಅವನನ್ನು ಬೇಡಿ ಕೊಂ
೧೩ ಡವು. ಸಂಗಡಲೇ ಯೇಸು ಅವುಗಳಿಗೆ ಅಪ್ಪಣೆ ಕೊಟ್ಟನು. ಆಗ ಅಶುದ್ಧಾತ್ಮಗಳು ಹೊರಟು, ಹಂದಿಗ
ಳೊಳಗೆ ಹೊಕ್ಕವು. ಹೆಚ್ಚು ಕಡಿಮೆ ಎರಡು ಸಾವಿರವಾಗಿದ್ದ ಆ ಮಂದೆ ಎಲ್ಲಾ ಇಳಿಜಾರಿನಿಂದ ಸಮುದ್ರ
ಕ್ಕೆ ಓಡಿ, ಸಮುದ್ರದಲ್ಲಿ ಮುಣುಗಿ ಹೋಯಿತು.
೧೪ ಆದರೆ ಹಂದಿಗಳನ್ನು ಮೇಯಿಸುವವರು ಓಡಿ ಹೋಗಿ, ಪಟ್ಣದಲ್ಲಿಯೂ ಹಳ್ಳಿಗಳಲ್ಲಿಯೂ ತಿಳಿಸಿದಾಗ,
೧೫ ಆದದ್ದು ಏನೆಂದು ನೋಡುವದಕ್ಕೆ, ಜನರು ಹೊರಗೆ ಬಂದರು. ಯೇಸುವಿನ ಬಳಿಗೆ ಬಂದು, ಲೆಗೆಯೋನ್
ಉಂಟಾಗಿದ್ದ ಆ ದೆವ್ವ ಹಿಡಿದವನು [3]ವಸ್ತ್ರ ಹೊದ್ದವನಾಗಿಯೂ, ಸ್ವಸ್ಥ ಬುದ್ಧಿಯುಳ್ಳವನಾಗಿಯೂ ಕೂತು
೧೬ ಕೊಂಡಿರುವದನ್ನು ನೋಡಿದಾಗ ಭಯ ಪಟ್ಟರು. ಮತ್ತು ನೋಡಿದವರು, ಆ ದೆವ್ವ ಹಿಡಿದವನಿಗೆ ಹ್ಯಾಗಾ
೧೭ ಯಿತೆಂದೂ, ಆ ಹಂದಿಗಳ ಸಂಗತಿಯನ್ನೂ ಅವರಿಗೆ ತಿಳಿಸಿದಾಗ; ಅವನು ತಮ್ಮ ಪ್ರಾಂತ್ಯಗಳನ್ನು ಬಿಟ್ಟು
ಹೋಗ ಬೇಕೆಂದು ಬೇಡಿ ಕೊಳ್ಳಲಾರಂಭಿಸಿದರು.
೧೮ ಅವನು ಹಡಗವನ್ನೇರಿದಾಗ, ಆ ದೆವ್ವ ಹಿಡಿದಿದ್ದವನು, ಅವನ ಸಂಗಡ [4]ಇರ ಬೇಕೆಂದು, ಅವನನ್ನು ಬೇಡಿ
೧೯ ಕೊಂಡನು. ಆದರೆ ಯೇಸು ಅವನಿಗೆ ಅಪ್ಪಣೆ ಕೊಡದೆ, ನಿನ್ನ ಮನೆಗೆ, ಸ್ವಜನರ ಬಳಿಗೆ, ಹೋಗಿ, ಕರ್ತನು
ನಿನ್ನನ್ನು ಕರುಣಿಸಿ, ನಿನಗೆ ಎಂಥವುಗಳನ್ನು ಮಾಡಿದ್ಧಾನೋ, ಅವುಗಳನ್ನು ಅವರಿಗೆ ತಿಳಿಸು, ಅಂದನು.
೨೦ ಆಗಲವನು ಹೋಗಿ, ಯೇಸು ತನಗೆ ಮಾಡಿದವುಗಳನ್ನು ದೆಕಪೊಲಿಯಲ್ಲಿ ಸಾರಲಾರಂಭಿಸಲಾಗಿ, ಎಲ್ಲರು
ಆಶ್ಚರ್ಯ ಪಟ್ಟರು.
೨೧ ಯೇಸು ಹಡಗದಲ್ಲಿ ತಿರಿಗಿ ಆಚೆಗೆ ಹೋದ ಮೇಲೆ, ಸಮುದ್ರಕ್ಕೆ ಸಮೀಪವಾಗಿರುವಾಗ, ಬಹು [5]ಸಮೂ
ಹವು ಅವನ ಬಳಿಗೆ ಕೂಡಿ ಬಂತು.
೨೨ ಮತ್ತು, ಇಗೋ, [6]ಸಭೆಮನೆಯ ಯಜಮಾನರಲ್ಲಿ ಒಬ್ಬನಾಗಿರುವ ಯಾಯಿರನೆಂಬವನು ಬಂದು, ಅವ
೨೩ ನನ್ನು ನೋಡಿ, ಅವನ ಪಾದಗಳ ಮುಂದೆ ಬಿದ್ದು, ನನ್ನ ಚಿಕ್ಕ ಮಗಳು ತೀರಿ ಹೋಗುವ ಹಾಗಿದ್ಧಾಳೆ;

1. (ಮತ್ತಾ. ೨೬. ೫೩. ವಚನದ ವ್ಯಾಖ್ಯಾನ ನೋಡ ಬೇಕು.) ದೆವ್ವಗಳ ಸಮೂಹವನ್ನೂ ಮೂರ್ಖವನ್ನೂ ಇದರಲ್ಲಿ ನೋಡ ಬಹುದು. ಹೀಗೆ ಮೂರ್ಖಾವೇಶವುಳ್ಳ ದೆವ್ವಗಳು ಸಹ, ದೆವ್ವಗಳನ್ನು ಖಂಡಿಸ ಅಧಿಕಾರವುಳ್ಳ ಕ್ರಿಸ್ತನ ಅಧಿಕಾರಕ್ಕೆ ಒಳಗಾದದ್ದನ್ನು ನೋಡುವಾಗ ನಾವು ಆದರಣೆ ಹೊಂದ ಬಹುದು. ಇನ್ನು ಮೇಲೆ ಅವುಗಳ ಮೂರ್ಖವನ್ನು ಪೂರ್ಣವಾಗಿ ತಗ್ಗಿಸುವನು. (ರೋಮಾ. ೧೬. ೨೦.)

2. ದೆವ್ವಗಳ ಈ ಬಿನ್ನಹಕ್ಕೂ, ಕರ್ತನು ಅವುಗಳ ಬಿನ್ನಹದಂತೆ ನಡಿಯ ಸಮ್ಮತಿಸಿದ್ದಕ್ಕೂ ಕಾರಣ ಹೇಳಿರಲಿಲ್ಲ. ದೆವ್ವಗಳ ಕೆಟ್ಟತನವೂ, ಅವುಗಳನ್ನು ಆ ಮನುಷ್ಯನಿಂದ ಹೊರಡಿಸಿದಾತನ ಬಲವೂ ಕರುಣೆಯೂ ಪ್ರಕಟವಾದವು.

3. ಅವನನ್ನು ದೆವ್ವಗಳು ಹಿಡಿದಿದ್ದಾಗ ಅವನು ವಸ್ತ್ರವನ್ನು ಧರಿಸಿ ಕೊಳ್ಳಲಿಲ್ಲ. (ಲೂಕ. ೮. ೨೭.)

4. ತನ್ನನ್ನು ಬಿಟ್ಟು ಬಿಟ್ಟು ೨೦೦೦ ಹಂದಿಗಳನ್ನು ನಾಶ ಮಾಡಿದ ದೆವ್ವಗಳು ತಿರಿಗಿ ತನನ್ನು ಹಿಡಿ[illegible]

ಕರ್ತನು ಅದಕ್ಕೆ ಅಪ್ಪಣೆ ಕೊಡದೆ, ಅವನ ಆತ್ಮಕ್ಕೂ ಶರೀರಕ್ಕೂ ದೇವರು ಮಾಡಿದ ಮಹತ್ತಾದ ಉಪಕಾರಗಳನ್ನು ತನ್ನ ನೆಂಟರಿಗೂ ಮನೆಯವರಿಗೂ ಊರಿನವರಿಗೂ ಸಾರುವ ಹಾಗೆ ಆಜ್ಞಾಪಿಸಿದನು. ಅವನು ಸಹ ಹಾಗೆಯೇ ದೇವರ ಪ್ರೀತಿಯನ್ನು ಗ್ರಹಿಸಿ, ಆತನ ವರ್ತಮಾನವನ್ನು ಊರೆಲ್ಲಾ ಸಾರಿದನು.

5. ಕೃಪಾಸಮುದ್ರನಾದ ಕರ್ತನನ್ನು ಗದರೇನರು ತಮ್ಮ ದೇಶವನ್ನು ಬಿಟ್ಟು ಹೋಗುವ ಹಾಗೆ ಬೇಡಿ ಕೊಂಡ ಪ್ರಕಾರ ಆತನು ಅದನ್ನು ಬಿಟ್ಟು ಹೊರಟನು. ತಿರಿಗಿ ಆ ದೇಶಕ್ಕೆ ಹೋದನೆಂದು ಸುವಾರ್ತೆಗಳಲ್ಲಿ ಎಲ್ಲಿಯೂ ತಿಳಿಸಲಿಲ್ಲ. ಅವರು ಆತನನ್ನು ತಿರಸ್ಕಾರ ಮಾಡಿದಾಗ್ಯೂ, ಆತನು ಈಚೇ ಕಡೆಗೆ ಬಂದಾಗ ಬಹು ಸಮೂಹಗಳು ಆತನನ್ನು ಅಂಗೀಕರಿಸಿ, ಆತನ ಸಹಾಯ ಹೊಂದಿದರು.

6. ಒಂದು ಸಭೆಮನೆಗೆ ಕೆಲ ಮಂದಿ ಯಜಮಾನರು ಇರುವರು. ಅಲ್ಲಿ ನಡಿಯುವ ಆರಾಧನೆಗಳನ್ನು ಕ್ರಮ ಪಡಿಸುವದೂ,

೨೭ ಸಂಗಡ ಕೂತವರ ನಿಮಿತ್ತವೂ ಅವಳನ್ನು ಅಲಕ್ಷ್ಯ ಮಾಡ ಮನಸ್ಸಾಗಿರದೆ, ಸಂಗಡಲೇ ಅರಸನು ಭಲ್ಲೆಯ
ವನನ್ನು ಕಳುಹಿಸಿ, ಅವನ ತಲೆಯನ್ನು ತರ ಬೇಕೆಂದು ಆಜ್ಞಾಪಿಸಿದನು. ಅವನು ಹೋಗಿ, ಶೆರೆಮನೆಯಲ್ಲಿ
೨೮ ಅವನ ತಲೆ ಕಡಿದು, ಅವನ ತಲೆಯನ್ನು ತಬಕಿನ ಮೇಲೆ ತಂದು, ಅದನ್ನು ಹುಡುಗಿಗೆ ಕೊಟ್ಟನು. ಹುಡು
೨೯ ಗಿಯು ಅದನ್ನು ತನ್ನ ತಾಯಿಗೆ ಕೊಟ್ಟಳು. ಅವನ ಶಿಷ್ಯರು ಅದನ್ನು ಕೇಳಿ, ಬಂದು, ಅವನ ಹೆಣ ಎತ್ತಿ,
ಅದನ್ನು [1]ಸಮಾಧಿಯಲ್ಲಿ ಇಟ್ಟರು.

ಹನ್ನೆರಡು ಮಂದಿ ತಿರಿಗಿ ಬಂದದ್ದು; ಕ್ರಿಸ್ತನು ಅವರ ಸಂಗಡ ಅರಣ್ಯಸ್ಥಳಕ್ಕೆ ಹೋದದ್ದು; ಆತನ ಬಳಿಗೆ ಬಂದ ಜನಸಮೂಹಗಳಿಗೆ ಬೋಧಿಸಿ, ಅದ್ಭುತವಾಗಿ ಅವರಿಗೆ ಊಟ ಕೊಟ್ಟದ್ದು.

೩೦ ಆಗ ಅಪೊಸ್ತಲರು ಯೇಸುವಿನ ಬಳಿಗೆ ಕೂಡಿ ಬಂದು, ತಾವು ಮಾಡಿದವುಗಳನ್ನೂ ಬೋಧಿಸಿದವುಗಳ
೩೧ ನ್ನೂ, ಎಲ್ಲಾ ಅವನಿಗೆ ತಿಳಿಸಿದರು. [2]ಅವನು ಅವರಿಗೆ, ನೀವೇ [3]ಏಕಾಂತವಾಗಿ ಅರಣ್ಯಸ್ಥಳಕ್ಕೆ ಬಂದು,
ಸ್ವಲ್ಪ ವಿಶ್ರಮಿಸಿ ಕೊಳ್ಳಿರಿ, ಅಂದನು. ಯಾಕಂದರೆ ಬರುವವರೂ ಹೋಗುವವರೂ ಅನೇಕರಾಗಿದ್ದದರಿಂದ,
೩೨ ಉಣ್ಣುವದಕ್ಕೆ ಸಹ ಸಮಯ ಬೀಳಲಿಲ್ಲ. ಆಗ ಹಡಗದಲ್ಲಿ ಏಕಾಂತವಾಗಿ ಅರಣ್ಯಸ್ಥಳಕ್ಕೆ ಹೋದರು.
೩೩ ಅವರು ಹೋಗುವದನ್ನು ಸಮೂಹಗಳು ನೋಡಿದಾಗ, ಅನೇಕರು ಅವನ ಗುರುತು ತಿಳಿದು, ಸಮಸ್ತ
ಪಟ್ಟಣಗಳೊಳಗಿಂದ ಅಲ್ಲಿಗೆ [4]ಕಾಲುನಡೆಯಾಗಿ ಕೂಡ ಓಡಿ, ಅವರಿಗೆ ಮುಂಚೆ ಶೇರಿ, ಅವನ ಬಳಿಗೆ ಕೂಡಿ
೩೪ ಬಂದರು. ಯೇಸು ಹೊರಟು ಬಂದಾಗ, ಬಹು ಸಮೂಹವನ್ನು ನೋಡಿ, ಅವರು ಕುರುಬನಿಲ್ಲದ ಕುರಿ
ಗಳ ಹಾಗಿರುವದರಿಂದ ಅವರ ಮೇಲೆ ಅಂತಃಕರಣ ಪಟ್ಟು, ಅವರಿಗೆ ಅನೇಕ ಮಾತುಗಳನ್ನು ಬೋಧಿಸಲಾ
ರಂಭಿಸಿದನು.
೩೫ ಆಗಲೇ ಬಹಳ ಹೊತ್ತಾದದರಿಂದ, ಅವನ ಶಿಷ್ಯರು ಅವನ ಬಳಿಗೆ ಬಂದು, ಇದು ಅರಣ್ಯಸ್ಥಳವು; ಮತ್ತು
೩೬ ಈಗ ಬಹಳ ಹೊತ್ತಾಯಿತು; ಅವರು ಸುತ್ತಲಿರುವ ಗ್ರಾಮಗಳಿಗೂ ಹಳ್ಳಿಗಳಿಗೂ ಹೋಗಿ, ತಮಗೆ
ರೊಟ್ಟಿಗಳನ್ನು ಕೊಂಡು ಕೊಳ್ಳುವ ಹಾಗೆ ಅವರನ್ನು ಕಳುಹಿಸಿ ಬಿಡು; ಯಾಕಂದರೆ ಉಣ್ಣುವದಕ್ಕೆ ಅವರಿಗೆ
೩೭ ಏನೂ ಇಲ್ಲ, ಅಂದರು. ಆದರೆ ಅವನು ಪ್ರತ್ಯುತ್ತರವಾಗಿ, ನೀವೇ ಅವರಿಗೆ ಉಣ್ಣ ಕೊಡಿರಿ, ಎಂದು ಅವ
ರಿಗೆ ಹೇಳಿದನು. ಅವರು ಅವನಿಗೆ, ನಾವು ಹೋಗಿ, [5]ಇನ್ನೂರು ಹಣಕ್ಕೆ ರೊಟ್ಟಿ ಕೊಂಡು ಕೊಂಡು ಅವ
೩೮ ರಿಗೆ ಉಣ್ಣ ಕೊಡಲೋ? ಅಂದಾಗ; ಅವನು ಅವರಿಗೆ, ನಿಮಗೆ ಎಷ್ಟು ರೊಟ್ಟಿಗಳವೆ? ಹೋಗಿ ನೋಡಿರಿ,
ಅಂದನು. ತಿಳಿದ ಮೇಲೆ, ಐದು, ಮತ್ತು ಎರಡು ಮೀನುಗಳು, ಅಂದರು.
೩೯ ಆಗಲವನು ಎಲ್ಲರನ್ನು ಹಸುರಾದ ಹುಲ್ಲಿನ ಮೇಲೆ ಪಙ್ಕ್ತಿ ಪಙ್ಕ್ತಿಗಳಾಗಿ ಕುಂಡ್ರಿಸ ಬೇಕೆಂದು, ಅವರಿಗೆ
೪೦ ಆಜ್ಞಾಪಿಸಿದನು. [6]ಆಗಲವರು ಸಾಲು ಸಾಲಿಗೆ, ನೂರು ನೂರಾಗಿಯೂ, ಐವತ್ತೈವತ್ತಾಗಿಯೂ, ಕೂತು

1. ಯೋಹಾನನು ತನ್ನ ಉದ್ಯೋಗ ಪ್ರಾರಂಭಿಸಿದ ಮೂರನೇ ವರುಷ ಅವನಿಗೆ ಮರಣ ಸಂಭವಿಸಿತೆಂದು ತೋರುತ್ತದೆ. ಅವನು ಒಂದುವರೆ ವರುಷ ಶೆರೆಯಲ್ಲಿದ್ದ ಮೇಲೆ ಕೊಲ್ಲಲ್ಪಟ್ಟನೆಂದು ತೋರುತ್ತದೆ. ಕ್ರಿಸ್ತನು ತನ್ನ ಉದ್ಯೋಗ ಪ್ರಾರಂಭಿಸಿದ ಮೂರನೇ ಪಸ್ಕ ಹಬ್ಬ ಸಮೀಪವಾಗಿದ್ದ ಕಾಲದಲ್ಲಿ ಯೋಹಾನನು ಸತ್ತನೆಂದು ಊಹಿಸ ಬಹುದು. (ಯೋಹಾ. ೬. ೪.)

2. ೩೧—೪೪. ವಚನಗಳ ವ್ಯಾಖ್ಯಾನವನ್ನು ಮತ್ತಾ. ೧೪. ೧೩—೨೧. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು. (ಯೋಹಾ. ೬.) ಬೇರೆ ಸುವಾರ್ತೆಗಳಲ್ಲಿ ಇಲ್ಲದ ಕೆಲ ಸಂಗತಿಗಳನ್ನು ಮಾರ್ಕನು ತನ್ನ ವಾಡಿಕೆಯ ಪ್ರಕಾರ ಕೂಡಿಸಿ ಹೇಳುತ್ತಾನೆ.

3. ಅಧಿಕವಾಗಿ ಕೆಲಸ ಮಾಡಿದ ತರುವಾಯ ಸ್ವಲ್ಪ ಹೊತ್ತು [illegible] ಶರೀರಕ್ಕೂ ಮನಸಿಗೂ ಸೌಖ್ಯ. ದೇವರ ಧ್ಯಾನ ಮಾಡುವದಕ್ಕೂ ಇನ್ನೂ ಬಲವಾಗಿ ಆತನ ಸೇವೆ ನಡಿಸುವದಕ್ಕೂ ಅನುಕೂಲವಾಗುವದು.

4. ಆತನು ಹಡಗದಲ್ಲಿ ಹೋದ ದಿಶೆಯನ್ನು ನೋಡಿದ ಜನರು ಗಲಿಲಾಯ ಸಮುದ್ರಕ್ಕೆ ಉತ್ತರ ಕಡೆ ಥಡದ ಮಾರ್ಗವಾಗಿ ಆತನಿಗೆ ಮುಂದಾಗಿ ಹೋಗಿ, ಆತನು ಇಳಿದಾಗಲೇ ಆತನನ್ನು ದರ್ಶಿಸಿದರು.

5. ಇದು ಅರುವತ್ತು ರೂಪಾಯಿಗಳಿಗೆ ಸರಿಯಾಗಿರುವದು. (ಮತ್ತಾ. ೨೦. ೨. ವಚನದ ವ್ಯಾಖ್ಯಾನದಲ್ಲಿ ನೋಡ ಬೇಕು.) ಹೀಗೆ ಹೇಳಿದವನು ಫಿಲಿಪ್ಪನು. (ಯೋಹಾ. ೬. ೭.)

6. ಹಾಗೆಯೇ ಜನರು ಐವತ್ತಾಗಿಯೂ ನೂರಾಗಿಯೂ ಕ್ರಮವಾಗಿ ಕೂತು ಕೊಂಡರು. (೩೯. ವ.) ಇದರಿಂದ ಶಿಷ್ಯರು ಲೇಸಾಗಿ ಬಡಿಸಲೂ, ಅವರ ಲೆಖ್ಖವನ್ನು ತಿಳಿದು ಕೊಳ್ಳಲೂ ಅನುವಾಯಿತು. ವಂಚನೆ ನಡಿಯ ಸ್ಥಳವಿಲ್ಲ.



೪೧ ಕೊಂಡರು. ಮತ್ತು ಅವನು ಆ ಐದು ರೊಟ್ಟಿಗಳನ್ನೂ ಎರಡು ಮೀನುಗಳನ್ನೂ ತೆಗೆದು ಕೊಂಡು,
ಆಕಾಶವನ್ನು ನೋಡಿ, ಸ್ತೋತ್ರ ಮಾಡಿ, ಆ ರೊಟ್ಟಿಗಳನ್ನು ಮುರಿದು, ಅವರಿಗೆ ಹಂಚಿ ಕೊಡುವದಕ್ಕೆ
೪೨ ತನ್ನ [1]ಶಿಷ್ಯರಿಗೆ ಕೊಟ್ಟನು. ಮತ್ತು ಎರಡು ಮೀನುಗಳನ್ನು ಎಲ್ಲರಿಗೆ ಹಂಚಿ ಕೊಟ್ಟನು. ಆಗ ಎಲ್ಲರು
೪೩ ಉಂಡು, ತೃಪ್ತಿಯಾದರು. ಮತ್ತು ಹನ್ನೆರಡು ಪುಟ್ಟಿ ತುಂಬ ತುಂಡುಗಳನ್ನು, ಮೀನುಚೂರುಗಳನ್ನು ಸಹ,
೪೪ ಎತ್ತಿದರು. ಆ ರೊಟ್ಟಿಗಳನ್ನು ತಿಂದವರು ಹೆಚ್ಚು ಕಡಿಮೆ ಐದು ಸಾವಿರ ಗಂಡಸರಾಗಿದ್ದರು.

ಕ್ರಿಸ್ತನು ಸಮುದ್ರದ ಮೇಲೆ ನಡೆದದ್ದು; ರೋಗಿಷ್ಠರನ್ನು ಸ್ವಸ್ಥ ಮಾಡಿದ್ದು.

೪೫ ಸಂಗಡಲೇ ಅವನು ತನ್ನ ಶಿಷ್ಯರಿಗೆ, ಹಡಗವನ್ನೇರಿ, [2]ತಾನು ಸಮೂಹವನ್ನು ಕಳುಹಿಸುವಷ್ಟರಲ್ಲಿ ಆಚೆಗೆ
೪೬ [3]ಬೆತ್ಸಾಯಿದದ ಕಡೆಗೆ ಮುಂದೆ ಹೋಗ ಬೇಕೆಂದು, ಅಗತ್ಯ ಮಾಡಿದನು. ಅವರನ್ನು ಕಳುಹಿಸಿದ ಮೇಲೆ
ಪ್ರಾರ್ಥನೆ ಮಾಡುವದಕ್ಕೋಸ್ಕರ ಒಂದು ಬೆಟ್ಟವನ್ನೇರಿದನು.
೪೭ ಸಾಯಂಕಾಲವಾದಾಗ, ಹಡಗವು ಸಮುದ್ರದ ಮಧ್ಯದಲ್ಲಿರಲಾಗಿ, ಅವನೊಬ್ಬನೇ ಭೂಮಿಯ ಮೇಲೆ
೪೮ ಇದ್ದನು. ಮತ್ತು ಘಾಳಿಯು ಅವರಿಗೆ ವಿರೋಧವಾಗಿದ್ದದರಿಂದ, ಅವರು ಹುಟ್ಟು ಎಳೆಯುವದರಲ್ಲಿ
ಕಷ್ಟ ಪಡುತ್ತಾರೆಂದು ನೋಡಿ, ರಾತ್ರಿಯ ನಾಲ್ಕನೇ ಝಾವಿನಲ್ಲಿ ಸಮುದ್ರದ ಮೇಲೆ ನಡೆಯುತ್ತಾ, ಅವರ
೪೯ ಬಳಿಗೆ ಬಂದು, ಅವರನ್ನು [4]ದಾಟಿ ಹೋಗ ಮನಸ್ಸಾಗಿದ್ದನು. ಆದರೆ ಅವರು ಅವನು ಸಮುದ್ರದ ಮೇಲೆ
೫೦ ನಡೆಯುವದನ್ನು ನೋಡಿ, ಭೂತವೆಂದು ನೆನಸಿ, ಕೂಗಿದರು; ಯಾಕಂದರೆ ಎಲ್ಲರು ಅವನನ್ನು ನೋಡಿ,
ಕಳವಳ ಗೊಂಡರು. ಸಂಗಡಲೇ ಅವನು ಅವರ ಸಂಗಡ ಮಾತಾಡಿ, ಧೈರ್ಯವಾಗಿರಿ, ನಾನೇ, ಭಯ ಪಡ
೫೧ ಬೇಡಿರೆಂದು ಅವರಿಗೆ ಹೇಳಿ, ಹಡಗದಲ್ಲಿ ಅವರ ಬಳಿಗೆ ಏರಿದನು. ಆಗ ಘಾಳಿ ನಿಂತಿತು. ಮತ್ತು ಅವರು
೫೨ ಅತ್ಯಧಿಕವಾಗಿ ತಮ್ಮೊಳಗೆ ಭ್ರಮಿಸಿ ಆಶ್ಚರ್ಯ ಪಟ್ಟರು; ಯಾಕಂದರೆ ಅವರ ಹೃದಯವು [5]ಕಠಿಣವಾಗಿ
ದ್ದದರಿಂದ ಅವರು ರೊಟ್ಟಿಗಳ ಅದ್ಭುತವನ್ನು ಗ್ರಹಿಸಿ ಕೊಳ್ಳಲಿಲ್ಲ.
೫೩, ೫೪ ಅವರು ದಾಟಿ, ಗೆನೆಜರೇತ್ ದೇಶಕ್ಕೆ ಬಂದು, ಥಡ ಶೇರಿದರು. ಹಡಗದಿಂದ ಇಳಿದಾಗಲೇ, ಜನರು
೫೫ ಅವನ ಗುರುತು ತಿಳಿದು, ಆ ಶೀಮೆಯನ್ನೆಲ್ಲಾ ಸುತ್ತಿ ಕೊಂಡು, ಅವನು ಇದ್ದಾನೆಂದು ಕೇಳಿದ ಸ್ಥಳಗಳಿಗೆ
೫೬ ಅಸೌಖ್ಯವಾಗಿರುವವರನ್ನು ಮಂಚಗಳ ಮೇಲೆ ಎತ್ತಿ ಕೊಂಡು, ಹೋಗಲಾರಂಭಿಸಿದರು. ಮತ್ತು ಅವನು
ಗ್ರಾಮಗಳನ್ನೂ ಪಟ್ಟಣಗಳನ್ನೂ ಶೀಮೆಗಳನ್ನೂ ಎಲ್ಲಿ ಶೇರಿದನೋ, ಅಲ್ಲಿ ಅವರು ರೋಗಿಷ್ಠರನ್ನು ಅಂಗಡಿ ಬೀದಿ
ಗಳಲ್ಲಿ ಇಟ್ಟು, ಅವನ ವಸ್ತ್ರದ ಶೆರಗನ್ನಾದರೂ ಅವರು ಮುಟ್ಟುವ ಹಾಗೆ ಅವನನ್ನು ಬೇಡಿ ಕೊಂಡರು.
ಮತ್ತು ಅದನ್ನು ಮುಟ್ಟಿದವರೆಲ್ಲರು ಸ್ವಸ್ಥವಾದರು.

1. ರಕ್ಷಕನ ಮಹಾ ಕರುಣೆಯೂ ಸರ್ವಶಕ್ತಿಯೂ ಇದರಲ್ಲಿ ಪ್ರಕಟವಾಯಿತು; ಶಿಷ್ಯರ ಊಳಿಗದ ಮಹತ್ವವೂ ಪ್ರಕಟವಾಯಿತು. ಅವರೇ ತಮ್ಮ ಪರಮ ಗುರುವು ಅನುಗ್ರಹಿಸುವ ಆತ್ಮಾಹಾರವನ್ನು ಪಾಪಾತ್ಮರಿಗೆ ಬಡಿಸುವವರು.

2. ೪೫—೫೬. ವಚನಗಳ ವ್ಯಾಖ್ಯಾನವನ್ನು ಮತ್ತಾ. ೧೪. ೨೨—೩೬. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

3. ಬೆತ್ಸಾಯಿದ ಎಂದು ಹೆಸರುಳ್ಳ ಎರಡು ಊರುಗಳುಂಟು. ಉತ್ತರ ಬೆತ್ಸಾಯಿದ ಒಂದು, ಗಲಿಲಾಯ ಬೆತ್ಸಾಯಿದ ಒಂದು. ಉತ್ತರ ಬೆತ್ಸಾಯಿದ ಊರಿನಿಂದ ಶಿಷ್ಯರು ಹೊರಟು, ಗಲಿಲಾಯ ಸಮುದ್ರಕ್ಕೆ ಪಶ್ಚಿಮ ಕಡೆ ಗಲಿಲಾಯ ದೇಶದಲ್ಲಿರುವ ಬೆತ್ಸಾಯಿದ ಪಟ್ಟಣದ ಕಡೆಗೆ ಪ್ರಯಾಣ ಮಾಡಿ (ಯೋಹಾ. ೬. ೧೭.), ಗೆನೆಜರೇತ್ ದೇಶದ ಥಡದಲ್ಲಿ ಇಳಿದರು. (೫೩. ವ.) ಮಾರಣೆ ದಿವಸ ಜನರು ಹಡಗದಲ್ಲೇರಿ ಕ್ರಿಸ್ತನನ್ನು ಹುಡುಕುತ್ತಾ ಕಪೆರ್ನೌಮಿಗೆ ಬಂದು, ಆತನನ್ನು ಕಂಡರು. (ಯೋಹಾ. ೬. ೨೪. ೨೫. ೫೯.)

4. ಅವರು ಕಷ್ಟ ಪಡುವದನ್ನು ನೋಡದೆ ದಾಟಿ ಹೋಗುವವನಂತೆ ಕಾಣಲ್ಪಟ್ಟನು. ಮಾರ್ಥ ಮರಿಯಳ ಆಪತ್ತಿಗೆ ಬಂದು ಅನುಕೂಲಿಸದವನಂತೆಯೂ ಇದ್ದನು. (ಯೋಹಾ. ೧೧. ೬.) ತನ್ನ ದಾಸರ ಉಪದ್ರಗಳನ್ನು ಪರಿಹರಿಸಿ ಅವರಿಗೆ ಸಹಾಯ ಮಾಡ ಕರುಣೆಯುಳ್ಳ ದೇವರು, ಅವರ ಭಕ್ತಿ ವಿಶ್ವಾಸ ತಾಳ್ಮೆ ಮೊದಲಾದ ಸದ್ಗುಣಗಳು ಪ್ರಕಟವಾಗಲೂ ಅಭಿವೃದ್ಧಿಯಾಗಲೂ ತಕ್ಕಂತೆ ಪ್ರಾರಂಭದಲ್ಲಿ ಕರುಣಿಸದವನಂತೆ ಇರುವನು. (ಲೂಕ. ೨೪. ೨೮.)

5. ವಿಶ್ವಾಸವಿಲ್ಲದವರ ಹೃದಯವು ಕಲ್ಲಿನ ಹಾಗೆ ಘಟ್ಟಿಯಾಗಿರುವದು. (ಮಾರ್ಕ. ೩. ೫.) ಇಂಥಾ ಕಠಿಣ ಮನಸ್ಸುಳ್ಳವರು ಕರ್ತನ ಅದ್ಭುತಗಳನ್ನು ಕಂಡು ಆಶ್ಚರ್ಯ ಪಡುವರೇ ಹೊರ್ತು ನಂಬಲಾರರು. ಶಿಷ್ಯರಲ್ಲಿ ಕಾಣಲ್ಪಟ್ಟ ಈ ದುರ್ಗುಣಗಳನ್ನು ಸುವಾರ್ತೆಗಳ ಗ್ರಂಥಗಳಲ್ಲಿ ಮರೆ ಮಾಡದೆ ತೋರಿಸಿರುವದು ಸತ್ಯದ ಲಕ್ಷಣವೇ ಹೊರ್ತು ಬೇರೆ ಅಲ್ಲ. ಪೇತ್ರನು ಸಮುದ್ರದ ಮೇಲೆ ನಡೆದ ಆಶ್ಚರ್ಯವನ್ನು ಈ ಸುವಾರ್ತೆಯಲ್ಲಿ ಹೇಳಲಿಲ್ಲ

ಹೊರಗಿನ ಶುದ್ಧವನ್ನೂ ಒಳಗಿನ ಶುದ್ಧವನ್ನೂ ಕುರಿತ ಸಂಭಾಷಣೆ; ಫರಿಸಾಯರ ಸಂಪ್ರದಾಯಗಳು.

**7.** [1]ಆಗ ಫರಿಸಾಯರೂ ಶಾಸ್ತ್ರಿಗಳಲ್ಲಿ ಕೆಲವರೂ ಯೆರೂಸಲೇಮಿನಿಂದ ಬಂದು, ಅವನ ಬಳಿಗೆ ಕೂಡಿ
೨ ಕೊಂಡರು. ಇವರು ಅವನ ಶಿಷ್ಯರಲ್ಲಿ ಕೆಲವರು ಹೊಲೆ ಎಂಬ [2]ತೊಳೆಯದ ಕೈಗಳಿಂದ ರೊಟ್ಟಿ ತಿನ್ನುವದ
ನ್ನು ನೋಡಿ, ತಪ್ಪು ಹಿಡಿದರು.
೩ ಯಾಕಂದರೆ ಫರಿಸಾಯರೂ, ಯೆಹೂದ್ಯರೆಲ್ಲರೂ, [3]ಹಿರಿಯರ ಸಂಪ್ರದಾಯವನ್ನು ಕೈಕೊಂಡು, [4]ಕೈಗಳ
೪ ನ್ನು ಬಹಳವಾಗಿ ತೊಳಕೊಂಡ ಹೊರ್ತು, ಊಟ ಮಾಡುವದಿಲ್ಲ; ಮತ್ತು ಅಂಗಡಿಯಿಂದ ಬಂದಾಗ,
ಸ್ನಾನ ಮಾಡಿ ಕೊಂಡ ಹೊರ್ತು, ಊಟ ಮಾಡುವದಿಲ್ಲ; ಮತ್ತು ಪಂಚಪಾತ್ರೆ, ಬಟ್ಲು, ತಂಬಿಗೆ, ಮಂಚ
ಗಳ ಸ್ನಾನಗಳು ಮೊದಲಾದ ಅನೇಕ ಕಟ್ಟಳೆಗಳನ್ನು ಕೈಕೊಳ್ಳುವದಕ್ಕೆ ಹೊಂದಿದ್ದಾರೆ.
೫ ತರುವಾಯ ಫರಿಸಾಯರೂ ಶಾಸ್ತ್ರಿಗಳೂ ಅವನಿಗೆ, ನಿನ್ನ ಶಿಷ್ಯರು ಯಾಕೆ ಹಿರಿಯರ ಸಂಪ್ರದಾಯದ
ಪ್ರಕಾರ ನಡಕೊಳ್ಳದೆ, ತೊಳೆಯದ ಕೈಗಳಿಂದ ರೊಟ್ಟಿ ತಿನ್ನುತ್ತಾರೆಂದು, ಅವನನ್ನು ಕೇಳಿದಾಗ,
೬ ಅವನು ಪ್ರತ್ಯುತ್ತರವಾಗಿ ಅವರಿಗೆ ಹೇಳಿದ್ದೇನಂದರೆ, ಕಪಟಿಗಳಾದ ನಿಮ್ಮನ್ನು ಕುರಿತು [5]ಯೆಶಾಯನು
ಚನ್ನಾಗಿ ಪ್ರವಾದನೆ ಹೇಳಿದ್ದಾನೆ; ಏನಂದರೆ, ಈ ಜನರು ತುಟಿಗಳಿಂದ ನನ್ನನ್ನು ಸನ್ಮಾನಿಸುತ್ತಾರೆ; ಆದರೆ
೭ ಅವರ [6]ಹೃದಯವು ನನಗೆ ದೂರವಾಗಿದೆ; ಆದರೂ ಮನುಷ್ಯರ ಕಲ್ಪನೆಗಳಾದ ಬೋಧನೆಗಳನ್ನು ಬೋಧಿಸಿ,
೮ ವ್ಯರ್ಥವಾಗಿ ನನ್ನನ್ನು ಭಜಿಸುತ್ತಾರೆಂದು, (ಯೆಶಾ. ೨೯. ೧೩.) ಬರೆದದೆ ಅಲ್ಲವೋ? ಹ್ಯಾಗಂದರೆ, ನೀವು
ದೇವರ ಕಟ್ಟಳೆಯನ್ನು ಬಿಟ್ಟು ಬಿಟ್ಟು, ಮನುಷ್ಯರ ಸಂಪ್ರದಾಯವನ್ನೂ, ಬಟ್ಲು ಪಂಚಪಾತ್ರೆಗಳ ಸ್ನಾನಗಳ
ನ್ನೂ ಕೈಕೊಳ್ಳುತ್ತೀರಿ; ಮತ್ತು ಇವುಗಳ ಹಾಗೆ ಬೇರೆ ಅನೇಕಗಳನ್ನು ಮಾಡುತ್ತೀರಿ.
೯ ಮತ್ತು ಅವರಿಗೆ ಹೇಳಿದ್ದು, ನೀವು ನಿಮ್ಮ ಸಂಪ್ರದಾಯವನ್ನು ಕೈಕೊಳ್ಳುವದಕ್ಕಾಗಿ ದೇವರ ಕಟ್ಟಳೆಯನ್ನು
೧೦ ಚನ್ನಾಗಿ ಅಲಕ್ಷ್ಯ ಮಾಡುತ್ತೀರಿ. ಹ್ಯಾಗಂದರೆ, ಮೋಶೆಯು, ನಿನ್ನ ತಂದೆಯನ್ನೂ ತಾಯಿಯನ್ನೂ
ಸನ್ಮಾನಿಸು; ಮತ್ತು ತಂದೆಗಾದರೂ ತಾಯಿಗಾದರೂ ಕೆಟ್ಟ ಮಾತು ಹೇಳುವವನು ಸತ್ತೇ ಸಾಯಲಿ,
೧೧ (ಹೊರ. ೨೦. ೧೨; ೨೧. ೧೭.) ಅಂದನು. ಆದರೆ ನೀವು, ಒಬ್ಬ ಮನುಷ್ಯನು, ತಂದೆಗಾದರೂ ತಾಯಿ
ಗಾದರೂ ನೀನು ನನ್ನಿಂದ ಹೊಂದುವ ಪ್ರಯೋಜನವು [7]ಕೊರ್ಬಾನೆಂಬ ಕಾಣಿಕೆಯಾಗಿದೆ, ಎಂದು ಹೇಳಿದ
೧೨ ರೆ, ಸರಿ, ಅನ್ನುತ್ತೀರಿ; ಮತ್ತು ಅವನನ್ನು ತನ್ನ ತಂದೆಗಾದರೂ ತಾಯಿಗಾದರೂ ಏನೂ ಮಾಡ ಗೊಡಿ
೧೩ ಸದೆ, ನೀವೇ ಸ್ಥಾಪಿಸಿದ ಸಂಪ್ರದಾಯದಿಂದ ದೇವರ ವಾಕ್ಯವನ್ನು ನಿರರ್ಥಕ ಮಾಡುತ್ತೀರಿ; ಮತ್ತು ಇವು
ಗಳ ಹಾಗೆ ಅನೇಕಗಳನ್ನು ಮಾಡುತ್ತೀರಿ.

1. ೭; ೮. ೧—೨೬. ಮತ್ತಾ. ೧೫; ೧೬. ೧—೧೨. ಕೆಲವು ಸಂಗತಿಗಳಲ್ಲಿ ಸಂಬಂಧವುಂಟು. ಕುರುಡನೂ ಮೂಕನೂ ಆದ ಮನುಷ್ಯನು ಸ್ವಸ್ಥವಾದದ್ದೂ, ಇನ್ನೊಬ್ಬ ಕುರುಡನು ದೃಷ್ಟಿ ಹೊಂದಿದ್ದೂ, ಈ ಎರಡು ಅದ್ಭುತಗಳನ್ನು ಮಾತ್ರ ಈ ಸುವಾರ್ತೆಯಲ್ಲಿ ಕೂಡಿಸಿ ಬರೆದದೆ. (ಮಾರ್ಕ. ೭. ೩೨—೩೭; ೮. ೨೨—೨೬.)

2. ಅಶುದ್ಧ ವಸ್ತುಗಳನ್ನು ಮುಟ್ಟಿದರೆ ಹೊಲೆ ಎಂದು (ಲೇವಿ. ೧೫. ೯—೧೨.) ಹೇಳಲ್ಪಟ್ಟದೆ. ಯೆಹೂದ್ಯ ಬೋಧಕರು, ಯಾವದನ್ನು ಮುಟ್ಟಿದರೂ ಹೊಲೆ ಎಂದು ಬೋಧಿಸಿದರು. ಕೈ ತೊಳೆಯದೆ ಉಂಡರೆ ಹೊಲೆ; ಅಂಗಡಿಯಿಂದ ಬಂದರೆ ಹೊಲೆ; ಪಂಚಪಾತ್ರೆ ಬಟ್ಲು ಮುಂತಾದ ಕಂಚಿನ ಪಾತ್ರೆಗಳನ್ನು ಬೆಳಗದಿದ್ದರೆ ಹೊಲೆ; ಮಂಚವನ್ನು ಕಳಚಿ ತೊಳಿಯದಿದ್ದರೆ ಹೊಲೆ; ಹೀಗೆ ಎಲ್ಲಾ ಹೊಲೆಯಾಯಿತು. ಅಂತರ್ಯಭಕ್ತಿಯೂ ಶುದ್ಧವೂ ಇಲ್ಲದವರಿಗೆ ಹೊರಗಿನ ಶುದ್ಧವೂ ಆಚಾರಗಳೂ ಅಧಿಕವಾಗಿರುವವು.

3. ಮೋಶೆಯ ಪ್ರಮಾಣವನ್ನು ವಿಪರೀತಾರ್ಥವಾಗಿ ವಿಸ್ತರಿಸಿ ಪ್ರಸಂಗಿಸಿದವರು ಆ ಹಿರಿಯರೇ. ಅವರ ಬೋಧನೆಯು ವೇದಪ್ರಮಾಣದ ಸಾರವನ್ನೂ ಅಲಂಕಾರವನ್ನೂ ಕೆಡಿಸುವದಾಗಿತ್ತು. ಆ ಸಂಪ್ರದಾಯಗಳನ್ನೆಲ್ಲಾ ತರುವಾಯ ಒಂದು ಗ್ರಂಥದಲ್ಲಿ ಕೂಡಿಸಿ ಬರೆದು, ಅದಕ್ಕೆ ತಲ್ಮೂದ್ (Talmud) ಎಂದು ಹೆಸರಿಟ್ಟರು. ತಲ್ಮೂದ್ ಅಂದರೆ, ಬೋಧೆ ಪ್ರಮಾಣವೆಂಬುವದು.

4. ಇದು ಆ ಕಾಲದಲ್ಲಿದ್ದ ಯೆಹೂದ್ಯರು ಒಂದು ವಿಶೇಷವಾದ ವಿಧವಾಗಿ ಕೈ ತೊಳೆಯುವ ಆಚಾರವನ್ನು ತೋರಿಸುತ್ತದೆ. ಫರಿಸಾಯರು ತಮಗೂ ಬೇರೆ ಜನರಿಗೂ ವ್ಯತ್ಯಾಸ ತೋರ ತಕ್ಕದ್ದಾಗಿ ಈ ಆಚಾರವನ್ನು ಅನುಸರಿಸುತ್ತಾ ಬಂದರು.

5. (ಯೆಶಾ. ೨೯. ೧೩, ೧೫.) ಆ ಕಾಲದ ಕಪಟಸ್ಥರನ್ನು ಕುರಿತು ಹೇಳಿದ ಈ ಪ್ರವಾದನೆ ಎಲ್ಲಾ ಕಾಲಗಳವರಿಗೂ ತಕ್ಕದ್ದಾಗಿದೆ.

6. ಹೃದಯದಿಂದ ಮಾಡಲ್ಪಡದ ಆರಾಧನೆ ದೇವರಿಗೆ ಪ್ರೀತಿಯಾದದ್ದಲ್ಲ. (ಯೋಹಾ. ೪. ೨೪.)

7. (ಮತ್ತಾ. ೧೫. ೫. ವಚನದ ವ್ಯಾಖ್ಯಾನ ನೋಡ ಬೇಕು.) ಕೊರ್ಬಾನ್ ಅಂದರೆ ಕಾಣಿಕೆ ಎಂಬ ಅರ್ಥವು.



೧೪ ಆಗಲವನು ಸಮೂಹವನ್ನೆಲ್ಲಾ ಹತ್ತರ ಕರೆದು, ಅವರಿಗೆ ಹೇಳಿದ್ದೇನಂದರೆ, ಎಲ್ಲರೂ ನನಗೆ ಕಿವಿ ಕೊಟ್ಟು
೧೫ ಗ್ರಹಿಸಿರಿ. ಮನುಷ್ಯನ ಹೊರಗಿನಿಂದ ಅವನೊಳಗೆ ಶೇರುವ ಒಂದಾದರೂ ಅವನನ್ನು ಹೊಲೆ ಮಾಡ
ಲಾರದು; ಆದರೆ ಅವನೊಳಗಿಂದ ಹೊರಡುವವುಗಳೇ ಮನುಷ್ಯನನ್ನು ಹೊಲೆ ಮಾಡುವಂಥವುಗಳು.
೧೬ ಕೇಳ ಕಿವಿಗಳುಳ್ಳವನು ಕೇಳಲಿ.
೧೭ ಮತ್ತು ಅವನು ಸಮೂಹವನ್ನು ಬಿಟ್ಟು, ಮನೆಯಲ್ಲಿ ಪ್ರವೇಶಿಸಿದಾಗ, ಅವನ ಶಿಷ್ಯರು ಆ ಸಾಮ್ಯವನ್ನು
೧೮ ಕುರಿತು ಅವನನ್ನು ಕೇಳಿದರು. ಅವನು ಅವರಿಗೆ ಹೇಳಿದ್ದೇನಂದರೆ, ಹಾಗಾದರೆ ನೀವು ಸಹ ಅವಿವೇಕಿಗ
೧೯ ಳಾಗಿದ್ದೀರೋ? ಹೊರಗಿನಿಂದ ಮನುಷ್ಯನೊಳಗೆ ಶೇರುವಂಥಾದ್ದೆಲ್ಲಾ ಅವನ ಹೃದಯದೊಳಗಲ್ಲ, ಹೊಟ್ಟೆ
ಯೊಳಗೆ ಶೇರಿ, ಉಂಡದ್ದನ್ನೆಲ್ಲಾ ಶುಚಿ ಮಾಡಿ, ಬಹಿರ್ಭೂಮಿಗೆ ಹೊರಡುವದರಿಂದ ಅವನನ್ನು ಹೊಲೆ
೨೦ ಮಾಡಲಾರದೆಂದು, ನೀವು ಗ್ರಹಿಸುವದಿಲ್ಲವೋ? ಮತ್ತು ಅವನು ಹೇಳಿದ್ದೇನಂದರೆ, ಮನುಷ್ಯನೊಳಗಿಂದ
೨೧ ಹೊರಡುವಂಥಾದ್ದೇ ಮನುಷ್ಯನನ್ನು ಹೊಲೆ ಮಾಡುತ್ತದೆ. ಯಾಕಂದರೆ ಒಳಗಿನಿಂದ, ಮನುಷ್ಯರ ಹೃದ
೨೨ ಯದೊಳಗಿಂದ, [1]ದುರಾಲೋಚನೆಗಳೂ, ವ್ಯಭಿಚಾರಗಳೂ, ಜಾರತ್ವಗಳೂ, ಕೊಲೆಗಳೂ, ಕಳ್ಳತನಗಳೂ,
ಲೋಭಗಳೂ, ಕೆಟ್ಟತನಗಳೂ, ಮೋಸವೂ, ಬಂಡತನವೂ, ಕ್ರೂರ ದೃಷ್ಟಿಯೂ, ದೂಷಣೆಯೂ, ಗರ್ವವೂ,
೨೩ ದುರ್ಬುದ್ಧಿಯೂ, ಹೊರಡುತ್ತವೆ. ಕೆಟ್ಟವುಗಳಾದ ಇವೆಲ್ಲಾ ಒಳಗಿನಿಂದ ಹೊರಟು, ಮನುಷ್ಯನನ್ನು
ಹೊಲೆ ಮಾಡುತ್ತವೆ.

ಕ್ರಿಸ್ತನು ತೂರ್ ಸಿದೋನಿಗೆ ಹೋಗಿ, ಕನಾನ್ಯ ಸ್ತ್ರೀಯ ಮಗಳನ್ನು ಸ್ವಸ್ಥ ಮಾಡಿದ್ದು.

೨೪ [2]ಅವನು ಅಲ್ಲಿಂದ ಎದ್ದು, ತೂರ್ ಸಿದೋನ್ ಪ್ರಾಂತ್ಯಗಳಿಗೆ ಹೋಗಿ, ಯಾರಿಗೂ ತಿಳಿಯ ಬಾರದೆಂದು,
೨೫ ಒಂದು ಮನೆಯಲ್ಲಿ ಪ್ರವೇಶಿಸಿದನು; ಆದರೆ ಅಡಗಿರಲಾರದೆ ಇದ್ದನು. ಹ್ಯಾಗಂದರೆ ಅಶುದ್ಧಾತ್ಮ ಹಿಡಿದ
೨೬ ಮಗಳು ಉಂಟಾದ ಒಬ್ಬ ಸ್ತ್ರೀಯು ಅವನ ಸುದ್ದಿ ಕೇಳಿ, ಬಂದು, ಅವನ ಪಾದಕ್ಕೆ ಬಿದ್ದಳು. ಆ ಸ್ತ್ರೀಯು
ಜಾತಿಯಲ್ಲಿ ಸುರೊಫೊಯಿನೀಕ್ಯಳಾದ [3]ಗ್ರೇಕಳಾಗಿದ್ದಳು. ಅವಳು ತನ್ನ ಮಗಳೊಳಗಿಂದ ದೆವ್ವವನ್ನು ಹೊ
ರಡಿಸ ಬೇಕೆಂದು ಅವನನ್ನು ಬೇಡಿ ಕೊಂಡಾಗ,
೨೭ ಯೇಸು ಅವಳಿಗೆ, [4]ಮೊದಲು ಮಕ್ಕಳಿಗೆ ತೃಪ್ತಿಯಾಗ ಗೊಡಿಸು; ಯಾಕಂದರೆ ಮಕ್ಕಳ ರೊಟ್ಟಿಯನ್ನು
೨೮ ತೆಗೆದು, ನಾಯಿಗಳಿಗೆ ಹಾಕುವದು ಒಳ್ಳೇದಲ್ಲ, ಅಂದನು. ಅವಳು ಪ್ರತ್ಯುತ್ತರವಾಗಿ ಅವನಿಗೆ, ಹೌದು,
೨೯ ಕರ್ತನೇ, ಆದರೂ ನಾಯಿಗಳು ಮೇಜಿನ ಕೆಳಗೆ ಮಕ್ಕಳ ಎಂಜಲು ತಿನ್ನುತ್ತವೆ, ಅಂದಾಗ; ಅವನು ಅವ
೩೦ ಳಿಗೆ, ಈ ಮಾತಿಗೋಸ್ಕರ ಹೋಗು; ದೆವ್ವವು ನಿನ್ನ ಮಗಳಿಂದ ಹೊರಟದೆ, ಅಂದನು. ಆಗಲವಳು ತನ್ನ
ಮನೆಗೆ ಹೋಗಿ, ದೆವ್ವ ಹೊರಟದ್ದನ್ನೂ, ತನ್ನ ಮಗಳು [5]ಮಂಚದ ಮೇಲೆ ಬಿದ್ದಿರುವದನ್ನೂ, ಕಂಡಳು.

1. ಮತ್ತಾಯನ ಸುವಾರ್ತೆಯಲ್ಲಿ ಹತ್ತು ಕಟ್ಟಳೆಗಳ ಕ್ರಮದ ಪ್ರಕಾರ ಈ ಪಾಪಗಳನ್ನು ವರಿಶೆಯಾಗಿ ಹೇಳಿ ಇದೆ. (ಹೊರ. ೨೦. ಮತ್ತಾ. ೧೫. ೧೯ನ್ನೂ ಸರಿ ನೋಡ ಬೇಕು.) ಈ ಸುವಾರ್ತೆಯಲ್ಲಿ ಕೆಲ ಪಾಪಗಳನ್ನು ಕೂಡಿಸಿ ಹೇಳಿ ಇದೆ. ದುರಾಲೋಚನೆಗಳೇ ಬೇರೆ ಪಾಪಗಳಿಗೆ ಬೇರಾಗಿರುವದರಿಂದ ಅದನ್ನು ಮೊದಲು ಹೇಳಿ ಇದೆ. ಕೆಟ್ಟತನವೆಂಬದು ಮನಸ್ಸಿನ ಕ್ರೋಧವನ್ನೂ, ಬಂಡತನವೆಂಬದು ಮೀರಿದ ಮೋಹದಿಚ್ಛೆಯನ್ನೂ, ಕ್ರೂರ ದೃಷ್ಟಿ ಎಂಬದು ಹೊಟ್ಟೇಕಿಚ್ಚನ್ನೂ, ದುರ್ಬುದ್ಧಿ ಎಂಬದು ಭಕ್ತಿಹೀನತ್ವವನ್ನೂ ಸೂಚಿಸುತ್ತವೆ. (ಕೀರ್ತ. ೧೪. ೧.) ಒಬ್ಬೊಬ್ಬನ ಹೃದಯವೂ ಇಂಥಾ ಅಶುದ್ಧಗಳನ್ನು ಹೊರಡಿಸುವ ಬುಗ್ಗೆಯಾಗಿದೆ. ದೇವರ ಕೃಪೆಯಿಂದಲೇ ಇಂಥಾ ಹೃದಯವು ಮಾರ್ಪಟ್ಟು ನೆಟ್ಟಗಾಗ ಬೇಕು.

2. ೨೪—೩೦. ವಚನಗಳ ವ್ಯಾಖ್ಯಾನವನ್ನು ಮತ್ತಾ. ೧೫. ೨೧—೨೮. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

3. ಮತ್ತಾಯನ ಸುವಾರ್ತೆಯು ಯೆಹೂದ್ಯರಿಗಾಗಿ ಬರಿಯಲ್ಪಟ್ಟದ್ದರಿಂದ ಅವರು ಅಸಂಹಿಸುತ್ತಾ ಬಂದ ಕನಾನ್ಯರಿಗೆ ದೇವರು ಕೃಪೆ ತೋರಿಸಿದನೆಂದು ತೋರುವಂತೆ ಅದರಲ್ಲಿ ಕನಾನ್ಯ ಸ್ತ್ರೀ ಎಂದೂ, ಈ ಸುವಾರ್ತೆಯು ಅನ್ಯ ಜನಾಂಗದವರಿಗಾಗಿ ಬರೆಯಲ್ಪಟ್ಟದ್ದರಿಂದ ಇದರಲ್ಲಿ ಗ್ರೇಕ ಸ್ತ್ರೀ ಎಂದೂ ಬರೆಯಲ್ಪಟ್ಟದೆ.

4. ಈ ಮಾತುಗಳು ಈ ಸುವಾರ್ತೆಯಲ್ಲಿ ಮಾತ್ರ ಉಂಟು. ಇವುಗಳಿಂದ ಕರ್ತನು ಅವಳ ವಿಜ್ಞಾಪನೆಯನ್ನು ಪೂರ್ಣವಾಗಿ ತಳ್ಳಿ ಬಿಡಲಿಲ್ಲವೆಂದು ತಿಳಿಯ ಬಹುದು.

5. ಈ ಮಾತುಗಳನ್ನು ಈ ಸುವಾರ್ತೆ ಒಂದರಲ್ಲಿ ಮಾತ್ರ ನೋಡ ಬಹುದು. ತನ್ನನ್ನು ಹಿಡಿದಿದ್ದ ದೆವ್ವದ ಮೂರ್ಖದಿಂದ ಮಂಚದಲ್ಲಿ ಮಲಗಲಾರದೆ ಇದ್ದವಳು ಈಗ ದೆವ್ವವು ತನ್ನನ್ನು ಬಿಟ್ಟು ಹೋದದರಿಂದ ಶಾಂತವಾಗಿ ಮಲಗಿದ್ದಳು.

ಕ್ರಿಸ್ತನು ಗಲಿಲಾಯಕ್ಕೆ ತಿರಿಗಿ ಬಂದದ್ದು; ಆತನ ಅದ್ಭುತಗಳನ್ನು ಕಂಡ ಜನರು ಆಶ್ಚರ್ಯ ಪಟ್ಟದ್ದು.

೩೧ ಅವನು [1]ತೂರ್ ಸಿದೋನ್ ಪ್ರಾಂತ್ಯಗಳಿಂದ ತಿರಿಗಿ ಹೊರಟು, ದೆಕಪೊಲಿಯ ಪ್ರಾಂತ್ಯಗಳ ಮಧ್ಯದಿಂದ
ಗಲಿಲಾಯ ಸಮುದ್ರದ ಬಳಿಗೆ ಬಂದನು.
೩೨ ಆಗ ನತ್ತಿ ಮಾತಾಡುವ ಕಿವುಡನನ್ನು ಅವನ ಬಳಿಗೆ ತಂದು, ಅವನ ಮೇಲೆ ಕೈ ಇಡ ಬೇಕೆಂದು ಅವನನ್ನು
೩೩ ಬೇಡಿ ಕೊಂಡರು. ಅವನು ಅವನನ್ನು ಸಮೂಹದಿಂದ ಏಕಾಂತವಾಗಿ ಕರಕೊಂಡು ಹೋಗಿ, ತನ್ನ ಬೆರ
೩೪ ಳುಗಳನ್ನು ಅವನ ಕಿವಿಗಳಲ್ಲಿ ಹಾಕಿ, ಉಗುಳಿ, ಅವನ [2]ನಾಲಿಗೆಯನ್ನು ಮುಟ್ಟಿ, ಆಕಾಶವನ್ನು ನೋಡಿ,
೩೫ [3]ಮೂಲುಗಿ, ಎಪ್ಫಥಾ ಎಂದು ಅವನಿಗೆ ಹೇಳಿದನು; ಅದೇನಂದರೆ, ತೆರೆದಾಗು. ಸಂಗಡಲೇ ಅವನ ಕಿವಿಗ
ಳು ತೆರೆಯಲ್ಪಟ್ಟು, ಅವನ ನಾಲಿಗೆಯ ನರವು ಬಿಚ್ಚಲ್ಪಟ್ಟು, ಅವನು ಚನ್ನಾಗಿ ಮಾತಾಡಿದನು.
೩೬ ಆಗ [4]ಯಾರಿಗೂ ಹೇಳ ಬಾರದೆಂದು, ಅವರಿಗೆ ಆಜ್ಞಾಪಿಸಿದನು. ಆದರೆ ಅವನು ಅವರಿಗೆ ಎಷ್ಟು ಆಜ್ಞಾ
೩೭ ಪಿಸಿದನೋ, ಅಷ್ಟು ಅಧಿಕಾಧಿಕವಾಗಿ ಸಾರಿದರು. ಎಲ್ಲಾ ಚನ್ನಾಗಿ ಮಾಡಿದ್ದಾನೆ; ಕಿವುಡರು ಕೇಳುವ
ಹಾಗೆಯೂ, ಮೂಕರು ಮಾತಾಡುವ ಹಾಗೆಯೂ ಮಾಡುತ್ತಾನೆಂದು ಹೇಳಿ, ಅತ್ಯಧಿಕವಾಗಿ ಆಶ್ಚರ್ಯ
ಪಟ್ಟರು.

ಕ್ರಿಸ್ತನು ಹೇರಳ ಜನರಿಗೆ ಅದ್ಭುತವಾಗಿ ಆಹಾರ ಕೊಟ್ಟದ್ದು.

**8.** [5]ಆ ದಿವಸಗಳಲ್ಲಿ ಬಹು ದೊಡ್ಡ ಸಮೂಹವು ಇರಲಾಗಿ, ಅವರಿಗೆ ಊಟಕ್ಕೆ ಏನೂ ಇಲ್ಲದೆ ಇರುವಾಗ,
೨ ಯೇಸು ತನ್ನ ಶಿಷ್ಯರನ್ನು ಹತ್ತರ ಕರೆದು, ಸಮೂಹದ ಮೇಲೆ ಅಂತಃಕರಣ ಪಡುತ್ತೇನೆ; ಯಾಕಂದರೆ ಇದೇ
೩ ಮೂರನೇ ದಿವಸ ಊಟಕ್ಕೆ ಏನೂ ಇಲ್ಲದೆ ನನ್ನ ಬಳಿಯಲ್ಲಿ ಇರುತ್ತಾರೆ. ಹಾಗಾದರೆ ನಾನು ಅವರನ್ನು
ಉಪವಾಸವಾಗಿ ಮನೆಗೆ ಕಳುಹಿಸಿದರೆ, ಮಾರ್ಗದಲ್ಲಿ ಬಳಲಿ ಹೋಗುವರು; ಯಾಕಂದರೆ ಅವರಲ್ಲಿ ಕೆಲ
ಬರು ದೂರದಿಂದ ಬಂದಿದ್ದಾರೆಂದು, ಅವರಿಗೆ ಹೇಳಿದಾಗ;
೪ ಅವನ ಶಿಷ್ಯರು ಅವನಿಗೆ ಪ್ರತ್ಯುತ್ತರವಾಗಿ, ಇವರನ್ನು ಒಬ್ಬನು ಈ ಅರಣ್ಯದಲ್ಲಿ ರೊಟ್ಟಿಗಳಿಂದ ಹ್ಯಾಗೆ
೫ ಪೋಷಿಸ ಬಲ್ಲನು? ಅಂದರು. ಅವನು ಅವರನ್ನು, ನಿಮಗೆ ಎಷ್ಟು ರೊಟ್ಟಿಗಳುಂಟೆಂದು ಕೇಳಿದಾಗ, ಅವರು,
ಏಳು, ಅಂದರು.
೬ ಆಗಲವನು ಸಮೂಹಕ್ಕೆ ನೆಲದ ಮೇಲೆ ಕೂತು ಕೊಳ್ಳಲಾಜ್ಞಾಪಿಸಿ, ಆ ಏಳು ರೊಟ್ಟಿಗಳನ್ನು ತೆಗೆದು
ಕೊಂಡು, ಸ್ತೋತ್ರ ಮಾಡಿ, ಮುರಿದು, ಹಂಚುವದಕ್ಕೆ ತನ್ನ ಶಿಷ್ಯರಿಗೆ ಕೊಟ್ಟನು; ಅವರು ಸಮೂಹಕ್ಕೆ
೭ ಹಂಚಿದರು. ಮತ್ತು ಕೆಲವು ಮೀನುಗಳು ಅವರಿಗೆ ಇರಲಾಗಿ, ಅವನು ಸ್ತೋತ್ರ ಮಾಡಿ, ಅವುಗಳನ್ನು

1. ಕ್ರಿಸ್ತನು ಸಿದೋನ್ ಶೀಮೆಯ ಮಾರ್ಗವಾಗಿ ಉತ್ತರ ಕಡೆ ಪ್ರಯಾಣ ಮಾಡಿ, ಯೊರ್ದನನ್ನು ದಾಟಿ, ಗಲಿಲಾಯ ಸಮುದ್ರದ ಪೂರ್ವ ದಿಕ್ಕಿಗೆ ಬಂದನು. ಅಲ್ಲಿ ನತ್ತಿ ಮಾತಾಡುವ ಕಿವುಡನು ಗುಣವಾದ ಅದ್ಭುತವು ಈ ಸುವಾರ್ತೆಯಲ್ಲಿ ಮಾತ್ರ ಬರಿಯಲ್ಪಟ್ಟದೆ. ಮತ್ತಾಯನ ಸುವಾರ್ತೆಯಲ್ಲಿ ಬೇರೆ ಅದ್ಭುತಗಳನ್ನು ಹೇಳಿ, ಅದರ ಸಂಗಡ ಮೂಕರು ಮಾತಾಡಿದ್ದನ್ನೂ ಅದಕ್ಕೆ ಜನರು ಆಶ್ಚರ್ಯ ಪಟ್ಟದ್ದನ್ನೂ ಹೇಳಿ ಇದೆ. (ಮತ್ತಾ. ೧೫. ೩೧.)

2. ಈ ಅದ್ಭುತವನ್ನೂ ಇನ್ನೂ ಎರಡು ಅದ್ಭುತಗಳನ್ನೂ ಮಾಡಿದ್ದರಲ್ಲಿ ಕರ್ತನು ಒಂದು ಯತ್ನವನ್ನು ಬಳಿಸಿದನೆಂದು ಹೇಳಿದೆ. (ಮಾರ್ಕ. ೮. ೨೩—೨೬. ಯೋಹಾ. ೯. ೧—೭.) ಹೀಗೆ ಮುಟ್ಟಿದ್ದರಿಂದಲೂ, ಬೇರೆ ಯತ್ನಗಳನ್ನು ಬಳಿಸಿದ್ದರಿಂದಲೂ ಪರೋಪಕಾರಿ ಯಾರೆಂದೂ, ಆ ಉಪಕಾರ ಹೊಂದಿದವರ್ಯಾರೆಂದೂ ತಿಳಿಯ ಹೇಳುವದಾಯಿತು. ನಾವು ಬಳಿಸುವ ಯತ್ನಗಳನು ಫಲಿಸ ಮಾಡುವದಕ್ಕೆ ದೇವರ ಸಹಾಯ ಅವಶ್ಯವಾಗಿದೆ ಎಂದು ಇದರಿಂದ ತಿಳಿಯ ತಕ್ಕದ್ದು.

3. ಈ ಮನುಷ್ಯನು ಪಟ್ಟ ಕಷ್ಟವನ್ನು ಕ್ರಿಸ್ತನು ನೋಡಿ, ಅದರ ಕಾರಣವಾದ ಪಾಪವನ್ನು ನೆನಸಿ, ಮೂಲುಗಿದನು. ಲಾಜರನು ಸತ್ತಾಗ ಕಣ್ಣೀರು ಬಿಟ್ಟದ್ದಕ್ಕೆ ಇದೇ ಕಾರಣ. ಈ ನತ್ತಿ ಕಿವುಡನನ್ನು ನೋಡಿ, "ಎಪ್ಫಥಾ", ಅಂದನು. ಇದು ಅರಮೆಯ ಭಾಷೆಯ ಶಬ್ದ. ತೆರೆಯಲ್ಪಡಲಿ ಎಂಬುವದೇ ಇದರರ್ಥ.

4. ಈ ಅದ್ಭುತವು ನಡೆದ ಶೀಮೆಯಲ್ಲಿಯೇ ಮುಂಚೆ ದೆವ್ವ ಹಿಡಿದ ಒಬ್ಬ ಮನುಷ್ಯನನ್ನು ಗುಣ ಮಾಡಿ, ಅದನ್ನು ಎಲ್ಲರಿಗೂ ಹೇಳಲಾಜ್ಞಾಪಿಸಿದನು. (ಮಾರ್ಕ. ೫. ೧೯, ೨೦.) ಈಗ ಆತನು ಸ್ವಲ್ಪ ಕಾಲ ಅಲ್ಲಿರ ಮನಸ್ಸಾಗಿದ್ದದರಿಂದ ಆ ಅದ್ಭುತವನ್ನು ಯಾರಿಗೂ ಹೇಳ ಬೇಡವೆಂದು ಆಜ್ಞಾಪಿಸಿದನು.

5. ೧—೧೦. ವಚನಗಳ ವ್ಯಾಖ್ಯಾನವನ್ನು ಮತ್ತಾ. ೧೫. ೩೨—೩೯. ವಚನಗಳ ವ್ಯಾಖ್ಯಾನದಲಿ ನೋಡ ಬೇಕು.



೮ ಸಹ ಹಂಚ ಹೇಳಿದನು. ಆಗಲವರು ಉಂಡು, ತೃಪ್ತಿಯಾಗಿ, ಮಿಕ್ಕ ತುಂಡುಗಳನ್ನು ಏಳು ಪುಟ್ಟಿ ತುಂಬ
೯ ಎತ್ತಿದರು. ಉಂಡವರು ಹೆಚ್ಚು ಕಡಿಮೆ ನಾಲ್ಕು ಸಾವಿರ ಮಂದಿಯಾಗಿದ್ದರು. ಆ ಮೇಲೆ ಅವರನ್ನು
ಕಳುಹಿಸಿ ಬಿಟ್ಟನು.

ಫರಿಸಾಯರು ಸದ್ದುಕಾಯರು ಗುರುತನ್ನು ಕೇಳಿದ್ದು; ಅವರ ಬೋಧನೆಗೆ ಎಚ್ಚರಿಕೆಯಾಗಿರ ಹೇಳಿದ್ದು.

೧೦ ಮತ್ತು ಸಂಗಡಲೇ ತನ್ನ ಶಿಷ್ಯರೊಂದಿಗೆ ಹಡಗವನ್ನೇರಿ, ದಲ್ಮನೂತ ಶೀಮೆಗೆ ಬಂದನು.
೧೧ ಆಗ [1]ಫರಿಸಾಯರು ಹೊರಟು, ಆಕಾಶದಿಂದ ಒಂದು ಗುರುತನ್ನು ಅವನ ಬಳಿಯಲ್ಲಿ ಹುಡುಕಿ, ಅವನನ್ನು
೧೨ ಶೋಧಿಸುತ್ತಾ, ಅವನ ಸಂಗಡ ತರ್ಕ ಮಾಡಲಾರಂಭಿಸಿದರು. ಆಗಲವನು ತನ್ನ ಆತ್ಮದಲ್ಲಿ [2]ಮೂಲುಗಿ,
ಈ ಸಂತತಿಯು ಗುರುತನ್ನು ಹುಡುಕುವದೇನು? ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಈ ಸಂತತಿಗೆ ಗುರುತು
೧೩ ಕೊಡಲ್ಪಡದು, ಅಂದನು. ಮತ್ತು ಅವರನ್ನು ಬಿಟ್ಟು, ತಿರಿಗಿ ಹಡಗವನ್ನೇರಿ, ಆಚೆಗೆ ಹೊರಟು ಹೋದನು.
೧೪ ಆದರೆ [3]ಶಿಷ್ಯರು ರೊಟ್ಟಿಗಳನ್ನು ತಕ್ಕೊಳ್ಳುವದಕ್ಕೆ ಮರೆತು ಬಿಟ್ಟು, ಒಂದೇ ರೊಟ್ಟಿ ಹೊರ್ತು, ಹಡಗದಲ್ಲಿ
೧೫ ಮತ್ತೊಂದು ಇಲ್ಲದೆ ಇದ್ದರು. ಆಗಲವನು ಅವರಿಗೆ, ನೋಡಿ ಕೊಳ್ಳಿರಿ, ಫರಿಸಾಯರ ಹುಳಿ ಹಿಟ್ಟಿಗೂ
೧೬ ಹೆರೋದನ ಹುಳಿ ಹಿಟ್ಟಿಗೂ ಎಚ್ಚರಿಕೆಯಾಗಿರ್ರಿ, ಎಂದು ಅಪ್ಪಣೆ ಕೊಟ್ಟನು. ಅದಕ್ಕೋಸ್ಕರ ಅವರು, ನಮಗೆ
ರೊಟ್ಟಿಗಳು ಇಲ್ಲದ ಕಾರಣವೇ, ಎಂದು ತಮ್ಮಲ್ಲಿ ಮಾತಾಡಿದಾಗ,
೧೭ ಯೇಸು ಅದನ್ನು ತಿಳಿದು ಕೊಂಡು, ಅವರಿಗೆ ಹೇಳಿದ್ದೇನಂದರೆ, ನಿಮಗೆ ರೊಟ್ಟಿಗಳಿಲ್ಲದ ಕಾರಣ ಮಾತಾ
ಡುವದೇನು? ಇನ್ನು ಮನಸ್ಸಿಡುವದಿಲ್ಲವೋ? ಗ್ರಹಿಸುವದಿಲ್ಲವೋ? ಇನ್ನೂ ನಿಮಗೆ [4]ಕಠಿಣವಾದ ಹೃದಯ
೧೮ ವುಂಟೋ? ಕಣ್ಣುಗಳಿಂದ ಕಾಣುವದಿಲ್ಲವೋ? ಕಿವಿಗಳಿಂದ ಕೇಳುವದಿಲ್ಲವೋ? ಮತ್ತು ಜ್ಞಾಪಕ ಮಾಡಿ
೧೯ ಕೊಳ್ಳುವದಿಲ್ಲವೋ? ನಾನು ಆ ಐದು ರೊಟ್ಟಿಗಳನ್ನು ಐದು ಸಾವಿರ ಮಂದಿಗೆ ಮುರಿದು ಕೊಟ್ಟಾಗ,
೨೦ ಎಷ್ಟು ಪುಟ್ಟಿ ತುಂಬ ತುಂಡುಗಳನ್ನು ಎತ್ತಿದಿರಿ? ಅವನಿಗೆ, ಹನ್ನೆರಡು, ಅಂದರು. ಇದಲ್ಲದೆ ಆ ಏಳು ರೊಟ್ಟಿ
ಗಳನ್ನು ನಾಲ್ಕು ಸಾವಿರ ಮಂದಿಗೆ ಮುರಿದು ಕೊಟ್ಟಾಗ, ಮಿಕ್ಕ ತುಂಡುಗಳನ್ನು ಎಷ್ಟು ಪುಟ್ಟಿಗಳನ್ನು
೨೧ ಎತ್ತಿದಿರಿ? ಅವರು, ಏಳು, ಅಂದರು. ಆಗಲವರಿಗೆ, ನೀವು ಗ್ರಹಿಸದೆ ಇರುವದು ಹ್ಯಾಗೆ? ಅಂದನು.

ಬೆತ್ಸಾಯಿದದಲ್ಲಿ ಒಬ್ಬ ಕುರುಡನಿಗೆ ದೃಷ್ಟಿ ಕೊಟ್ಟದ್ದು.

೨೨ ಮತ್ತು ಅವನು [5]ಬೆತ್ಸಾಯಿದಕ್ಕೆ ಬಂದಾಗ, ಕುರುಡನನ್ನು ಅವನ ಬಳಿಗೆ ತಂದು, ಅವನನ್ನು ಮುಟ್ಟ ಬೇ
೨೩ ಕೆಂದು, ಅವನನ್ನು ಬೇಡಿ ಕೊಂಡರು. ಅವನು ಕುರುಡನ ಕೈ ಹಿಡಿದು, ಅವನನ್ನು ಗ್ರಾಮದ ಹೊರಗೆ
ಕರಕೊಂಡು ಹೋಗಿ, ಅವನ ಕಣ್ಣುಗಳಲ್ಲಿ ಉಗುಳಿ, ಅವನ ಮೇಲೆ ಕೈಗಳನ್ನಿಟ್ಟು, ಏನಾದರೂ ನೋಡುತ್ತೀ

1. ೧೧—೧೩. ವಚನಗಳ ವ್ಯಾಖ್ಯಾನವನ್ನು ಮತ್ತಾ. ೧೬. ೧—೪. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

2. ಮತ್ತೂ ಮತ್ತೂ ಗುರುತುಗಳನ್ನು ಕೇಳಿದ ದುರ್ಮಾರ್ಗರ ಕೆಟ್ಟ ಗುಣಕ್ಕಾಗಿ ದುಃಖ ಪಟ್ಟನು. ಕ್ರಿಸ್ತನು ಮಾಡಿದ ಅದ್ಭುತಗಳನ್ನು ಅವರು ಕಂಡಿದ್ದಾಗ್ಯೂ, ಆತನನ್ನು ಹೊಂದಿಕೊಳ್ಳುವ ಒಳ್ಳೇ ಮನಸ್ಸಿನಿಂದ ಆತನನ್ನು ಕೇಳದೆ, ಮೂರ್ಖತನದಿಂದ ಕೇಳಿದ್ದರಿಂದ ಅದಕ್ಕಾಗಿ ಆತನು ದುಃಖ ಪಟ್ಟನು.

3. ೧೪—೨೧. ವಚನಗಳ ವ್ಯಾಖ್ಯಾನವನ್ನು ಮತ್ತಾ. ೧೬. ೫—೧೨. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

4. ದುರ್ಮಾರ್ಗರಾದ ನಿಮ್ಮ ದೇಶದವರ ಹಾಗೆ ನಿಮ್ಮ ಮನಸ್ಸು ಸಹ ಕಠಿಣವಾಯಿತೋ? ಅವರ ಮನಸ್ಸು ಕಲ್ಲಿನ ಹಾಗೆ ಘಟ್ಟಿಯಾಗಿರುವದೆಂದು ಯೆಶಾಯನು ಹೇಳಿದ್ದಾನೆ. (ಯೆಶಾ. ೬. ೯.) ನಿಮ್ಮ ಹೃದಯವು ಹಾಗಿರ ಬಹುದೋ? ಎಂಬ ಹಾಗೆ ಕ್ರಿಸ್ತನು ಮಾತಾಡಿದನು.

5. (ಬೆತ್ಸಾಯಿದ ಊರನ್ನು ಕುರಿತು ಮಾರ್ಕ. ೬. ೪೫. ವಚನದ ವ್ಯಾಖ್ಯಾನದಲ್ಲಿ ನೋಡ ಬೇಕು.) ಇದು ಉತ್ತರ ಬೆತ್ಸಾಯಿದವು. ಕ್ರಿಸ್ತನು ಗಲಿಲಾಯ ಸಮುದ್ರದ ಪೂರ್ವ ಥಡದ ಮಾರ್ಗವಾಗಿ ಫಿಲಿಪ್ಪನ ಕೈಸರೈಯಕ್ಕೆ ಹೋದನು. ಆ ಊರಿನಲ್ಲಿ ಕುರುಡನು ದೃಷ್ಟಿ ಹೊಂದಿದ ಅದ್ಭುತವನ್ನು ಈ ಸುವಾರ್ತೆಯಲ್ಲಿ ಮಾತ್ರ ನೋಡ ಬಹುದು. ಇದರಲ್ಲಿ ಒಂದು ಹೊರಗಿನ ಯತ್ನವು ಬಳಿಸಲ್ಪಟ್ಟಿತೆಂದೂ, ಕ್ರಮೇಣ ಗುಣವಾಯಿತೆಂದೂ ಹೇಳಿ ಇದೆ. ದೇವರ ಕ್ರಿಯೆ ಒಂದು ಪ್ರಕಾರವಲ್ಲ. ಆತನ ಜ್ಞಾನವನ್ನು ಯಾರು ಎಣಿಸ ಬಹುದು?

೨೪ ಯೋ? ಎಂದು, ಅವನನ್ನು ಕೇಳಿದನು. ಅವನು ಕಣ್ಣೆತ್ತಿ, [1]ತಿರುಗಾಡುವ ಮನುಷ್ಯರನ್ನು ಮರಗಳ ಹಾಗೆ
೨೫ ನೋಡುತ್ತೇನೆ, ಅಂದನು. ಆ ಮೇಲೆ ಅವನು ತಿರಿಗಿ ಅವನ ಕಣ್ಣುಗಳ ಮೇಲೆ ಕೈಗಳನ್ನಿಟ್ಟು, ಅವನನ್ನು
೨೬ ಮೇಲೆ ನೋಡ ಮಾಡಿದಾಗ, ಅವನು ಸ್ವಸ್ಥವಾಗಿ, ಎಲ್ಲರನ್ನು ಸ್ಪಷ್ಟವಾಗಿ ನೋಡಿದನು. ಆಗ, ನೀನು
[2]ಗ್ರಾಮಕ್ಕೆ ಹೋಗ ಬೇಡ, ಮತ್ತು ಗ್ರಾಮದಲ್ಲಿ ಯಾರಿಗಾದರೂ ಹೇಳ ಬೇಡೆಂದು ಹೇಳಿ, ಅವನನ್ನು ಮ
ನೆಗೆ ಕಳುಹಿಸಿದನು.

ಪೇತ್ರನ ಅರಿಕೆ; ಕ್ರಿಸ್ತನು ತನ್ನ ಕಷ್ಟ, ಮರಣ, ಪುನರುತ್ಥಾನಗಳನ್ನು ಮುಂತಿಳಿಸಿ, ಮನೋದೃಢವಾಗಿರ ಹೇಳಿದ್ದು.

೨೭ [3]ಮತ್ತು ಯೇಸುವೂ ಅವನ ಶಿಷ್ಯರೂ, ಫಿಲಿಪ್ಪನ ಕೈಸರೈಯದ ಗ್ರಾಮಗಳಿಗೆ ಹೋಗುವಾಗ, ಮನುಷ್ಯರು
೨೮ ನನ್ನನ್ನು ಯಾರೆಂದು, ಹೇಳುತ್ತಾರೆಂಬದಾಗಿ, ಮಾರ್ಗದಲ್ಲಿ ತನ್ನ ಶಿಷ್ಯರನ್ನು ಕೇಳಿದನು. ಅವರು, ಸ್ನಾನಿ
ಕನಾದ ಯೋಹಾನನೆಂದೂ, ಕೆಲವರು, ಎಲೀಯನೆಂದೂ, ಬೇರೆ ಕೆಲವರು, ಪ್ರವಾದಿಗಳಲ್ಲಿ ಒಬ್ಬನೆಂದೂ,
೨೯ ಉತ್ತರ ಕೊಟ್ಟಾಗ, ಅವನು ಅವರಿಗೆ, ಆದರೆ ನೀವು ನನ್ನನ್ನು ಯಾರೆಂದು, ಹೇಳುತ್ತೀರಿ? ಅಂದನು.
೩೦ ಪೇತ್ರನು ಪ್ರತ್ಯುತ್ತರವಾಗಿ ಅವನಿಗೆ, ನೀನು [4]ಕ್ರಿಸ್ತನೇ, ಅಂದಾಗ; ತನ್ನನ್ನು ಕುರಿತು ಯಾರಿಗೂ ಹೇಳ ಬಾರ
ದೆಂದು, ಅವರಿಗೆ ಆಜ್ಞಾಪಿಸಿದನು.
೩೧ ಮತ್ತು ಮನುಷ್ಯನ ಮಗನು ಬಹಳ ಶ್ರಮೆ ಪಟ್ಟು, ಹಿರಿಯರೂ ಪ್ರಧಾನ ಯಾಜಕರೂ ಶಾಸ್ತ್ರಿಗಳೂ,
ಇವರಿಂದ ತಳ್ಳಲ್ಪಟ್ಟು, ಕೊಲ್ಲಲ್ಪಟ್ಟು, [5]ಮೂರು ದಿವಸಗಳಾದ ಮೇಲೆ ಏಳ ಬೇಕೆಂದು, ಅವರಿಗೆ ಬೋಧಿಸ
೩೨ ಲಾರಂಭಿಸಿದನು. ಅವನು ಆ ಮಾತನ್ನು ಸ್ಪಷ್ಟವಾಗಿ ಹೇಳುವಾಗ,
೩೩ ಪೇತ್ರನು ಅವನನ್ನು ತಕ್ಕೊಂಡು, ಗದರಿಸಲಾರಂಭಿಸಿದನು. ಆದರೆ ಅವನು ತಿರುಗಿ ಕೊಂಡು, ತನ್ನ [6]ಶಿಷ್ಯರ
ನ್ನು ನೋಡಿ, ಪೇತ್ರನನ್ನು ಗದರಿಸಿ, ಸೈತಾನನೇ, ನನ್ನ ಹಿಂದೆ ಹೋಗು; ಯಾಕಂದರೆ ನೀನು ದೇವರವುಗಳ
ನ್ನಲ್ಲ, ಮನುಷ್ಯರವುಗಳನ್ನೇ ಚಿಂತಿಸುತ್ತೀ, ಅಂದನು.
೩೪ ಮತ್ತು [7]ಸಮೂಹವನ್ನೂ ತನ್ನ ಶಿಷ್ಯರನ್ನೂ ಕೂಡ ಕರೆದು, ಅವರಿಗೆ ಹೇಳಿದ್ದೇನಂದರೆ, ನನ್ನ ಹಿಂದೆ ಬರ
ಬೇಕೆಂದಿರುವವನು ತನ್ನನ್ನು ಬೊಂಕಿ, ತನ್ನ ಶಿಲುಬೆಯನ್ನು ಎತ್ತಿ ಕೊಂಡು, ನನ್ನನ್ನು ಹಿಂಬಾಲಿಸಲಿ.
೩೫ ಯಾಕಂದರೆ ತನ್ನ ಪ್ರಾಣವನ್ನು ರಕ್ಷಿಸ ಬೇಕೆಂದಿರುವವನು ಅದನ್ನು ಕಳಕೊಳ್ಳುವನು; ಆದರೆ ನನಗೋಸ್ಕರ
ವೂ ಸುವಾರ್ತೆಗೋಸ್ಕರವೂ ತನ್ನ ಪ್ರಾಣವನ್ನು ಕಳಕೊಳ್ಳುವವನ್ಯಾವನೋ, ಅವನು ಅದನ್ನು ರಕ್ಷಿಸಿ ಕೊ
೩೬ ಳ್ಳುವನು. ಯಾಕಂದರೆ ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿ ಕೊಂಡರೂ, ತನ್ನ ಪ್ರಾಣದ
೩೭ ನಷ್ಟ ಪಟ್ಟರೆ, ಅವನಿಗೆ ಪ್ರಯೋಜನವೇನು? ಇಲ್ಲವೆ, ತನ್ನ ಪ್ರಾಣಕ್ಕೆ ಬದಲಾಗಿ ಮನುಷ್ಯನು ಕೊಡ ತಕ್ಕ
೩೮ ದ್ದೇನು? ಯಾಕಂದರೆ ಈ [8]ವ್ಯಭಿಚಾರವೂ ಪಾಪವೂ ಉಳ್ಳ ಸಂತತಿಯಲ್ಲಿ ನನಗೂ ನನ್ನ ವಾಕ್ಯಗಳಿಗೂ
ನಾಚಿಕೆ ಪಡುವವನ್ಯಾವನೋ, ಅವನಿಗೆ ಮನುಷ್ಯನ ಮಗನು ಸಹ, ತನ್ನ ತಂದೆಯ ಮಹಿಮೆಯಲ್ಲಿ ಪರಿ
ಶುದ್ಧ ದೂತರ ಸಂಗಡ ಬರುವಾಗ, ನಾಚಿಕೆ ಪಡುವನು.

1. ಮನುಷ್ಯರು ತಿರುಗಾಡುವದರಿಂದಲೇ ಮನುಷ್ಯರಿಗೂ ಮರಗಳಿಗೂ ಇರುವ ವ್ಯತ್ಯಾಸ ತಿಳಿಯಿತು. ಶುದ್ಧ ಮೊಬ್ಬಾಗಿದ್ದ ಅವನ ಕಣ್ಣಿಗೆ ಮೊದಲು ಮಂಜಿನ ಹಾಗೆ ಕಾಣಿಸ ತಕ್ಕ ಬೆಳಕೂ, ತರುವಾಯ ಸ್ಪಷ್ಟವಾಗಿ ಕಾಣಿಸ ತಕ್ಕ ದೃಷ್ಟಿಯೂ ಬಂತು.

2. ಇದರಿಂದ ಆ ಮನುಷ್ಯನು ಆ ಗ್ರಾಮದವನಲ್ಲವೆಂದು ಕಾಣುತ್ತದೆ.

3. ೮. ೨೭—೩೮; ೯. ಸಂಧಿಯೂ, ಮತ್ತಾ. ೧೬. ೧೩—೨೮; ೧೭, ೧೮. ಸಂಧಿಗಳೂ ಸಮ್ಮಂಧವಾಗಿವೆ. (ಮತ್ತಾ. ೧೬. ೧೩; ೧೮. ೧. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.)

4. ಪೇತ್ರನು ಮಾಡಿದ ಅರಿಕೆಯನು ಇದರಲಿ ಪೂರ್ಣವಾಗಿ ... ಹೇಳಲಿಲ್ಲ. ಮತ್ತು ಕರ್ತನು ಅವನಿಗೆ ಹೊಗಳಿಕೆಯಾಗಿ ಹೇಳಿದ ಮಾತನ್ನು ಸಹ ಬರಿಯಲಿಲ್ಲ.

5. ಇಲ್ಲಿ ಹೇಳಿದ ಮೂರು ದಿವಸಗಳನ್ನು ಕುರಿತು ಮತ್ತಾ. ೧೨. ೪೦. ವಚನದ ವ್ಯಾಖ್ಯಾನದಲ್ಲಿ ನೋಡ ಬೇಕು.

6. ಪೇತ್ರನು ಹೇಳಿದ ಪ್ರಕಾರ ಬೇರೆ ಶಿಷ್ಯರು ಸಹ ಹೇಳ ಮನಸ್ಸಾಗಿರುವರು.

7. ಜನರ ಮುಂದೆ ಆತನು ತನ್ನ ಮಹಿಮೆಯನ್ನು ತೋರಿಸ ಲಿಲ್ಲ. (೩೦. ವ.) ಆದರೆ ಉಪದ್ರವಾದ ಶಿಲುಬೆಯನ್ನು ಕುರಿತೂ, ಅದರಿಂದ ಅವರು ಕಲಿಯ ತಕ್ಕ ತಾಳ್ಮೆಯನ್ನು ಕುರಿತೂ ಎಲ್ಲರಿಗೂ ಉಪದೇಶಿಸಿದನು.

8. ಮತ್ತಾ. ೧೨. ೩೯. ವಚನದ ವ್ಯಾಖ್ಯಾನದಲ್ಲಿ ನೋಡ ಬೇಕು.



9. ಮತ್ತು ಅವನು ಅವರಿಗೆ ಹೇಳಿದ್ದೇನಂದರೆ, ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಇಲ್ಲಿ ನಿಂತವರಲ್ಲಿ ಕೆಲ
ವರು, ದೇವರ ರಾಜ್ಯವು ಬಲವಾಗಿ ಬಂದಿರುವದನ್ನು ನೋಡುವ ತನಕ, ಮರಣವನ್ನು ರುಚಿ ನೋಡರು.

ಕ್ರಿಸ್ತನು ರೂಪಾಂತರವಾದದ್ದು.

೨ ಮತ್ತು [1]ಆರು ದಿವಸಗಳಾದ ಮೇಲೆ, ಯೇಸು ಪೇತ್ರನನ್ನೂ ಯಾಕೋಬನನ್ನೂ ಯೋಹಾನನನ್ನೂ ಕರೆ
ದು, ಇವರನ್ನು ಮಾತ್ರ ಏಕಾಂತವಾಗಿ ಎತ್ತರವಾದ ಬೆಟ್ಟಕ್ಕೆ ಕರಕೊಂಡು ಹೋಗಿ, ಅವರ ಮುಂದೆ ರೂ
೩ ಪಾಂತರವಾದನು. ಮತ್ತು ಅವನ ವಸ್ತ್ರಗಳು ಭೂಮಿಯ ಮೇಲಿರುವ ಯಾವ ಅಗಸನಾದರೂ ಬಿಳುಪು
೪ ಮಾಡಲಾರದ ಪ್ರಕಾರ, ಹಿಮದಂತೆ ಬಹಳ ಬಿಳುಪಾಗಿ ಪ್ರಕಾಶವಾದವು. ಮತ್ತು ಎಲೀಯನು ಮೋಶೆ
ಯ ಸಂಗಡ ಅವರಿಗೆ ಕಾಣಿಸಿ ಕೊಂಡು, ಯೇಸುವಿನ ಸಂಗಡ ಸಂಭಾಷಣೆ ಮಾಡುತ್ತಿದ್ದರು.
೫ ಆಗ ಪೇತ್ರನು ಉತ್ತರ ಕೊಟ್ಟು, ಯೇಸುವಿಗೆ, ರಬ್ಬಿಯೇ, ನಾವು ಇಲ್ಲಿರುವದು ಒಳ್ಳೇದು; ಮೂರು ಪರ್ಣ
೬ ಶಾಲೆಗಳನ್ನು ಮಾಡುವ; ನಿನಗೆ ಒಂದು, ಮೋಶೆಗೆ ಒಂದು, ಎಲೀಯನಿಗೆ ಒಂದು, ಅಂದನು. ಯಾಕಂದರೆ
೭ ಅವರು ಭಯಭ್ರಾಂತರಾದ ಕಾರಣ ತಾನು ಏನು ಹೇಳಲೆಂದು, ಅವನಿಗೆ ತಿಳಿಯಲಿಲ್ಲ. ಆಗ ಮೇಘವು
ಅವರ ಮೇಲೆ ನೆರಳು ಹಾಕಲಾಗಿ, ಆ ಮೇಘದೊಳಗಿಂದ, ಇವನೇ ನನ್ನ ಪ್ರಿಯ ಮಗನು, ಇವನನ್ನು ಕೇ
೮ ಳಿರಿ, ಎಂಬ ಶಬ್ದವು ಬಂತು. ಸಂಗಡಲೇ ಅವರು ಸುತ್ತಲು ನೋಡಿ, ತಮ್ಮ ಸಂಗಡ ಇರುವ ಯೇಸು
ಒಬ್ಬನನ್ನೇ ಹೊರ್ತು, ಇನ್ನ್ಯಾವನನ್ನೂ ನೋಡಲಿಲ್ಲ.
೯ ಅವರು ಬೆಟ್ಟದಿಂದಿಳಿದು ಬರುವಾಗ, ತಾವು ನೋಡಿದವುಗಳನ್ನು ಮನುಷ್ಯನ ಮಗನು ಸತ್ತವರೊಳಗಿಂದ
೧೦ ಏಳುವ ಪರ್ಯಂತರ ಯಾರಿಗೂ ಹೇಳ ಬಾರದೆಂದು, ಅವರಿಗೆ ಅಪ್ಪಣೆ ಕೊಟ್ಟನು. ಆಗ [2]ಸತ್ತವರೊಳಗಿಂದ
ಏಳುವದು ಅಂದರೆ ಏನೆಂದು ತರ್ಕ ಮಾಡಿ ಕೊಂಡು, ಆ ವಾಕ್ಯವನ್ನು ತಮ್ಮೊಳಗೆ ಇಟ್ಟು ಕೊಂಡರು.
೧೧ ಮತ್ತು ಎಲೀಯನು ಮೊದಲಾಗಿ ಬರ ಬೇಕೆಂದು, ಶಾಸ್ತ್ರಿಗಳು ಹೇಳುವದು ಯಾಕೆಂದು ಅವನನ್ನು ಕೇ
೧೨ ಳಿದಾಗ, ಅವನು ಪ್ರತ್ಯುತ್ತರವಾಗಿ ಅವರಿಗೆ ಹೇಳಿದ್ದೇನಂದರೆ, ಎಲೀಯನು ಮೊದಲಾಗಿ ಬಂದು, ಎಲ್ಲವು
ಗಳನ್ನು ನೆಟ್ಟಗೆ ಮಾಡುತ್ತಾನೆ, ಸರಿ; ಮತ್ತು ಮನುಷ್ಯನ ಮಗನನ್ನು ಕುರಿತು ಬರೆದಿರುವ ಪ್ರಕಾರ, ಅವನು
೧೩ ಬಹಳ ಶ್ರಮೆ ಪಟ್ಟು, ಹೀನೈಸಲ್ಪಡ ಬೇಕು; ಆದರೆ ಎಲೀಯನು ಬಂದಿದ್ದಾನೆಂದೂ, ಅವನ ವಿಷಯವಾಗಿ
ಬರೆದಿರುವ ಪ್ರಕಾರ, ಮನಸ್ಸಿಗೆ ಬಂದ ಹಾಗೆ ಅವನಿಗೆ ಮಾಡಿದ್ದಾರೆಂದೂ, ನಿಮಗೆ ಹೇಳುತ್ತೇನೆ.

ದೆವ್ವ ಹಿಡಿದವನನ್ನು ಸ್ವಸ್ಥ ಮಾಡಿದ್ದು.

೧೪ ತರುವಾಯ ಶಿಷ್ಯರ ಬಳಿಗೆ ಬಂದು, ಅವರ ಸುತ್ತಲೂ ಬಹು ಸಮೂಹವನ್ನೂ, [3]ಶಾಸ್ತ್ರಿಗಳು ಅವರ ಸಂಗ
೧೫ ಡ ತರ್ಕ ಮಾಡುವದನ್ನೂ ನೋಡಿದನು. ಸಂಗಡಲೇ ಸಮೂಹವೆಲ್ಲಾ ಅವನನ್ನು ನೋಡಿ, [4]ಭ್ರಮೆ
೧೬ ಗೊಂಡು, ಹತ್ತರ ಓಡಿ ಬಂದು, ಅವನನ್ನು ವಂದಿಸಿದರು. ಅವರ ಸಂಗಡ ತರ್ಕ ಮಾಡುವದೇನೆಂದು

1. ೨—೧೩. ವಚನಗಳ ವ್ಯಾಖ್ಯಾನವನ್ನು ಲೂಕ. ೯. ೨೮—೩೬. ಮತ್ತಾ. ೧೭. ೧—೧೩. ವಚನಗಳ ವ್ಯಾಖ್ಯಾನಗಳಲ್ಲಿ ನೋಡ ಬೇಕು.

2. ಆತ್ಮವು ನಾಶವಾಗದ ವಸ್ತುವೆಂದೂ, ಸತ್ತವರು ಜೀವದಿಂದ ಏಳುವರೆಂದೂ, ಭಕ್ತಿಯುಳ್ಳ ಯೆಹೂದ್ಯರ ಹಾಗೆ ಶಿಷ್ಯರು ಸಹ ನಂಬಿದರು. (ಅಪೊ. ಕ್ರಿ. ೨೩. ೮. ಯೋಹಾ. ೧೧. ೨೪.) ಆದರೆ ಮೆಸ್ಸೀಯನಾದ ಲೋಕರಕ್ಷಕನು ಎಂದಿಗೂ ಸಾಯದೆ ಯಾವಾಗ್ಯೂ ಜೀವಿಸುವನೆಂದು ಅವರು ನಂಬಿದ್ದರಿಂದ, ಆತನು ತನ್ನ ಮರಣವನ್ನೂ ಪುನರುತ್ಥಾನವನ್ನೂ ಕುರಿತು ಮಾತಾಡಿದಾಗ ಅವ

3. ದೆವ್ವ ಹಿಡಿದವನನ್ನು ಶಿಷ್ಯರು ಗುಣ ಮಾಡಲಾರದೆ ಹೋದದರಿಂದ, ಅವರ ಗುರುವಿನಿಂದಲೂ ಆಗಲಾರದೆಂದು ಶಾಸ್ತ್ರಿಗಳು ನೆನಸಿ, ಅವರ ಸಂಗಡ ತಿರಸ್ಕಾರಭಾವದಿಂದ ಮಾತಾಡಿ ಕೊಂಡಿದ್ದರು.

4. ಜನರು ಆತನನ್ನು ನೋಡಿ ಭ್ರಮೆ ಪಟ್ಟದರಿಂದ, ಆತನ ಮುಖವು ಮೋಶೆಯ ಮುಖದ ಹಾಗೆ ಇನ್ನೂ ಪ್ರಕಾಶಿಸುತ್ತಾ ಇತ್ತೆಂದು ಕೆಲವರು ನೆನಸುತ್ತಾರೆ. ಹಾಗಿಲ್ಲದಿದ್ದಾಗ್ಯೂ, ಕೆಳಗೆ ಗದ್ದಲವಾಗಿರುವಾಗ ಆತನು ಮಹಾ ಶಾಂತವೂ ಕೃಪೆಯೂ ಉಳ್ಳವನಾಗಿ ಮೇಲಿನಿಂದ ಅವರ ಮಧ್ಯದಲ್ಲಿ ಅಕಸ್ಮಿಕವಾಗಿ ಪ್ರಸನ್ನನಾ

೧೭ ಶಾಸ್ತ್ರಿಗಳನ್ನು ಕೇಳಿದಾಗ, ಸಮೂಹದಲ್ಲಿ ಒಬ್ಬನು ಪ್ರತ್ಯುತ್ತರವಾಗಿ, ಬೋಧಕನೇ, ಮೂಕವಾದ ಆತ್ಮ
೧೮ ಉಂಟಾಗಿರುವ ನನ್ನ ಮಗನನ್ನು ನಿನ್ನ ಬಳಿಗೆ ತಂದಿದ್ದೇನೆ; ಅದು ಅವನನ್ನು ಹಿಡಿಯುವಲ್ಲಿ ಅವನನ್ನು [1]ಒದ್ದಾ
ಡಿಸುತ್ತದೆ; ಅವನು ನೊರೆ ಸುರಿಸಿ, ಹಲ್ಲು ಕಡಿದು, ಸವೆದು ಹೋಗುತ್ತಾನೆ; ಅದನ್ನು ಹೊರಡಿಸ ಬೇಕೆಂದು,
ನಿನ್ನ ಶಿಷ್ಯರಿಗೆ ಹೇಳಿದೆನು; ಆದರೆ ಅವರಿಂದ ಆಗದೆ ಹೋಯಿತು, ಅಂದನು.
೧೯ ಅವನು ಅವನಿಗೆ ಪ್ರತ್ಯುತ್ತರವಾಗಿ, ಓ ವಿಶ್ವಾಸಹೀನ ಸಂತತಿಯೇ, ಎಷ್ಟು ಮಟ್ಟಿಗೂ ನಿಮ್ಮ ಸಂಗಡ ಇರ
೨೦ ಬೇಕು? ಎಷ್ಟು ಮಟ್ಟಿಗೂ ನಿಮ್ಮನ್ನು ತಾಳ ಬೇಕು? ಅವನನ್ನು ನನ್ನ ಬಳಿಗೆ ತನ್ನಿರಿ, ಅಂದನು. ಆಗಲವನ
ನ್ನು ಅವನ ಬಳಿಗೆ ತಂದರು. ಮತ್ತು ಅವನನ್ನು ನೋಡಿದಾಗಲೇ ಆತ್ಮವು ಅವನನ್ನು ಒದ್ದಾಡಿಸಿದ್ದರಿಂದ,
ಅವನು ನೆಲಕ್ಕೆ ಬಿದ್ದು, ನೊರೆ ಸುರಿಸಿ, ಹೊರಳಾಡಿದನು.
೨೧ ಅವನ ತಂದೆಯನ್ನು, ಇದು ಅವನಿಗೆ ಬಂದು ಎಷ್ಟು ಕಾಲವಾಯಿತೆಂದು ಕೇಳಿದಾಗ, ಅವನು, ಬಾಲ್ಯದಿಂ
೨೨ ದಲೇ; ಮತ್ತು ಅನೇಕ ಸಾರಿ ಅವನನ್ನು ಸಂಹರಿಸುವದಕ್ಕೆ ಅವನನ್ನು ಬೆಂಕಿಯೊಳಗೂ ನೀರೊಳಗೂ
ಹಾಕಿ ಅದೆ; ಆದರೆ ನೀನು ಏನಾದರೂ ಮಾಡ ಕೂಡುವದಾದರೆ, ನಮ್ಮ ಮೇಲೆ ಅಂತಃಕರಣವಿಟ್ಟು, ನಮಗೆ
ಸಹಾಯ ಮಾಡು, ಅಂದನು.
೨೩ ಯೇಸು ಅವನಿಗೆ, ನೀನು [2]ವಿಶ್ವಾಸಿಸ ಕೂಡುವದಾದರೆ, ವಿಶ್ವಾಸಿಸುವವನಿಗೆ ಎಲ್ಲಾ ಆಗುವದು, ಅಂದನು.
೨೪ ಸಂಗಡಲೇ ಹುಡುಗನ ತಂದೆಯು ಕಣ್ಣೀರಿನಿಂದ, ಕರ್ತನೇ, ವಿಶ್ವಾಸಿಸುತ್ತೇನೆ; ನನ್ನ ಅವಿಶ್ವಾಸಕ್ಕೆ ಸಹಾಯ
ಮಾಡೆಂದು, ಕೂಗಿ ಹೇಳಿದನು.
೨೫ ಯೇಸು, ಸಮೂಹವು ಕೂಡ ಓಡಿ ಬರುವದನ್ನು ನೋಡಿ, ಅಶುದ್ಧಾತ್ಮವನ್ನು ಗದರಿಸಿ, ಮೂಕ ಕಿವುಡ
ಆತ್ಮವೇ, ಅವನಿಂದ ಹೊರಟು, ಇನ್ನು ಮೇಲೆ ಅವನೊಳಗೆ ಪ್ರವೇಶಿಸ ಬೇಡೆಂದು, [3]ನಾನು ನಿನಗೆ ಆಜ್ಞಾಪಿ
೨೬ ಸುತ್ತೇನೆ, ಅಂದನು. ಆಗಲದು ಕೂಗಿ, ಅವನನ್ನು ಬಹಳವಾಗಿ [4]ಒದ್ದಾಡಿಸಿ, ಹೊರಟಿತು. ಮತ್ತು ಅವನು
೨೭ ಸತ್ತವನ ಹಾಗಾದದರಿಂದ ಅನೇಕರು, ಅವನು ಸತ್ತಿದ್ದಾನೆ, ಅಂದರು. ಆದರೆ ಯೇಸು ಅವನ ಕೈ ಹಿಡಿದು,
ಅವನನ್ನು ಎಬ್ಬಿಸಿದಾಗ, ಅವನು ಎದ್ದನು.
೨೮ ಯೇಸು ಮನೆಯೊಳಗೆ ಪ್ರವೇಶಿಸಿದಾಗ, ಅವನ ಶಿಷ್ಯರು ಏಕಾಂತದಲ್ಲಿ, ನಾವು ಯಾಕೆ ಅದನ್ನು ಹೊರಡಿ
೨೯ ಸಲಾರದೆ ಇದ್ದೆವು? ಎಂದು ಅವನನ್ನು ಕೇಳಲು; ಅವನು ಅವರಿಗೆ, ಈ ಜಾತಿಯು ಪ್ರಾರ್ಥನೆ [5]ಉಪವಾಸ
ಗಳಿಂದಲೇ ಹೊರ್ತು, ಮತ್ತ್ಯಾವದರಿಂದಲೂ ಹೊರಡಲಾರದೆಂದು, ಅವರಿಗೆ ಹೇಳಿದನು.

1. ಒಂದು ತರವಾದ ಮೂರ್ಛೆಯ ಹಾಗೆ ಭಯಂಕರವಾದ ಒಂದು ಶೆಳೆಯುವಿಕೆಯು ಅವನಿಗೆ ಆಗಾಗ್ಯೆ ಬರುತ್ತಾ ಇತ್ತು. ಮೂಕನಾಗಿದ್ದ ಅವನಿಗೆ ದೆವ್ವದ ಕಾಟದಿಂದ ಇಂಥಾ ಕಠಿಣ ಶೆಳೆಯುವಿಕೆ ಉಂಟಾಗುವದನ್ನು ನೋಡುವಾಗ ಅವನ ಸ್ಥಿತಿ ಮಹಾ ದುಃಖಕರವಾದದ್ದೆಂದು ತಿಳಿಯ ಬೇಕು. ಮೂಕನಾಗಿದ್ದ ಅವನು ಶಬ್ದ ಮಾಡಿದ್ದು ಹ್ಯಾಗಂದರೆ, ಶೆಳೆಯುವಿಕೆಯಿಂದ ಘಟ್ಟಿಯಾಗಿ ಕೂಗುವನೇ ಹೊರ್ತು ಬೇರೊಬ್ಬರಿಗೆ ತಿಳಿಯ ತಕ್ಕ ಮಾತು ಆಡಲಿಲ್ಲವೆಂದು ತಿಳಿಯ ಬೇಕು.

2. ದೆವ್ವವನ್ನು ಹೊರಡಿಸಿ ಅವನ ಮಗನನ್ನು ಗುಣ ಮಾಡ ತಕ್ಕ ಶಕ್ತಿ ಕ್ರಿಸ್ತನಲ್ಲಿ ಸಂಪೂರ್ಣವಾಗಿತ್ತು. ಆದರೆ ಅದು ಪ್ರಕಟವಾಗಲಿಕ್ಕೆ ಆ ಮನುಷ್ಯನಲ್ಲಿ ಅವಶ್ಯವಾಗಿ ವಿಶ್ವಾಸವಿರ ಬೇಕಾಗಿತ್ತು. ಆದ್ದರಿಂದ ಅವನು ತನ್ನ ಅವಿಶ್ವಾಸವನ್ನೂ ಬಲಹೀನತ್ವವನ್ನೂ ಗ್ರಹಿಸಿ ಕೊಳ್ಳುವ ಹಾಗೆ ಕರ್ತನು ಹೀಗೆ ಹೇಳಿದನು. ಅವನು ಸಹ ಹಾಗೆಯೇ, ವಿಶ್ವಾಸಿಸುತ್ತೇನೆ, ಕರ್ತನೇ, ನನ್ನ ಅವಿಶ್ವಾಸ ನಿವರ್ತಿಯಾಗುವಂತೆ ಸಹಾಯ ಮಾಡು, ಅಂದನು. ಇದು ಬಲಹೀನ ವಿಶ್ವಾಸವುಳ್ಳವರು ದೇವರಿಗೆ ಮಾಡ ತಕ್ಕ ಒಂದು

3. ಇದಕ್ಕೆ ಮುಂಚೆ ನನ್ನ ಶಿಷ್ಯರು ನಿನಗೆ ಆಜ್ಞಾಪಿಸಿದರು. ಈಗ ನಾನು ಆಜ್ಞಾಪಿಸುತ್ತೇನೆ. ಅವರ ಕಟ್ಟಳೆಯನ್ನು ಅಲಕ್ಷ್ಯ ಮಾಡಿದ ಪ್ರಕಾರ ನನ್ನ ಕಟ್ಟಳೆಯನ್ನು ಅಲಕ್ಷ್ಯ ಮಾಡಿದರೆ, ನಿನಗೆ ಕೇಡು ಬರುವದೆಂದು ಹೇಳುವಂತೆ, ನಾನು ನಿನಗೆ ಆಜ್ಞಾಪಿಸುತ್ತೇನೆಂದು ಅಧಿಕಾರದೊಡನೆ ಹೇಳಿದನು.

4. ಆ ಪಿಶಾಚನ ಮೂರ್ಖವನ್ನೂ ಕಠಿಣ ಗುಣವನ್ನೂ ಇದರಿಂದ ತಿಳಿಯ ಬಹುದು. (೨೯. ವ. ಮತ್ತಾ. ೧೨. ೪೫.) ಅದು ಆ ಮನುಷ್ಯನನ್ನು ಶೀಘ್ರವಾಗಿ ಬಿಟ್ಟು ಹೋಗ ಬೇಕಾದದರಿಂದ ಅಷ್ಟು ಘಾಬರಿ ಮಾಡಿ ಹೊರಟಿತು. (ಪ್ರಕಟ. ೧೨. ೧೨.) ರಕ್ಷಕನಿರುವಲ್ಲಿ ಪಿಶಾಚನು ಘರ್ಜಿಸುವನು. ಆದಾಗ್ಯೂ ಕೇಡೇನಾದರೂ ಮಾಡದೆ ಓಡಿ ಹೋಗುವನು.

5. ಭಕ್ತಿಯ ಅಭಿವೃದ್ಧಿಗೂ ಪರೋಪಕಾರಗುಣಕ್ಕೂ ವಿಶ್ವಾಸವು ಅವಶ್ಯವಾಗಿ ಬೇಕು. ಈ ವಿಶ್ವಾಸ ವೃದ್ಧಿಯಾಗುವದಕ್ಕೆ ತನ್ನನ್ನು ತಗ್ಗಿಸಿ ಕೊಳ್ಳುವದೂ ಸನ್ಮಾರ್ಗ ನಡತೆಯೂ ಬೇಕು. ಉಪವಾಸ ವ್ರತದಿಂದ ಈ ಸುಗುಣಗಳು ವೃದ್ಧಿ ಹೊಂದುವವು. ಈ ವಿಧವಾದ ಪಿಶಾಚನೆಂದು ಕ್ರಿಸ್ತನು ಹೇಳಿದ್ದರಿಂದ ಇದು ಕಠಿಣ ಮೂರ್ಖವುಳ್ಳ



ಗಲಿಲಾಯದ ಮಾರ್ಗವಾಗಿ ಇನ್ನೊಂದು ಸಾರಿ ಪ್ರಯಾಣ ಮಾಡಿದ್ದು; ಕ್ರಿಸ್ತನು ತನ್ನ ಮರಣವನ್ನೂ ಪುನರುತ್ಥಾನವನ್ನೂ ತಿರಿಗಿ ತಿಳಿಸಿದ್ದು.

೩೦ ಅಲ್ಲಿಂದ ಅವರು ಹೊರಟು, ಗಲಿಲಾಯದ ಮೇಲೆ ಹಾದು ಹೋದರು. ಅದು [1]ಯಾರಿಗೂ ತಿಳಿಯ ಬಾ
೩೧ ರದೆಂದು ಅವನಿಗೆ ಮನಸ್ಸಿತ್ತು. ಯಾಕಂದರೆ ತನ್ನ ಶಿಷ್ಯರಿಗೆ ಬೋಧಿಸಿ, ಅವರಿಗೆ, ಮನುಷ್ಯನ ಮಗನು
ಮನುಷ್ಯರ ಕೈಗಳಲ್ಲಿ ಒಪ್ಪಿಸಲ್ಪಡುವನು; ಅವರು ಅವನನ್ನು ಕೊಂದು ಹಾಕುವರು; ಮತ್ತು ಕೊಂದು
೩೨ ಹಾಕಲ್ಪಟ್ಟು, ಮೂರನೇ ದಿವಸದಲ್ಲಿ ಏಳುವನು, ಅಂದನು. ಆದರೆ [2]ಆ ಮಾತು ತಿಳಿಯದೆ, ಅವನನ್ನು
ಕೇಳುವದಕ್ಕೆ ಭಯ ಪಟ್ಟರು.

ಮನೋದೀನತ್ವವನ್ನೂ ಸಹೋದರಸ್ನೇಹವನ್ನೂ ಕುರಿತು ಬೋಧಿಸಿದ್ದು.

೩೩ ಮತ್ತು ಅವನು ಕಪೆರ್ನೌಮಿಗೆ ಶೇರಿ, ಮನೆಗೆ ಬಂದ ಮೇಲೆ, ಮಾರ್ಗದಲ್ಲಿ ಏನು ತರ್ಕ ಮಾಡಿ ಕೊಂಡಿ
೩೪ ರೆಂದು, ಅವರನ್ನು ಕೇಳಿದನು. ಆದರೆ ಅವರು ಸುಮ್ಮನಿದ್ದರು; ಯಾಕಂದರೆ, [3]ಯಾವನು ದೊಡ್ಡವನೆಂದು,
ಅವರು ಮಾರ್ಗದಲ್ಲಿ ತರ್ಕ ಮಾಡಿ ಕೊಂಡಿದ್ದರು.
೩೫ ಆಗಲವನು ಕೂತು ಕೊಂಡು, ಹನ್ನೆರಡು ಮಂದಿಯನ್ನು ಕರೆದು, ಯಾವನಾದರೂ ಮೊದಲಿನವನಾಗ
೩೬ ಬೇಕೆಂದಿದ್ದರೆ, ಎಲ್ಲರಲ್ಲಿ ಕಡೆಯವನೂ ಎಲ್ಲರಿಗೆ ಸೇವಕನೂ ಆಗಿರಲಿ, ಎಂದು ಅವರಿಗೆ ಹೇಳಿದನು. ಮತ್ತು
೩೭ ಒಂದು ಕೂಸನ್ನು ತೆಗೆದು ಕೊಂಡು, ಅವರ [4]ಮಧ್ಯದಲ್ಲಿ ನಿಲ್ಲಿಸಿ, ಅದನ್ನು ಅಪ್ಪಿ ಕೊಂಡು, ಇಂಥಾ ಕೂಸು
ಗಳಲ್ಲಿ ಒಂದನ್ನು ನನ್ನ ಹೆಸರಿನಲ್ಲಿ ಅಂಗೀಕರಿಸುವವನ್ಯಾವನೋ, ಅವನು ನನ್ನನ್ನು ಅಂಗೀಕರಿಸುತ್ತಾನೆ; ಮತ್ತು
ನನ್ನನ್ನು ಅಂಗೀಕರಿಸುವವನ್ಯಾವನೋ, ಅವನು ನನ್ನನ್ನು ಅಲ್ಲ, ನನ್ನನ್ನು ಕಳುಹಿಸಿದವನನ್ನು ಅಂಗೀಕರಿಸು
ತ್ತಾನೆಂದು ಅವರಿಗೆ ಹೇಳಿದನು.
೩೮ ಮತ್ತು [5]ಯೋಹಾನನು ಅವನಿಗೆ ಪ್ರತ್ಯುತ್ತರವಾಗಿ, ಬೋಧಕನೇ, ನಮ್ಮನ್ನು ಹಿಂಬಾಲಿಸದವನು ನಿನ್ನ
ಹೆಸರಿನಲ್ಲಿ ದೆವ್ವಗಳನ್ನು ಹೊರಡಿಸುವದನ್ನು ಕಂಡೆವು; ಆದರೆ ಅವನು ನಮ್ಮನ್ನು ಹಿಂಬಾಲಿಸದ ಕಾರಣ ಅವ
೩೯ ನನ್ನು ತಡೆದೆವು, ಅಂದನು. ಅದಕ್ಕೆ ಯೇಸು ಹೇಳಿದ್ದು, ಅವನನ್ನು ತಡೆಯ ಬೇಡಿರಿ; ಯಾಕಂದರೆ ನನ್ನ ಹೆಸ
೪೦ ರಿನಲ್ಲಿ ಬಲವಾದ ಕ್ರಿಯೆಯನ್ನು ಮಾಡಿ, ಬೇಗ ನನ್ನನ್ನು ದೂಷಿಸ ಬಲ್ಲವನು ಒಬ್ಬನೂ ಇಲ್ಲ. ಹ್ಯಾಗಂದರೆ
೪೧ ನಮಗೆ ವಿರೋಧವಾಗಿರದವನು ನಮ್ಮ [6]ಪಕ್ಷದವನಾಗಿದ್ದಾನೆ. ಯಾಕಂದರೆ ನೀವು ಕ್ರಿಸ್ತನವರಾಗಿರು

1. ಜನಸಂದಣಿ ಇಲ್ಲದೆ ಆತನು ತನ್ನ ಪುಣ್ಯ ಮರಣವನ್ನು ಕುರಿತು ತನ್ನ ಶಿಷ್ಯರಿಗೆ ರಹಸ್ಯವಾಗಿ ಉಪದೇಶಿಸ ಅಪೇಕ್ಷೆಯುಳ್ಳವನಾಗಿದ್ದದರಿಂದ ತನ್ನನ್ನು ಕುರಿತು ಯಾರಿಗೂ ತಿಳಿಸ ಬೇಡವೆಂದು ಆಜ್ಞಾಪಿಸಿದನು.

2. ಪಾಪನಿವಾರಣದ ಉಪದೇಶದ ಸ್ವಭಾವವು ಶಿಷ್ಯರಿಗೆ ತಿಳಿದಿದ್ದಾಗ್ಯೂ, ಆತನೇ ಪಾಪನಿವಾರಣಬಲಿಯಾಗುವನೆಂಬುವ ಸತ್ಯವನ್ನು ಗ್ರಹಿಸ ಶಕ್ತಿ ಇಲ್ಲದವರಾಗಿದ್ದರು. ಹಾಗೆಯೇ ಈ ಸತ್ಯವು ಕೆಲ ಭಕ್ತಿವಂತರಿಗೆ ಸಹ ತಿಳಿಯದೆ ಇತ್ತು. (ಅಪೊ. ಕ್ರಿ. ೯. ೩೨—೩೪.)

3. ಕರ್ತನು ಪೇತ್ರನನ್ನು ಹೊಗಳಿದ್ದರಿಂದಲೂ (ಮತ್ತಾ. ೧೬. ೧೭—೧೯.), ಮೂವರು ಶಿಷ್ಯರು ಆತನು ರೂಪಾಂತರವಾದ ಮಹಾತಿಶಯವನ್ನು ನೋಡುವದಕ್ಕೆ ಕೃಪೆ ಹೊಂದಿದ್ದರಿಂದಲೂ (ಮತ್ತಾ. ೧೭. ೧.), ಶಿಷ್ಯರಲ್ಲಿ ಯಾವನು ದೊಡ್ಡವನೆಂಬುವ ತರ್ಕವು ಸಂಭವಿಸಿರುವದು. ಬೇರೆ ಅಪೊಸ್ತಲರಿಗಿಂತ ಪೇತ್ರನು ಶ್ರೇಷ್ಠನಾಗಿದ್ದರೆ, ಈ ತರ್ಕವು ಯಾಕೆ ಹುಟ್ಟುವದು?

ಹಿಸಿ ಕೊಳ್ಳುವದಕ್ಕಾಗಿ ಕೂಸನ್ನು ಮಧ್ಯದಲ್ಲಿ ನಿಲ್ಲಿಸಿದನು. ದೀನತ್ವವುಳ್ಳವರನ್ನು ಅಪ್ಪಿ ಕೊಂಡು, ಗರ್ವಿಷ್ಠರನ್ನು ತಳ್ಳಿ ಬಿಡುತ್ತಾನೆ. ತರುವಾಯ ಆತನು ಮಾಡಿದ ಜ್ಞಾನಬೋಧನೆಯನ್ನು ನೋಡುವಾಗ, ದೇವರ ದಾಸರಿಗೆ ಮಾಡುವ ಸೇವೆಯು ದೇವರಿಗೇ ಮಾಡಿದ ಸೇವೆ ಎಂದು ಎಣಿಸಲ್ಪಡುತ್ತದೆಂದು ತಿಳಿಯ ಬೇಕು.

5. ರಕ್ಷಕನು ಹೇಳಿದ ಮಾತುಗಳನ್ನು ಕೇಳಿ ಯೋಹಾನನು ತನ್ನ ತಪ್ಪನ್ನು ಗ್ರಹಿಸಿರುವನು. ಅದರಿಂದ ಆತನ ಸೇವೆಯಲ್ಲಿ ತನಗೆ ಬಹಳ ಭಕ್ತಿವೈರಾಗ್ಯವುಂಟೆಂದು ತೋರಿಸಲಾರಂಭಿಸಿದನು. ಆತನು ಸಂಭಾಷಿಸುತ್ತಿರುವಾಗ ತಾನು ಈ ವಿಷಯದಲ್ಲಿ ಮಾಡಿದ್ದು ಸರಿಯೋ? ಎಂದು, ಅಡ್ಡವಾಗಿ ಒಂದು ಪ್ರಶ್ನೆ ಕೇಳಿದನು. ಅದಕ್ಕೆ ರಕ್ಷಕನು, ದೆವ್ವಗಳನ್ನು ಹೊರಡಿಸಿದ ಆ ಮನುಷ್ಯನು ತನ್ನ ಹೆಸರಿನಿಂದ ತನ್ನ ಬಲವನ್ನು ಅನುಸರಿಸಿ ಮಾಡಿದ್ದರಿಂದ ಅವನನ್ನು ತಡೆ ಮಾಡುವದು ಸರಿ ಅಲ್ಲ ಎಂದು ಹೇಳಿದನು.

6. (ಮತ್ತಾ. ೧೨. ೩೦ನೇ ವಚನಕ್ಕೆ ಈ ವಚನವು ಪ್ರತಿಯಾಗಿದೆ.) ಮೇಲಿಗೂ ಕೇಡಿಗೂ ನಡಿಯುವ ಯುದ್ಧದಲ್ಲಿ ಉಭಯ

ವದರಿಂದ, ಒಂದು ಪಾತ್ರೆಯ ನೀರು ನನ್ನ ಹೆಸರಿನಲ್ಲಿ ನಿಮಗೆ ಕುಡಿಯ ಕೊಡುವವನ್ಯಾವನೋ, ಅವನು
ತನ್ನ ಪ್ರತಿಫಲವನ್ನು ಹ್ಯಾಗೂ ಕಳಕೊಳ್ಳನೆಂದು, ನಿಶ್ಚಯವಾಗಿ ನಿಮಗೆ ಹೇಳುತ್ತೇನೆ.
೪೨ ಮತ್ತು ನನ್ನಲ್ಲಿ ವಿಶ್ವಾಸವಿಡುವವರಾದ ಚಿಕ್ಕವರಲ್ಲಿ ಒಬ್ಬನನ್ನು [1]ಆಟಂಕ ಪಡಿಸುವವನ್ಯಾವನೋ, ಅವನ
ಕೊರಳಿನ ಸುತ್ತಲು [2]ಬೀಸುವ ಕಲ್ಲು ಕಟ್ಟಲ್ಪಟ್ಟು, ಅವನು [3]ಸಮುದ್ರದಲ್ಲಿ ಹಾಕಲ್ಪಟ್ಟರೆ, ಅವನಿಗೆ ವಾಶಿ.
೪೩ ಮತ್ತು ನಿನ್ನ ಕೈ ನಿನ್ನನ್ನು [4]ಆಟಂಕ ಪಡಿಸಿದರೆ, ಅದನ್ನು ಕೊಯಿದು ಹಾಕು; ನೀನು ಎರಡು ಕೈಯುಳ್ಳವ
೪೪ ನಾಗಿ, ಅವರ ಹುಳವು ಸಾಯದೆ [5]ಬೆಂಕಿಯು ಆರದೆ ಇರುವ (ಯೆಶಾ. ೬೬. ೨೪.) ನರಕದೊಳಗೂ,
೪೫ ಆರದ ಬೆಂಕಿಯೊಳಗೂ ಹೋಗುವದಕ್ಕಿಂತ, ಊನನಾಗಿ ಜೀವದಲ್ಲಿ ಪ್ರವೇಶಿಸುವದು ನಿನಗೆ ವಾಶಿ. ಮತ್ತು
ನಿನ್ನ ಕಾಲು ನಿನ್ನನ್ನು ಆಟಂಕ ಪಡಿಸಿದರೆ, ಅದನ್ನು ಕೊಯಿದು ಹಾಕು; ನೀನು ಎರಡು ಕಾಲುಳ್ಳವನಾಗಿ
೪೬ ಅವರ ಹುಳವು ಸಾಯದೆ ಬೆಂಕಿಯು ಆರದೆ ಇರುವ ನರಕದೊಳಗೂ ಆರದ ಬೆಂಕಿಯೊಳಗೂ ಹಾಕಲ್ಪಡು
೪೭ ವದಕ್ಕಿಂತ, ಕುಂಟನಾಗಿ ಜೀವದಲ್ಲಿ ಪ್ರವೇಶಿಸುವದು ನಿನಗೆ ವಾಶಿ. ಮತ್ತು ನಿನ್ನ ಕಣ್ಣು ನಿನ್ನನ್ನು ಆಟಂಕ
೪೮ ಪಡಿಸಿದರೆ, ಅದನ್ನು ಕಿತ್ತು ಹಾಕು. ನೀನು ಎರಡು ಕಣ್ಣುಳ್ಳವನಾಗಿ, ಅವರ ಹುಳವು ಸಾಯದೆ ಬೆಂಕಿಯು
ಆರದೆ ಇರುವ ಬೆಂಕಿಯ ನರಕದಲ್ಲಿ ಹಾಕಲ್ಪಡುವದಕ್ಕಿಂತ, ಒಂದೇ ಕಣ್ಣುಳ್ಳವನಾಗಿ, ದೇವರ ರಾಜ್ಯದಲ್ಲಿ
೪೯ ಪ್ರವೇಶಿಸುವದು ನಿನಗೆ ವಾಶಿ. ಯಾಕಂದರೆ [6]ಬೆಂಕಿಯಿಂದ ಒಬ್ಬೊಬ್ಬನಿಗೆ ಸಾರವಾಗ ಬೇಕು; ಮತ್ತು
ಉಪ್ಪಿನಿಂದ ಪ್ರತಿ ಬಲಿಗೆ ಸಾರವಾಗ ಬೇಕು.

೫೦ ಉಪ್ಪು ಒಳ್ಳೇದೇ; ಆದರೆ ಉಪ್ಪು ನಿಸ್ಸಾರವಾದರೆ, ಅದಕ್ಕೆ ಯಾವದರಿಂದ ರುಚಿ ಕೊಡುವಿರಿ? ನಿಮ್ಮಲ್ಲಿ
ಉಪ್ಪು ಉಂಟಾದವರಾಗಿರ್ರಿ. ಮತ್ತು ಒಬ್ಬರ ಸಂಗಡಲೊಬ್ಬರು [7]ಸಮಾಧಾನವಾಗಿರ್ರಿ.

---

ವಚನಗಳ ಅಭಿಪ್ರಾಯವಾಗಿದೆ. ವಿಶ್ವಾಸದ ವಿಷಯದಲ್ಲಿ ಹೊಂದಿಕೆಯೂ, ಬೇರೆ ಬಹಿರಂಗವಾದ ವಿಷಯಗಳಲ್ಲಿ ಭೇದವೂ ಇದ್ದರೆ, ಅದರಿಂದ ತಪ್ಪು ನಿರ್ಣಯಿಸುವದು ಧರ್ಮವಲ್ಲ. ಯಾವ ವಿಧದಿಂದಲಾದರೂ ಯೇಸುಸ್ವಾಮಿಯ ಹೆಸರು ಘನ ಪಡಿಸಲ್ಪಡುವದೂ, ಆತನ ಸೇವೆ ಈಡೇರುವದೂ, ಇವೇ ಮುಖ್ಯ. ಕ್ರಿಸ್ತರೆಲ್ಲರೂ ಇದನ್ನು ನೆನಸಿ ಕೊಂಡು ನಡಿಯುವವರಾದರೆ, ಎಷ್ಟೋ ಮೇಲು ಉಂಟಾಗುವದು.

1. ಕ್ರಿಸ್ತನ ದಾಸರನ್ನು ಪಾಪದಲ್ಲ್ಯಾದರೂ ತಪ್ಪಿನಲ್ಲ್ಯಾದರೂ ಬೀಳ ಮಾಡಿ, ಅವರನ್ನು ಮಾರ್ಗ ತಪ್ಪಿಸುವವರಿಗೆ ಅಧಿಕವಾದ ದಂಡನೆ ಬರುವದು.

2. ಇದು ಕತ್ತೆ ಎಳಿಯುವ ಬೀಸುವ ಕಲ್ಲೆಂದು ಅರ್ಥವಾಗುತ್ತದೆ. ಇದು ಮನುಷ್ಯರು ಕೈಯಿಂದ ಬೀಸುವ ಕಲ್ಲಿಗಿಂತ ದೊಡ್ಡದಾಗಿಯೂ ಭಾರವಾಗಿಯೂ ಇರುವದು.

3. ದೇವಸ್ಥಾನದ ಸೊತ್ತು ಕೊಳ್ಳೆ ಮಾಡುವವರನ್ನು ನೀರಿನಲ್ಲಿ ಮುಣುಗಿಸಿ ಕೊಲ್ಲುವದು ಪೂರ್ವದೇಶದ ಕೆಲವರಲ್ಲಿ ವಾಡಿಕೆಯಾಗಿತ್ತು.

4. ಮತ್ತಾ. ೫. ೨೯, ೩೦. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

5. (ಯೆಶಾ. ೬೬. ೨೪. ಮತ್ತಾ. ೫. ೨೨, ೨೯. ವಚನಗಳ ವ್ಯಾಖ್ಯಾನ ನೋಡ ಬೇಕು.) ನರಕದಂಡನೆ ನಿತ್ಯವಾದದ್ದೆಂದೂ ಮಹಾ ಭಯಂಕರವಾದದ್ದೆಂದೂ ತೋರಿಸುವ ಉದ್ದಿಶ್ಯ ಆ ದಂಡನೆಯನ್ನು ವಿಧಿಸಲಿಕ್ಕಿರುವ ಕರ್ತನು ಅದನ್ನು ತಿರಿಗಿ ತಿರಿಗಿ ಮೂರು ಸಾರಿ ಹೇಳುತ್ತಾನೆ.

6. ಇದು ವಿಶೇಷ ಅರ್ಥವುಳ್ಳ ವಚನವು. ಬೆಂಕಿ ಉಪ್ಪು ಎಂಬ ಎರಡು ಉಪಮಾನಗಳನ್ನು ಒಂದಕ್ಕೊಂದು ಜೋಡಿಸಿ ಹೇಳಿರುವದರಿಂದ ಈ ವಚನದ ಅಭಿಪ್ರಾಯವನ್ನು ಹೇಳುವದು ಸುಲಭವಲ್ಲ. ದೇವರಿಗೆ ಅರ್ಪಿಸಲ್ಪಡುವ ದಹನಬಲಿ ಒಂದೊಂದಕ್ಕೂ ಶುದ್ಧತ್ವಕ್ಕೆ ಗುರುತಾಗಿ ಉಪ್ಪು ಹಾಕಲ್ಪಡ ಬೇಕು. (ಲೇವಿ. ೨. ೧೩.) ಹಾಗೆಯೇ ದೇವರಿಗೆ ತನ್ನ ಹೃದಯವನ್ನು ಸುಗಂಧ ಬಲಿಯಾಗಿಯೂ ಕಾಣಿಕೆಯಾಗಿಯೂ ಸಮರ್ಪಿಸುವ ಪ್ರತಿ ಭಕ್ತನೂ ಬೆಂಕಿಯನ್ನು ದಾಟುವಂತೆ ಅಷ್ಟು ಕಷ್ಟ ಪಡ ಬೇಕಾಗಿದ್ದರೂ, ಹ್ಯಾಗಾದರೂ ಕೈ ಕಾಲು ಕಣ್ಣುಗಳಿಗೆ ಸಮಾನ ಪ್ರೀತಿಯುಳ್ಳ ಪಾಪಗಳನ್ನು ಬಿಟ್ಟು ತನ್ನನ್ನು ಶುದ್ಧೀಕರಿಸಿ ಕೊಳ್ಳ ಬೇಕು. ಹಾಗಿಲ್ಲದಿದ್ದರೆ ಆರದ ಬೆಂಕಿಗೆ ಆಹುತಿಯಾಗುವನು. ಹೀಗೆ ಶುದ್ಧವಾಗಿ ನಡಿಯ ತಕ್ಕ ಕಟ್ಟಳೆ ಹೊಂದಿದವನು ಅಶುದ್ಧನಾಗಿ ನಡೆದು ನಿಸ್ಸಾರ ಭಕ್ತನಾದರೆ, ಅವನು ತಿರಿಗಿ ಶುದ್ಧನಾಗುವದಕ್ಕೆ ಬೇರೆ ಬಗೆ ಇಲ್ಲ. ಆದ್ದರಿಂದ ಕ್ರಿಸ್ತನ ದಾಸರು ಪರಿಶುದ್ಧರೂ ಭಕ್ತರೂ ಸಹೋದರಸ್ನೇಹವುಳ್ಳವರೂ ಆಗಿ ನಡಿಯ ಬೇಕು. (೫೦. ವ.) ಉಪ್ಪಿನಿಂದ ಬಲಿ ಪಕ್ವವಾಗುವಂತೆ ಬೆಂಕಿಯೋಪಾದಿಯಾದ ಉಪದ್ರದಿಂದ ಭಕ್ತರು ಪರಲೋಕಕ್ಕೆ ಪರಿಪಕ್ವವಾಗುತ್ತಾರೆ.

7. ೩೩ನೇ ವಚನದಲ್ಲಿ ಸಮಾಧಾನ ಭಂಗವಾಗ ತಕ್ಕ ತರ್ಕವು ಶಿಷ್ಯರಲ್ಲಿ ಹುಟ್ಟಿದ್ದರಿಂದ, ಈ ವಚನದಲ್ಲಿ ಅವರೊಳಗೆ ಸಮಾಧಾನವಾಗಿರ ಬೇಕೆಂದು ಕರ್ತನು ಆಜ್ಞಾಪಿಸಿದನು.



ಕ್ರಿಸ್ತನು ಯೊರ್ದನಿಗಾಚೆಗೆ ಹೋದಾಗ, ತನ್ನ ಬಳಿಗೆ ಬಂದ ಜನಸಮೂಹಗಳಿಗೆ ಬೋಧಿಸಿದ್ದು.

**10.** [1]ಅಲ್ಲಿಂದ ಅವನು ಎದ್ದು, ಯೊರ್ದನಿನ ಆಚೆಯಾದ [2]ಯೆಹೂದ ಪ್ರಾಂತ್ಯಗಳಿಗೆ ಬಂದನು; ಮತ್ತು
ತಿರಿಗಿ ಸಮೂಹಗಳು ಅವನ ಸಂಗಡ ಪ್ರಯಾಣ ಮಾಡುವಾಗ, ಅವನು ತನಗೆ ಮರ್ಯಾದೆ ಇದ್ದ ಹಾಗೆ
ತಿರಿಗಿ ಅವರಿಗೆ ಬೋಧಿಸಿದನು.

ಹೆಂಡತಿಯ ಪರಿತ್ಯಾಗವನ್ನು ಕುರಿತು ಉತ್ತರ ಕೊಟ್ಟದ್ದು.

೨ ಆಗ ಫರಿಸಾಯರು ಹತ್ತರ ಬಂದು, ಅವನನ್ನು ಶೋಧಿಸಿ, ಒಬ್ಬ ಮನುಷ್ಯನು ಹೆಂಡತಿಯನ್ನು ಬಿಟ್ಟು ಬಿಡ
೩ ಬಹುದೋ? ಎಂದು ಕೇಳಿದರು. ಆದರೆ ಅವನು ಪ್ರತ್ಯುತ್ತರವಾಗಿ ಅವರಿಗೆ, ಮೋಶೆಯು ನಿಮಗೆ ಏನು
೪ ಅಪ್ಪಣೆ ಕೊಟ್ಟನು? ಅಂದಾಗ; ಅವರು, ಮೋಶೆಯು, ತ್ಯಾಗಪತ್ರವನ್ನು ಬರೆದು, ಬಿಟ್ಟು ಬಿಡಗೊಡಿಸಿದನು,
ಅಂದರು.
೫ ಆಗ ಯೇಸು ಉತ್ತರ ಕೊಟ್ಟು, ಅವರಿಗೆ ಹೇಳಿದ್ದೇನಂದರೆ, ನಿಮ್ಮ ಹೃದಯದ ಕಾಠಿಣ್ಯದ ನಿಮಿತ್ತ ನಿಮಗೆ
೬ ಈ ಆಜ್ಞೆ ಬರೆದು ಕೊಟ್ಟನು; ಆದರೆ ಸೃಷ್ಟಿಯ ಆರಂಭದಿಂದ ದೇವರು ಅವರನ್ನು ಗಂಡು ಹೆಣ್ಣಾಗಿ ಮಾ
೭ ಡಿದನು; (ಉತ್ಪ. ೧. ೨೭.) ಅದಕ್ಕೋಸ್ಕರ ಮನುಷ್ಯನು ತನ್ನ ತಂದೆಯನ್ನೂ ತಾಯಿಯನ್ನೂ ಬಿಟ್ಟು,
೮ ತನ್ನ ಹೆಂಡತಿಯನ್ನು ಕೂಡಿ ಕೊಳ್ಳುವನು. ಮತ್ತು ಅವರಿಬ್ಬರು ಒಂದೇ ಮಾಂಸವಾಗಿರುವರು.
೯ (ಉತ್ಪ. ೨. ೨೪.) ಹೀಗಿರುವದರಿಂದ ಅವರು ಇನ್ನು ಇಬ್ಬರಲ್ಲ, ಒಂದೇ ಮಾಂಸವಾಗಿದ್ದಾರೆ. ಆದ ಕಾರಣ
ದೇವರು ಕೂಡಿಸಿದ್ದನ್ನು ಮನುಷ್ಯನು ಆಗಲಿಸದಿರಲಿ.
೧೦, ೧೧ ಆಗ ಮನೆಯೊಳಗೆ ಅವನ ಶಿಷ್ಯರು ಅದನ್ನು ಕುರಿತು ತಿರಿಗಿ ಅವನನ್ನು ಕೇಳಿದಾಗ, ಅವನು ಅವರಿಗೆ
ಹೇಳಿದ್ದೇನಂದರೆ, ತನ್ನ ಹೆಂಡತಿಯನ್ನು ಬಿಟ್ಟು, ಮತ್ತೊಬ್ಬಳನ್ನು ಮದುವೆ ಮಾಡಿ ಕೊಳ್ಳುವವನ್ಯಾವನೋ,
೧೨ ಅವನು ಅವಳಿಗೆ ವಿರೋಧವಾಗಿ ವ್ಯಭಿಚಾರ ಮಾಡುತ್ತಾನೆ. ಮತ್ತು ಹೆಂಡತಿಯು [3]ತನ್ನ ಗಂಡನನ್ನು
ಬಿಟ್ಟು, ಮತ್ತೊಬ್ಬನನ್ನು ಮದುವೆ ಮಾಡಿ ಕೊಂಡರೆ, ವ್ಯಭಿಚಾರ ಮಾಡುತ್ತಾಳೆ.

ಕ್ರಿಸ್ತನು ಕೂಸುಗಳನ್ನು ಆಶೀರ್ವದಿಸಿದ್ದು.

೧೩ ಆಗ ಅವುಗಳನ್ನು ಮುಟ್ಟುವ ಹಾಗೆ, ಕೂಸುಗಳನ್ನು ಅವನ ಬಳಿಗೆ ತಂದರು; ಆದರೆ ಶಿಷ್ಯರು ತಂದವರನ್ನು
೧೪ ಗದರಿಸಿದರು. ಯೇಸು ಅದನ್ನು ನೋಡಿ, [4]ಕೋಪಿಸಿ, ಅವರಿಗೆ ಹೇಳಿದ್ದೇನಂದರೆ, ಅಡ್ಡಿ ಮಾಡದೆ, ಕೂಸು

---

1. ಈ ಹತ್ತನೇ ಸಂಧಿಯ ಅರ್ಥವು ಮತ್ತಾ. ೧೯ನೇ ೨೦ನೇ ಸಂಧಿಗಳಲ್ಲಿ ಅಡಕವಾಗಿರುವದರಿಂದ ಆ ಸಂಧಿಗಳ ವ್ಯಾಖ್ಯಾನದಲ್ಲಿ ನೋಡ ಬೇಕು. ೧—೧೨. ವಚನಗಳ ವ್ಯಾಖ್ಯಾನವು ಮತ್ತಾ. ೧೯. ೧—೧೨. ವಚನಗಳ ವ್ಯಾಖ್ಯಾನದಲ್ಲಿದೆ.

2. ಕರ್ತನು ಕಡೆಯಾಗಿ ಯೆರೂಸಲೇಮಿಗೆ ಪ್ರಯಾಣ ಮಾಡುತ್ತಾನೆ. ಯೊರ್ದನನ್ನು ದಾಟಿ ಪೆರೀಯಕ್ಕೆ ಹೋಗಿ (ಲೂಕ. ೧೭. ೧೧.), ಆ ನದಿಯ ಮೂಡಣ ಧಡದಲ್ಲಿ ಸಂಚರಿಸಿ, ತಿರಿಗಿ ಯೊರ್ದನನ್ನು ದಾಟಿ, ಯೆರಿಕೋ ಬೆತಾನ್ಯ ಎಂಬ ಊರುಗಳ ಮಾರ್ಗವಾಗಿ ಯೆರೂಸಲೇಮಿನಲ್ಲಿ ರಾಜಕೀಯ ಪ್ರವೇಶ ಮಾಡಿದನು.

3. ಮತ್ತಾಯನ ಸುವಾರ್ತೆಯಲ್ಲಿ ಗಂಡನು ತನ್ನ ಹೆಂಡತಿಯನ್ನು ಪರಿತ್ಯಾಗ ಮಾಡುವದನ್ನು ಕುರಿತು ಹೇಳಿದ್ದಾಗ್ಯೂ, ಹೆಂಡತಿ ಗಂಡನನ್ನು ಪರಿತ್ಯಾಗ ಮಾಡುವದನ್ನು ಕುರಿತು ಹೇಳಿರುವದಿಲ್ಲ. ಈ ಸುವಾರ್ತೆಯಲ್ಲಿ ಮಾತ್ರ ಅದನ್ನು ಕುರಿತು ಹೇಳಿಇದೆ. ಹೆಂಡತಿಯು ತನ್ನ ಗಂಡನನ್ನು ಪರಿತ್ಯಾಗ ಮಾಡುವದನ್ನು ಕುರಿತು ಮೋಶೆಯ ಪ್ರಮಾಣದಲ್ಲಿ ಏನೂ ಹೇಳಲಿಲ್ಲಾ. ರೋಮಾಯರಲ್ಲಿದ್ದ ವಾಡಿಕೆಯನ್ನು ಅನುಸರಿಸಿ ಇದನ್ನು ಹೇಳಿದೆ. ಹೆಂಡತಿಯು ಗಂಡನನ್ನು ತಳ್ಳಿ ಬಿಡುವದು ರೋಮಾಯರಲ್ಲಿ ಪದ್ಧತಿ ಇತ್ತು. ಈ ಪದ್ಧತಿಯನ್ನು ಯೆಹೂದ್ಯರು ಸಹ ಅನುಸರಿಸಿರುವರೆಂದು ತೋರುತ್ತದೆ.

4. ಕೂಸುಗಳನ್ನು ತಂದ ತಂದೆ ತಾಯಿಗಳನ್ನು ಶಿಷ್ಯರು ಅಡ್ಡಿ ಮಾಡಿದಾಗ ಕರ್ತನು ಕೋಪಿಸಿದನೆಂದು ಈ ಸುವಾರ್ತೆಯಲ್ಲಿ ಮಾತ್ರ ಹೇಳಿರುತ್ತದೆ. ಕೂಸುಗಳನ್ನು ಪರಮ ಗುರುವು ಚಿಂತಿಸುವದಿಲ್ಲವೆಂಬ ಯೋಚನೆಯಿಂದ ಶಿಷ್ಯರು ಅವರನ್ನು ಅಡ್ಡಿ ಮಾಡಿರುವರು. ಕರ್ತನು ಅವರನ್ನು ತನ್ನ ಕೃಪಾದೃಷ್ಟಿಯಿಂದ ನೋಡಿ, ಆಶೀರ್ವದಿಸಿದ್ದನ್ನೂ, ಅವರನ್ನು ಅಡ್ಡಿ ಮಾಡಿದಾಗ ಆತನು ಕೋಪಿಸಿದ್ದನ್ನೂ ಶಿಷ್ಯರು ಕಂಡು, ಆಶ್ಚರ್ಯ ಪಟ್ಟಿರುವರು.

೧೫ ಗಳು ನನ್ನ ಬಳಿಗೆ ಬರಗೊಡಿಸಿರಿ; ಯಾಕಂದರೆ ದೇವರ ರಾಜ್ಯವು [1]ಇಂಥವರದಾಗಿದೆ. ನಿಶ್ಚಯವಾಗಿ
ನಿಮಗೆ ಹೇಳುತ್ತೇನೆ, [2]ಕೂಸಿನ ಹಾಗೆ ದೇವರ ರಾಜ್ಯವನ್ನು ಹೊಂದದವನು ಅದರಲ್ಲಿ ಪ್ರವೇಶಿಸುವದೇ ಇಲ್ಲ.
೧೬ ತರುವಾಯ ಅವುಗಳನ್ನು [3]ಅಪ್ಪಿ ಕೊಂಡು, ಅವುಗಳ ಮೇಲೆ ಕೈಗಳನ್ನಿಟ್ಟು, ಅವುಗಳನ್ನು ಆಶೀರ್ವದಿಸಿದನು.

ಐಶ್ವರ್ಯವಂತನ ಪ್ರಶ್ನೆ, ಕ್ರಿಸ್ತನ ಉತ್ತರ; ಅದರ ವಿಷಯವಾದ ಸಂಭಾಷಣೆ.

೧೭ ಮತ್ತು [4]ಅವನು ಪ್ರಯಾಣಕ್ಕೆ ಹೊರಡುವಾಗ, ಒಬ್ಬನು ಮುಂದೆ ಓಡಿ, ಅವನಿಗೆ ಮೊಣಕಾಲೂರಿ,
ಒಳ್ಳೇ ಬೋಧಕನೇ, ನಾನು ನಿತ್ಯ ಜೀವವನ್ನು ಬಾಧ್ಯವಾಗಿ ಹೊಂದುವ ಹಾಗೆ ಏನು ಮಾಡ ಬೇಕೆಂದು,
೧೮ ಅವನನ್ನು ಕೇಳಿದನು. ಆದರೆ ಯೇಸು ಅವನಿಗೆ ಹೇಳಿದ್ದು, ನೀನು ನನ್ನನ್ನು ಒಳ್ಳೆಯವನೆಂದು ಹೇಳುವದೇ
೧೯ ನು? ದೇವರೊಬ್ಬನೇ ಹೊರ್ತು ಒಳ್ಳೆಯವನು ಯಾವನೂ ಇಲ್ಲ. ವ್ಯಭಿಚಾರ ಮಾಡ ಬೇಡ, ಕೊಲ್ಲ
ಬೇಡ, ಕಳ್ಳತನ ಮಾಡ ಬೇಡ, ಅಪಸಾಕ್ಷಿ ಹೇಳ ಬೇಡ, ಮೋಸ ಮಾಡ ಬೇಡ, ನಿನ್ನ ತಂದೆ ತಾಯಿಗಳನ್ನು
೨೦ ಸನ್ಮಾನಿಸ ಬೇಕು, (ಹೊರ. ೨೦. ೧೨—೧೬.) ಎಂಬ ಕಟ್ಟಳೆಗಳನ್ನು ಬಲ್ಲಿ. ಆದರೆ ಅವನು ಅವನಿಗೆ
ಪ್ರತ್ಯುತ್ತರವಾಗಿ, ಬೋಧಕನೇ, ಇವುಗಳನ್ನೆಲ್ಲಾ ನನ್ನ ಚಿಕ್ಕತನದಿಂದ ಕೈಕೊಂಡಿದ್ದೇನೆ, ಅಂದಾಗ;
೨೧ ಯೇಸು ಅವನ ಮೇಲೆ ದೃಷ್ಟಿ ಇಟ್ಟು, ಅವನನ್ನು [5]ಪ್ರೀತಿ ಮಾಡಿ, ಹೇಳಿದ್ದೇನಂದರೆ, ಒಂದು ನಿನಗೆ ಕಡಿಮೆ
ಯಾಗಿದೆ; ಹೋಗಿ, ನಿನ್ನದೆಲ್ಲಾ ಮಾರಿ ಬಿಟ್ಟು, ಬಡವರಿಗೆ ಕೊಡು; ಆಗ ಪರಲೋಕದಲ್ಲಿ ನಿನಗೆ ದ್ರವ್ಯವಿ
೨೨ ರುವದು; ಮತ್ತು ಬಂದು, ಶಿಲುಬೆಯನ್ನು ಎತ್ತಿ ಕೊಂಡು, ನನ್ನನ್ನು ಹಿಂಬಾಲಿಸು. ಆದರೆ ಅವನು ಆ
ಮಾತಿಗೆ ಚಿಂತೆ ಪಟ್ಟು, ದುಃಖದಿಂದ ಹೋದನು; ಯಾಕಂದರೆ ಅವನಿಗೆ ಬಹಳ ಆಸ್ತಿ ಇತ್ತು.
೨೩ ಆಗ ಯೇಸು ಸುತ್ತಲು ನೋಡಿ, ತನ್ನ ಶಿಷ್ಯರಿಗೆ, ಆಸ್ತಿ ಉಂಟಾದವರು ದೇವರ ರಾಜ್ಯದಲ್ಲಿ ಪ್ರವೇಶಿಸುವದು
೨೪ ಎಷ್ಟೋ ಕಷ್ಟ! ಅಂದನು. ಆದರೆ ಶಿಷ್ಯರು ಅವನ ಮಾತುಗಳಿಗೆ ಭ್ರಮೆಗೊಂಡರು. ತಿರಿಗಿ ಯೇಸು ಉ
ತ್ತರ ಕೊಟ್ಟು, ಅವರಿಗೆ, ಮಕ್ಕಳೇ, [6]ಆಸ್ತಿಯಲ್ಲಿ ನಂಬಿಕೆ ಇಟ್ಟು ಕೊಂಡವರು ದೇವರ ರಾಜ್ಯದಲ್ಲಿ ಪ್ರವೇಶಿ
೨೫ ಸುವದು ಎಷ್ಟೋ ಕಷ್ಟ! ಐಶ್ವರ್ಯವಂತನು ದೇವರ ರಾಜ್ಯದಲ್ಲಿ ಪ್ರವೇಶಿಸುವದಕ್ಕಿಂತ, ಒಂಟೆಯು ಸೂಜಿಯ
೨೬ ಬೆಜ್ಜದಲ್ಲಿ ತೂರುವದು ಸುಲಭವಾಗಿದೆ, ಅಂದನು. ಅದಕ್ಕೆ ಅವರು ಅಧಿಕವಾಗಿ ಆಶ್ಚರ್ಯ ಪಟ್ಟು, ಹಾಗಾ
೨೭ ದರೆ ಯಾರು ರಕ್ಷಿಸಲ್ಪಡ ಬಹುದೆಂದು, ತಮ್ಮಲ್ಲಿ ಹೇಳಿ ಕೊಂಡರು. ಆದರೆ ಯೇಸು ಅವರ ಮೇಲೆ ದೃಷ್ಟಿ
ಇಟ್ಟು, ಅದು ಮನುಷ್ಯರ ಬಳಿಯಲ್ಲಿ ಅಸಾಧ್ಯವೇ, ಆದರೆ ದೇವರ ಬಳಿಯಲ್ಲಿ ಅಲ್ಲ; ಯಾಕಂದರೆ ದೇ
ವರ ಬಳಿಯಲ್ಲಿ ಎಲ್ಲಾ ಸಾಧ್ಯವಾಗಿದೆ, ಅಂದನು.
೨೮ ಆಗ ಪೇತ್ರನು, ಇಗೋ, ನಾವು ಎಲ್ಲಾ ಬಿಟ್ಟು ಬಿಟ್ಟು, ನಿನ್ನನ್ನು ಹಿಂಬಾಲಿಸಿದೆವೆಂದು ಹೇಳಲಾರಂಭಿಸಿ
೨೯ ದಾಗ, ಯೇಸು ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ, ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ನನಗೋಸ್ಕರವೂ

1. ಕೂಸುಗಳ ಹಾಗೆ ದೀನತ್ವವುಳ್ಳವರಿಗೆ ಪರಲೋಕರಾಜ್ಯವು ದೊರಕುವದೇ ಹೊರ್ತು, ಗರ್ವಿಷ್ಠರಿಗೆ ದೊರಕಲಾರದು.

2. ಶಾಂತವೂ ತಾಳ್ಮೆಯೂ ದೀನತ್ವವೂ ನಿಷ್ಕಪಟವೂ ಕೂಸುಗಳಿಗೆ ಆಭರಣಗಳಂತೆ ಅಲಂಕಾರಗುಣಗಳಾಗಿರುವವು. ಈ ಗುಣಗಳು ದೇವರ ದಾಸರಲ್ಲಿ ಪ್ರಕಾಶಿಸುವವು. ಇವರೇ ಆತ್ಮದಲ್ಲಿ ದೀನರು. ಇವರೇ ಪರಲೋಕದ ಬಾಧ್ಯತೆಗೆ ಪಾಲುಗಾರರು. (ಮಾರ್ಕ. ೯. ೩೩—೩೭. ವಚನಗಳ ವ್ಯಾಖ್ಯಾನ ನೋಡ ಬೇಕು.)

3. ಕರ್ತನ ಆಶ್ಚರ್ಯವಾದ ಪ್ರೀತಿಯನ್ನು ತೋರಿಸುವ ಈ ಸಂಗತಿಯು ಈ ಸುವಾರ್ತೆಯಲ್ಲಿ ಮಾತ್ರ ಉಂಟು. ಕೂಸುಗಳ ಮೇಲೆ ತನ್ನ ಕೈಗಳನ್ನಿಟ್ಟು ಆಶೀರ್ವದಿಸಿದ ಕರ್ತನಿಗೆ ತಮ್ಮ ಮಕ್ಕಳನ್ನು ಪ್ರತಿಷ್ಠೆ ಮಾಡ ಮನಸ್ಸಿಲ್ಲದ ಹೆತ್ತವರ ವಿಷಯ ಏನು ಹೇಳ ಬಹುದು? ಯೆಹೂದ್ಯರು ಎಂಟು ದಿವಸದ ಕೂಸುಗಳನ್ನು ಕರ್ತನಿಗೆ ಕಾಣಿಕೆಯಾಗಿ ಅರ್ಪಿಸಿದರೆ, ಕ್ರೈಸ್ತರು ಸಹ ಹಾಗೆ ಮಾಡುವದು ಒಳ್ಳೇದಾಗಿರುವದು.

4. ೧೭—೩೧. ವಚನಗಳ ವ್ಯಾಖ್ಯಾನವನ್ನು ಮತ್ತಾ. ೧೯. ೧೬—೩೦. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

5. ಈ ಯೌವನಸ್ಥನಾದ ಅಧಿಕಾರಿಯು, ಫರಿಸಾಯರ ಸದ್ದುಕಾಯರ ಹಾಗೆ ವಂಚನೆಯೂ ಕಪಟವೂ ಉಳ್ಳವನಾಗಿರದೆ, ಯಥಾರ್ಥತ್ವವೂ ಯೋಗ್ಯತೆಯೂ ಉಳ್ಳವನಾಗಿದ್ದದರಿಂದ ಕರ್ತನು ಅವನನ್ನು ಪ್ರೀತಿ ಮಾಡಿದನು. ಈ ಸಂಗತಿ ಈ ಸುವಾರ್ತೆಯಲ್ಲಿ ಮಾತ್ರ ಉಂಟು.

6. ಈ ವಚನದಿಂದ ೨೩ನೇ ವಚನದ ಅಭಿಪ್ರಾಯವು ಸ್ಪಷ್ಟವಾಗುತ್ತದೆ. ಐಶ್ವರ್ಯವಂತರು ತಮ್ಮ ಐಶ್ವರ್ಯವೇ ಶಾಶ್ವತವಾದದ್ದೆಂದು ನಂಬುವದರಿಂದ ನಿತ್ಯ ಸುಖವನ್ನು ಹುಡುಕದೆ ಇರುತ್ತಾರೆ. (ಮತ್ತಾ. ೧೯. ೨೩.)



ಸುವಾರ್ತೆಗೋಸ್ಕರವೂ ಮನೆಯನ್ನಾಗಲಿ, ಸಹೋದರರನ್ನಾಗಲಿ, ಸಹೋದರಿಗಳನ್ನಾಗಲಿ, ತಂದೆಯನ್ನಾಗಲಿ,
ತಾಯಿಯನ್ನಾಗಲಿ, ಹೆಂಡತಿಯನ್ನಾಗಲಿ, ಮಕ್ಕಳನ್ನಾಗಲಿ, ಹೊಲಗಳನ್ನಾಗಲಿ, ಬಿಟ್ಟು ಬಿಟ್ಟ ಯಾವನಾ
೩೦ ದರೂ ಈಗ ಈ ಕಾಲದಲ್ಲಿ ನೂರಷ್ಟು ಮನೆಗಳನ್ನೂ, ಸಹೋದರರನ್ನೂ, ಸಹೋದರಿಗಳನ್ನೂ, ತಾಯಿಗ
ಳನ್ನೂ, ಮಕ್ಕಳನ್ನೂ, ಹೊಲಗಳನ್ನೂ, [1]ಹಿಂಸೆಗಳು ಸಹಿತವಾಗಿ, ಮತ್ತು ಬರುವ ಲೋಕದಲ್ಲಿ ನಿತ್ಯಜೀವ
೩೧ ವನ್ನು ಹೊಂದದೆ ಇರನು. ಆದರೆ ಮೊದಲಿನವರಾದ ಅನೇಕರು ಕಡೆಯವರೂ, ಕಡೆಯವರು ಮೊದಲಿನ
ವರೂ, ಆಗಿರುವರು.

ಕ್ರಿಸ್ತನು ಕಡೇ ಸಾರಿ ಯೆರೂಸಲೇಮಿಗೆ ಪ್ರಯಾಣ ಮಾಡಿದ್ದು; ತನ್ನ ಶ್ರಮೆ, ಮರಣ, ಪುನರುತ್ಥಾನಗಳನ್ನು ಕುರಿತು ಮೂರನೇ ಸಾರಿ ಮುಂತಿಳಿಸಿದ್ದು.

೩೨ ಇದಲ್ಲದೆ ಅವರು ಯೆರೂಸಲೇಮಿಗೆ ಏರಿ ಹೋಗುವ ಮಾರ್ಗದಲ್ಲಿ ಇದ್ದರು; ಮತ್ತು ಯೇಸು ಅವರ
ಮುಂದೆ ಹೋಗುತ್ತಿದ್ದನು. ಹೀಗಿರಲಾಗಿ, ಅವರು [2]ಭ್ರಮೆಗೊಂಡು, ಹಿಂಬಾಲಿಸುತ್ತಾ ಭಯ ಪಟ್ಟರು.
ಆಗಲವನು ತಿರಿಗಿ ಹನ್ನೆರಡು ಮಂದಿಯನ್ನು ಕರಕೊಂಡು, ತನಗೆ ಸಂಭವಿಸುವದಕ್ಕಿರುವವುಗಳನ್ನು ಅವ
೩೩ ರಿಗೆ ಹೇಳಲಾರಂಭಿಸಿದ್ದೇನಂದರೆ, ಇಗೋ, ಯೆರೂಸಲೇಮಿಗೆ ಏರಿ ಹೋಗುತ್ತೇವೆ; ಮತ್ತು ಮನುಷ್ಯನ
ಮಗನು ಪ್ರಧಾನ ಯಾಜಕರಿಗೂ ಶಾಸ್ತ್ರಿಗಳಿಗೂ ಒಪ್ಪಿಸಲ್ಪಡುವನು; ಇವರು ಅವನನ್ನು ಮರಣಕ್ಕೆ ನಿರ್ಣ
೩೪ ಯಿಸಿ, ಅವನನ್ನು ಜನಾಂಗಗಳಿಗೆ ಒಪ್ಪಿಸಿ, ಅವನನ್ನು ಹಾಸ್ಯ ಮಾಡಿ, ಅವನನ್ನು ಹೊಡೆದು, ಅವನ ಮೇಲೆ
ಉಗುಳಿ, ಅವನನ್ನು ಕೊಂದು ಹಾಕುವರು; ಮತ್ತು ಮೂರನೇ ದಿವಸದಲ್ಲಿ ಏಳುವನು.

ಇಬ್ಬರು ಶಿಷ್ಯರ ಅತ್ಯಾಶೆಯನ್ನು ಖಂಡಿಸಿ, ತನ್ನ ರಾಜ್ಯದಲ್ಲಿ ಶ್ರೇಷ್ಠರು ಯಾರೆಂದು ಬೋಧಿಸಿದ್ದು.

೩೫ [3]ಆಗ ಜೆಬೆದಾಯನ ಮಕ್ಕಳಾದ ಯಾಕೋಬನೂ ಯೋಹಾನನೂ ಅವನ ಬಳಿಗೆ ಬಂದು, ಬೋಧ
೩೬ ಕನೇ, ನಾವು ಬೇಡಿ ಕೊಳ್ಳುವದನ್ನು ನೀನು ನಮಗೆ ಮಾಡ ಬೇಕು, ಅಂದರು. ಅವನು ಅವರಿಗೆ, ನಾನು
೩೭ ನಿಮಗೆ ಏನು ಮಾಡ ಬೇಕು? ಅಂದಾಗ; ಅವರು ಅವನಿಗೆ, ನಾವು [4]ನಿನ್ನ ಮಹಿಮೆಯಲ್ಲಿ—ಒಬ್ಬನು ನಿನ್ನ
ಬಲಪಾರ್ಶ್ವದಲ್ಲಿ, ಒಬ್ಬನು ನಿನ್ನ ಎಡಪಾರ್ಶ್ವದಲ್ಲಿ ಕೂಡ್ರುವದಕ್ಕೆ ನಮಗೆ ಕೊಡು, ಅಂದರು.
೩೮ ಆದರೆ ಯೇಸು ಅವರಿಗೆ, ನೀವು ಬೇಡಿ ಕೊಳ್ಳುವದೇನೆಂದು ನಿಮಗೆ ತಿಳಿಯುವದಿಲ್ಲ; ನಾನು ಕುಡಿಯುವ
ಪಾತ್ರೆಯಲ್ಲಿ ನೀವು ಕುಡಿಯುವದೂ, ನಾನು ಹೊಂದುವ [5]ಸ್ನಾನವನ್ನು ಹೊಂದುವದೂ ನಿಮ್ಮಿಂದ ಆಗು
೩೯ ವದೋ? ಅಂದಾಗ; ಅವರು ಅವನಿಗೆ, ಆಗುವದು, ಅಂದರು. ಆಗ ಯೇಸು ಅವರಿಗೆ, ನಾನು ಕುಡಿಯುವ

1. ಹಿಂಸೆಗಳ ಸಹಿತ ಎಂದು ಹೇಳಿರುವದರಿಂದ, ಕರ್ತನು ಈ ವಚನದಲ್ಲಿ ಹೇಳುವ ಮೇಲುಗಳೆಲ್ಲಾ ಆತ್ಮಸಮ್ಮಂಧವಾದವುಗಳೆಂದು ತೋರುತ್ತವೆ. ಆದಾಗ್ಯೂ ಕರ್ತನ ನಿಮಿತ್ತವಾಗಿ ತಮ್ಮ ಆಸ್ತಿಗಳನ್ನು ಕಳಕೊಂಡವರಿಗೆ ಇಹದಲ್ಲಿಯೂ ಫಲ ಉಂಟು. ಪೂರ್ವದ ಬಂಧುಗಳು ಹೋದರೂ ಹೊಸ ಬಂಧುಗಳು ಶಿಕ್ಕುವರು. ಒಂದು ಮನೆ ಕಳಕೊಂಡವರಿಗೆ ಭಕ್ತರ ಮನೆಗಳೆಲ್ಲಾ ಸ್ವಂತವೇ. ತಂದೆ ತಾಯಿ, ಸಹೋದರ ಸಹೋದರಿಗಳನ್ನು ಕಳಕೊಂಡವರಿಗೆ ಕ್ರಿಸ್ತನ ಭಕ್ತರೆಲ್ಲರೂ, ಹೆತ್ತವರು ಒಡಹುಟ್ಟಿದವರು ಬಂಧುಗಳು ಇವರಿಗಿಂತ ಅಧಿಕ ಸಮ್ಮಂಧ ಉಳ್ಳವರಾಗಿರುವರು. (ರೋಮಾ. ೧೬. ೧೩. ೨ ಕೊರಿ. ೬. ೧೩. ಗಲಾ. ೪. ೧೯.)

2. ಯುದ್ಧಕ್ಕೆ ಹೋಗುವ ಸೈನ್ಯದ ಮುಂದೆ ಸೈನ್ಯಾಧಿಪತಿಯು ನಡೆಯುವ ಪ್ರಕಾರ, ಕ್ರಿಸ್ತನು ತನ್ನ ಶಿಷ್ಯರಿಗೆ ಮುಂದಾಗಿ ನಡೆದು, ತಾನು ಕ್ರೂರ ಮರಣವನ್ನು ಹೊಂದಲಿಕ್ಕಿರುವ ಯೆರೂಸಲೇಮು ಪಟ್ಣಕ್ಕೆ ಹೆದರದೆ ಕದಲದೆ ಮಹಾ ವೀರನಂತೆ ಹೋಗುವದನ್ನು ಶಿಷ್ಯರು ಕಂಡು, ಆಶ್ಚರ್ಯ ಪಟ್ಟರು. ಆತನ ಮುಖದಲ್ಲಿ ಪ್ರಕಟವಾದ ಕೃಪೆಯನ್ನೂ, ಶಾಂತತ್ವವನ್ನೂ, ಮರಣಕ್ಕೆ ಸ್ವಲ್ಪವಾದರೂ ಅಂಜದ ಧೀರತ್ವವನ್ನೂ ಅವರು ಕಂಡಾಗ ಅವರು ಭ್ರಮೆಗೊಂಡದ್ದೂ ಭಯ ಪಟ್ಟದ್ದೂ ಆಶ್ಚರ್ಯವಲ್ಲ. ಇದರಿಂದ ಇಬ್ರಿ. ೧೨. ೧—೩ಲ್ಲಿ ಹೇಳಿರುವದು ಸ್ಪಷ್ಟವಾಗಿ ತೋರುತ್ತದೆ.

3. ೩೫—೪೫. ವಚನಗಳ ವ್ಯಾಖ್ಯಾನವನ್ನು ಮತ್ತಾ. ೨೦. ೨೦—೨೮. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

4. ತಮ್ಮ ಗುರುವಾದ ಕ್ರಿಸ್ತನು ಭೂಲೋಕದಲ್ಲಿ ಶೀಘ್ರವಾಗಿ ಮಹಿಮೆ ಹೊಂದುವನೆಂದು ನೆನಸಿ, ಆ ಮಹಿಮೆಯಲ್ಲಿ ತಮಗೆ ಒಂದು ಭಾಗವಿರ ಬೇಕೆಂದು ಬೇಡಿ ಕೊಂಡರು.

5. ತೆರೆಯ ಮೇಲೆ ತೆರೆ ಬರುವ ಪ್ರಕಾರ, ಉಪದ್ರವ ಮೇಲೆ ಉಪದ್ರವನ್ನು ಹೊಂದಿ ಸಂಕಟ ಪಡುವವರನ್ನು ನೀರಿನಲ್ಲಿ ಮುಣುಗಿದವರಿಗೆ ಉಪಮಾನಿಸಿ ಹೇಳುವದು ಎಲ್ಲಾ ದೇಶಭಾಷೆಗಳಲ್ಲಿಯೂ ಪದ್ಧತಿಯಾಗಿದೆ.

ಪಾತ್ರೆಯಲ್ಲಿ ಕುಡಿಯುವಿರಿ, ಮತ್ತು ನಾನು ಹೊಂದುವ ಸ್ನಾನವನ್ನು ಹೊಂದುವಿರಿ; ಆದರೆ ನನ್ನ ಎಡ
೪೦ ಬಲಪಾರ್ಶ್ವಗಳಲ್ಲಿ ಕೂಡ್ರುವದನ್ನು, ಯಾರಿಗೆ ಸಿದ್ಧ ಮಾಡಲ್ಪಟ್ಟದೆಯೋ, ಅವರಿಗೆ ಹೊರ್ತು, ಕೊಡುವದು
ನನ್ನದಲ್ಲ, ಅಂದನು.
೪೧ ಹತ್ತು ಮಂದಿಯು ಅದನ್ನು ಕೇಳಿ, ಯಾಕೋಬ ಯೋಹಾನರ ಮೇಲೆ ಕೋಪಿಸಿ ಕೊಳ್ಳಲಾರಂಭಿಸಿ
೪೨ ದರು. ಆದರೆ ಯೇಸು ಅವರನ್ನು ಹತ್ತರ ಕರೆದು, ಅವರಿಗೆ ಹೇಳಿದ್ದು, ಜನಾಂಗಗಳ ಮೇಲೆ ಆಳುವವರೆಂದು
ಅನ್ನಿಸಿ ಕೊಳ್ಳುವವರು ಅವರ ಮೇಲೆ ಧೊರೆತನ ಮಾಡುತ್ತಾರೆಂದೂ, ಅವರಲ್ಲಿ ದೊಡ್ಡವರು ಅವರ ಮೇಲೆ
೪೩ ಅಧಿಕಾರ ಮಾಡುತ್ತಾರೆಂದೂ, ಬಲ್ಲಿರಿ. ನಿಮ್ಮಲ್ಲಿ ಹಾಗಿರ ಬಾರದು; ಆದರೆ ನಿಮ್ಮಲ್ಲಿ ದೊಡ್ಡವನಾಗ ಮನ
೪೪ ಸ್ಸುಳ್ಳವನು ನಿಮ್ಮ ಸೇವಕನಾಗಿರಲಿ; ಮತ್ತು ನಿಮ್ಮಲ್ಲಿ ಶ್ರೇಷ್ಠನಾಗ ಮನಸ್ಸುಳ್ಳವನು ಎಲ್ಲರ ದಾಸನಾಗಿ
೪೫ ರಲಿ. ಯಾಕಂದರೆ ಮನುಷ್ಯನ ಮಗನು ಸಹ ಸೇವೆ ಹೊಂದುವದಕ್ಕಲ್ಲ, ಸೇವೆ ಮಾಡುವದಕ್ಕೂ, ತನ್ನ
ಪ್ರಾಣವನ್ನು ಅನೇಕರಿಗೋಸ್ಕರ ವಿಮೋಚನೆಬಲಿಯಾಗಿ ಕೊಡುವದಕ್ಕೂ, ಬಂದನು.

ಯೆರಿಕೋವಿನ ಬಳಿಯ ಬರ್ತಿಮಾಯನಿಗೆ ಯೇಸು ದೃಷ್ಟಿ ಕೊಟ್ಟದ್ದು.

೪೬ ಆಗಲವರು [1]ಯೆರಿಕೋವಿಗೆ ಬಂದರು. ಮತ್ತು ಅವನು ತನ್ನ ಶಿಷ್ಯರ ಸಂಗಡಲೂ, ದೊಡ್ಡ ಸಮೂಹದ
೪೭ ಸಂಗಡಲೂ ಯೆರಿಕೋವಿನಿಂದ ಹೊರಡುವಾಗ, ತಿಮಾಯನ ಮಗನಾಗಿರುವ ಕುರುಡನಾದ [2]ಬರ್ತಿಮಾ
ಯನು ಮಾರ್ಗದ ಬಳಿಯಲ್ಲಿ ಭಿಕ್ಷೆ ಬೇಡುತ್ತಾ, ಕೂತು ಕೊಂಡಿದ್ದನು. ಇವನು ನಜರೇತಿನವನಾದ
ಯೇಸು ಇದ್ದಾನೆಂದು ಕೇಳಿ, ದಾವೀದನ ಮಗನಾದ ಯೇಸುವೇ, ನನ್ನನ್ನು ಕರುಣಿಸೆಂದು, ಕೂಗಲಾರಂಭಿ
೪೮ ಸಿದನು. ಅನೇಕರು ಅವನಿಗೆ, ಸುಮ್ಮನಿರ ಬೇಕೆಂದು ಗದರಿಸಿದಾಗ, ಅವನು ಬಹು ಹೆಚ್ಚಾಗಿ, ದಾವೀದನ
೪೯ ಮಗನೇ, ನನ್ನನ್ನು ಕರುಣಿಸೆಂದು, ಕೂಗಿದನು. ಯೇಸು ನಿಂತು ಕೊಂಡು, ಅವನನ್ನು ಕರೆಯ ಬೇಕೆಂದು
ಹೇಳಿದಾಗ, ಅವರು ಕುರುಡನನ್ನು ಕರೆದು, ಧೈರ್ಯವಾಗಿರು, ಏಳು, ನಿನ್ನನ್ನು ಕರೆಯುತ್ತಾನೆಂದು,
೫೦ ಅವನಿಗೆ ಹೇಳಿದರು. ಆಗಲವನು ತನ್ನ ಮೇಲಂಗಿ ತೆಗೆದಿಟ್ಟು, ಎದ್ದು, ಯೇಸುವಿನ ಬಳಿಗೆ ಬಂದನು.
೫೧ ಯೇಸು ಉತ್ತರ ಕೊಟ್ಟು, ನಾನು ನಿನಗೆ ಏನು ಮಾಡ ಬೇಕೆಂದು, ಅವನಿಗೆ ಹೇಳಿದಾಗ, ಕುರುಡನು ಅವನಿಗೆ,
೫೨ ಗುರುವೇ, ದೃಷ್ಟಿ ಕೊಡ ಬೇಕು, ಅಂದನು. ಆಗ ಯೇಸು ಅವನಿಗೆ, ಹೋಗು, ನಿನ್ನ ವಿಶ್ವಾಸವು ನಿನ್ನನ್ನು
ರಕ್ಷಿಸಿ ಅದೆ, ಅಂದನು. ಸಂಗಡಲೇ ಅವನು ದೃಷ್ಟಿ ಹೊಂದಿ, ಯೇಸುವನ್ನು ಮಾರ್ಗದಲ್ಲಿ ಹಿಂಬಾಲಿಸಿದನು.

ನಮ್ಮ ಕರ್ತನು ಯೆರೂಸಲೇಮಿನಲ್ಲಿ ಬಹಿರಂಗವಾಗಿ ಪ್ರವೇಶ ಮಾಡಿದ್ದು; ಫಲವಿಲ್ಲದ ಅಂಜೂರ ಮರವನ್ನು
ಶಪಿಸಿದ್ದು; ದೇವಾಲಯವನ್ನು ಶುದ್ಧ ಮಾಡಿದ್ದು.

**11.** [3]ಅವರು ಯೆರೂಸಲೇಮಿಗೆ ಸಮೀಪವಾಗಿ ಇಪ್ಪೇ ಗುಡ್ಡದ ಹತ್ತರ ಇರುವ ಬೇತ್ಫಗೆಗೂ, ಬೆತಾನ್ಯಕ್ಕೂ
೨ ಶೇರಿದಾಗ, ಅವನು ತನ್ನ ಶಿಷ್ಯರಲ್ಲಿ ಇಬ್ಬರನ್ನು ಕಳುಹಿಸಿ, ಅವರಿಗೆ ಹೇಳಿದ್ದೇನಂದರೆ, ನಿಮಗೆದುರಾಗಿರುವ
ಗ್ರಾಮಕ್ಕೆ ಹೋಗಿರಿ; ಅದರಲ್ಲಿ ಪ್ರವೇಶಿಸುವಾಗಲೇ, ಯಾವ ಮನುಷ್ಯನಾದರೂ ಯಾವಾಗ್ಯೂ ಹತ್ತಿ

1. ೪೬—೫೨. ವಚನಗಳ ವ್ಯಾಖ್ಯಾನವನ್ನು ಮತ್ತಾ. ೨೦. ೨೯—೩೪. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

2. ಬರ್ತಿಮಾಯನು ದೃಷ್ಟಿ ಹೊಂದಿದ ಅದ್ಭುತದಿಂದ ನಾವು ಅನೇಕ ಬುದ್ಧಿಗಳನ್ನು ಕಲಿತು ಕೊಳ್ಳ ಬಹುದು. ಪರಮ ವೈದ್ಯನಾದ ಕ್ರಿಸ್ತನ ಬಳಿಯಲ್ಲಿ ಆತ್ಮಸುಖವನ್ನು ಹೊಂದ ಬೇಕಾದವರು ಯಾವ ಪ್ರಕಾರ ಆತನ ಬಳಿಯಲ್ಲಿ ಬೇಡಿ ಕೊಳ್ಳ ಬೇಕೆಂದೂ, ಯಥಾರ್ಥವಾಗಿ ದೃಢ ಮನಸ್ಸಿನಿಂದ ಬೇಡಿ ಕೊಳ್ಳುವವರಿಗೆ ಹ್ಯಾಗಾದರೂ ಮೇಲು ದೊರಕುವದೆಂದೂ, ಆ ಮೇಲು ಹೊಂದುವವರು ಯಾವ ಪ್ರ

3. ೧೧ನೇ ೧೨ನೇ ಸಂಧಿಗಳಲ್ಲಿರುವ ಸಂಗತಿಗಳನ್ನು ಮತ್ತಾ. ೨೧ನೇ ೨೩ನೇ ಸಂಧಿಗಳ ವರಿಗೂ ವಿವರವಾಗಿ ನೋಡ ಬಹುದು. ದೇವಾಲಯದಲ್ಲಿ ವಿಧವೆಯು ಕಾಣಿಕೆ ಹಾಕಿದ್ದನ್ನು ಮಾತ್ರ ಮಾರ್ಕನ ಸುವಾರ್ತೆಯಲ್ಲಿ ಕೂಡಿಸಿ ಬರೆದದೆ. (ಮಾರ್ಕ. ೧೨. ೪೧—೪೪.) ಮತ್ತಾಯನಿಗಿಂತ ಮಾರ್ಕನು ನಡೆದ ಸಂಗತಿಗಳನ್ನು ಕಾಲಕ್ರಮದ ಪ್ರಕಾರ ತೋರಿಸುತ್ತಾನೆ. (ಮತ್ತಾ. ೨೧. ೧, ೧೨.) ಈ ಪ್ರಕರಣದ ವ್ಯಾಖ್ಯಾನವನ್ನು ಮತ್ತಾ. ೨೧. ೧—



೩ ಕೊಳ್ಳದ ಕತ್ತೇ ಮರಿ ಕಟ್ಟಿರುವದನ್ನು ಕಾಣುವಿರಿ; ಅದನ್ನು ಬಿಚ್ಚಿ, ತನ್ನಿರಿ. ಮತ್ತು ಯಾರಾದರೂ ನಿಮ
ಗೆ, ಇದನ್ನು ಯಾಕೆ ಮಾಡುತ್ತೀರಿ? ಅಂದರೆ, ಅದು ಕರ್ತನಿಗೆ ಬೇಕು, ಅನ್ನಿರಿ; ಸಂಗಡಲೇ ಅವನು ಅದನ್ನು
ಇಲ್ಲಿಗೆ ಕಳುಹಿಸಿ ಬಿಡುವನು.
೪ ಆಗಲವರು ಹೋಗಿ, ಆ ಮರಿಯು ಅಡ್ಡ ಹಾದಿಯಲ್ಲಿ ಬಾಗಲ ಬಳಿಯ ಕಟ್ಟಿರುವದನ್ನು ಕಂಡು, ಅದನ್ನು
೫ ಬಿಚ್ಚಿದರು. ಅಲ್ಲಿ ನಿಂತವರಲ್ಲಿ ಕೆಲವರು ಅವರಿಗೆ, ಮರಿಯನ್ನು ಬಿಚ್ಚಿ ಏನು ಮಾಡುತ್ತೀರಿ? ಅಂದಾಗ;
೬,೭ ಅವರು ಯೇಸು ಆಜ್ಞಾಪಿಸಿದ ಹಾಗೆ ಹೇಳಿದರು; ಆಗಲವರನ್ನು ಬಿಟ್ಟರು. ಮತ್ತು ಮರಿಯನ್ನು ಯೇಸು
ವಿನ ಬಳಿಗೆ ತಂದು, ತಮ್ಮ ವಸ್ತ್ರಗಳನ್ನು ಅದರ ಮೇಲಿಟ್ಟರು; ಅವನು ಅದರ ಮೇಲೆ ಕೂತು ಕೊಂಡನು.
೮ ಅನೇಕರು ತಮ್ಮ ವಸ್ತ್ರಗಳನ್ನು ಮಾರ್ಗದಲ್ಲಿ ಹಾಸಿದರು; ಮತ್ತೊಬ್ಬರು ಮರಗಳಿಂದ ಕೊಂಬೆಗಳನ್ನು
೯ ಕೊಯಿದು, ಮಾರ್ಗದಲ್ಲಿ ಹಾಸಿದರು. ಮತ್ತು ಮುಂದೆ ಹೋಗುವವರೂ ಹಿಂಬಾಲಿಸುವವರೂ ಕೂಗಿ
೧೦ ಹೇಳಿದ್ದೇನಂದರೆ, ಹೊಸನ್ನ, ಕರ್ತನ ಹೆಸರಿನಲ್ಲಿ ಬರುವವನಿಗೆ ಸ್ತೋತ್ರವಾಗಲಿ! ಕರ್ತನ ಹೆಸರಿನಲ್ಲಿ ಬರುವ
ನಮ್ಮ ತಂದೆಯಾದ [1]ದಾವೀದನ ರಾಜ್ಯಕ್ಕೆ ಆಶೀರ್ವಾದವಾಗಲಿ!
ಅತ್ಯುನ್ನತವಾದವುಗಳಲ್ಲಿ ಹೊಸನ್ನ!
೧೧ ಯೇಸು ಯೆರೂಸಲೇಮಿನಲ್ಲಿಯೂ ದೇವಾಲಯದಲ್ಲಿಯೂ ಪ್ರವೇಶಿಸಿ, [2]ಎಲ್ಲವುಗಳನ್ನು ಸುತ್ತು ನೋಡಿ
ಕೊಂಡು, ಆಗ ಸಾಯಂಕಾಲವಾದದರಿಂದ ಹನ್ನೆರಡು ಮಂದಿಯ ಸಂಗಡ ಬೆತಾನ್ಯಕ್ಕೆ ಹೊರಟು ಹೋ
ದನು.
೧೨,೧೩ ಮಾರಣೆ ದಿವಸ ಅವರು ಬೆತಾನ್ಯದಿಂದ ಹೊರಟು ಹೋಗುವಾಗ, ಅವನು ಹಶಿದು, ಎಲೆಗಳುಳ್ಳ ಒಂದು
ಅಂಜೂರದ ಮರವನ್ನು ದೂರದಿಂದ ನೋಡಿ, ಅದರಲ್ಲಿ ತನಗೇನಾದರೂ ಶಿಕ್ಕೀತೆಂದು, ಬಂದನು. ಮತ್ತು
ಅದರ ಹತ್ತರ ಬಂದು, ಎಲೆಗಳು ಹೊರ್ತು ಮತ್ತೇನೂ ಕಾಣಲಿಲ್ಲ; [3]ಯಾಕಂದರೆ ಅಂಜೂರಗಳ ಕಾಲವಾ
೧೪ ಗಿರಲಿಲ್ಲ. ಆಗ ಯೇಸು ಉತ್ತರ ಕೊಟ್ಟು, ಅದಕ್ಕೆ, ನಿನ್ನಿಂದ [4]ಇನ್ನೆಂದಿಗೂ ಯಾರೂ ಫಲವನ್ನು ತಿನ್ನದಿರ
ಲಿ, ಅಂದನು. ಅವನ ಶಿಷ್ಯರು ಅದನ್ನು ಕೇಳಿದರು.

1. ಮೆಸ್ಸೀಯನೆಂಬ ಲೋಕರಕ್ಷಕನು ಬರುವಾಗ ದಾವೀದನ ರಾಜ್ಯವು ಪ್ರಬಲಿಸುವದೆಂದು ವಾಗ್ದತ್ತವಿತ್ತು. (೨ ಸಮು. ೭. ಯೆಶಾ. ೧೧.) ಈ ರಾಜ್ಯಭಾರವನ್ನು ಕ್ರಿಸ್ತನು ಸ್ಥಾಪಿಸುತ್ತಾನೆಂದು ಜನರು ನೆನಸಿದರು. ಆತನ ರಾಜ್ಯವು ಇಹ ಸಮ್ಮಂಧವಾದದ್ದಾಗಿರದೆ ಆತ್ಮೀಕವಾದದ್ದೂ ಪರದ ಸಮ್ಮಂಧವಾದದ್ದೂ ಎಂದು ಅವರು ನೆನಸಲಿಲ್ಲ. "ಹೊಸನ್ನ" ಎಂದು ಆತನನ್ನು ಹೊಗಳಿ ಕೊಂಡಾಡಿದ ಈ ಜನರು ಇನ್ನು ಒಂದು ವಾರದೊಳಗೆ, ಆತನನ್ನು ಶಿಲುಬೆಗೆ ಹಾಕು ಎಂದು, ಕೂಗಿದರು.

2. ಇದನ್ನು ಈ ಸುವಾರ್ತೆಯಲ್ಲಿ ಮಾತ್ರ ಕಾಣ ಬಹುದು. ಮುಂಚೆ ದೇವಾಲಯವನ್ನು ಚನ್ನಾಗಿ ಸುತ್ತಿ ನೋಡಿ, ಅದರಲ್ಲಿ ನಡಿಯುವ ಅನಾಚಾರಗಳನ್ನೆಲ್ಲಾ ತಿಳಿದು ಕೊಂಡು, ಮಾರಣೆ ದಿನ ಅವುಗಳನ್ನು ತೊಲಗಿಸಿ, ದೇವಾಲಯವನ್ನು ಶುದ್ಧ ಮಾಡಿದನು.

3. ಅಂಜೂರದ ಮರವು ವರುಷಕ್ಕೆ ಎರಡು ಮೂರು ಸಾರಿ ಫಲ ಕೊಡುವದು. ಜನಸಂಚಾರವಿಲ್ಲದ ಸ್ಥಳಗಳಲ್ಲಿ ವಸಂತಕಾಲದ ಮಟ್ಟಿಗೂ ಆ ಮರಗಳಲ್ಲಿ ಹಣ್ಣುಗಳು ಇರುವದು. ಆ ಹಣ್ಣುಗಳನ್ನು ಕೊಯಿದ ಮೇಲೆ ಬೇಸಿಗೆಕಾಲದ ಫಲ ಉಂಟಾಗಲೂ ಚಿಗುರು ಬಿಡಲೂ ಪ್ರಾರಂಭಿಸುವದು. ಒಂದು ಮರದಲ್ಲಿ ಎಲೆಗಳಿದ್ದರೆ, ಅದರಲ್ಲಿ ಕಾಯಿಗಳೂ ಹಣ್ಣುಗಳೂ ಇರುವದುಂಟು. ಕಾಯಿಗಳಿಲ್ಲದೆ ಎಲೆಗಳು ಮಾತ್ರವಿದ್ದರೆ, ಅದು ಗೊಡ್ಡು ಮರವೆಂದು ಹೇಳಲ್ಪಡುವದು. ಹಣ್ಣಿನ ಕಾಲವಾಗಿರಲಿಲ್ಲ ಎಂಬುವದು ಹಣ್ಣುಗಳನ್ನು ಕೊಯ್ಯುವ ಕಾಲವೆಂಬ ಅರ್ಥ. ದಾರಿ ಅಂಚಿನ ಗಿಡದಲ್ಲಿ ಹಣ್ಣುಗಳು ಬೇಗ ಮುಗಿದು ಹೋಗಿರುವದು.

4. ೨೩, ೨೪ನೇ ವಚನಗಳಲ್ಲಿ ಅಡಗಿರುವ ಸತ್ಯಗಳನ್ನು ಮಾತ್ರವಲ್ಲ, ಬೇರೆ ಬೋಧನೆಗಳನ್ನು ಸಹ ಶಿಷ್ಯರಿಗೆ ಕಲಿಸುವ ಉದ್ದಿಶ್ಯ ಕರ್ತನು ಫಲವಿಲ್ಲದ ಅಂಜೂರದ ಮರವನ್ನು ಶಪಿಸಿದನು. ಯೆಹೂದ್ಯ ಜನರು ಶೃಂಗಾರವನದಂತೆ ಫಲಭರಿತವಾದ ಕಾನಾನ್ ದೇಶದಲ್ಲಿ ದೇವರಿಂದ ನೆಡಲ್ಪಟ್ಟ ಮರದ ಹಾಗಿದ್ದರು. ಅವರು ನೀತಿ, ಪರಿಶುದ್ಧತ್ವ, ಧರ್ಮವೆಂಬ ಒಳ್ಳೇ ಫಲಗಳನ್ನು ಕೊಡುವದಕ್ಕೆ ಹೇತುವೆಯಾದ ಅನುಕೂಲಗಳುಂಟಾಗಿದ್ದವು. ಆದಾಗ್ಯೂ ಅವರಿಗೆ ಹೊರಗಿನ ಆಚಾರಗಳಾದ ಎಲೆಗಳೇ ಹೊರ್ತು, ಒಳಗಿನ ಭಕ್ತಿ ಎಂಬ ಫಲಗಳೇನೂ ಇಲ್ಲದ್ದರಿಂದ ಅವರಿಗೆ ನಾಶಕಾಲವು ಸಮೀಪಿಸಿತ್ತು. (ಯೆಶಾ. ೫. ೧—೭. ಯೆರೆ. ೨. ೨೧. ಯೋಹಾ. ೧೫. ೬.) ಈ ಸತ್ಯೋಪದೇಶವನ್ನು ಕಲಿಸುವ ಉದ್ದಿಶ್ಯ ಕರ್ತನು ಅಂಜೂರ ಮರವನ್ನು ಶಪಿಸಿದನು. ಪಾಪಾತ್ಮರ ಮೇಲೆ ತನ್ನ ಅಪರಿಮಿತವಾದ ಕರುಣೆಯನ್ನು ತೋರಿಸುವದಕ್ಕೆ ಅನೇಕ ಅದ್ಭುತಗಳನ್ನು ಮಾಡಿದ ಕರ್ತನು, ಗುಣ ಪಡದ ಪಾಪಿಷ್ಠರಿಗೆ ಕಠಿಣ ದಂಡನೆ ಬರುತ್ತದೆ ಎಂಬುವದನ್ನು ಅಂಜೂರ ಮರವನ್ನು ಶಪಿಸಿದ್ದರಿಂದ ತೋರಿಸಿದನು. ಒಣಗಿ ಹೋದ ಆ ಮರದ ಮೂಲಕವಾಗಿ ಅನೇಕ ಆತ್ಮಗಳು ಗುಣ ಪಡುವದಕ್ಕೆ ತಕ್ಕ ಬುದ್ಧಿ ಕಲಿಯ ಹೇತುವೆಯಾಯಿತು.

೧೫ ಅವರು ಯೆರೂಸಲೇಮಿಗೆ ಬಂದಾಗ, ಯೇಸು ದೇವಾಲಯದಲ್ಲಿ ಪ್ರವೇಶಿಸಿ, ದೇವಾಲಯದಲ್ಲಿ ಕ್ರಯ
ವಿಕ್ರಯ ಮಾಡುವವರನ್ನು ಹೊರಗೆ ಹಾಕಲಾರಂಭಿಸಿ, ಚಿನಿವಾರರ ಮೇಜುಗಳನ್ನೂ ಪಾರಿವಾಳ ಮಾರು
೧೬ ವವರ ಪೀಠಗಳನ್ನೂ ಕೌಚಿ ಬಿಟ್ಟನು. ಮತ್ತು ಒಬ್ಬನನ್ನಾದರೂ ದೇವಾಲಯದ ಮಾರ್ಗವಾಗಿ ಸಾಮಾ
೧೭ ನು ತಕ್ಕೊಂಡು ಹೋಗಗೊಡಿಸಲಿಲ್ಲ. ಮತ್ತು, ನನ್ನ ಮನೆಯು ಎಲ್ಲಾ ಜನಾಂಗಗಳಿಗೆ ಪ್ರಾರ್ಥನೆಯ
ಮನೆ ಎಂದು ಕರೆಯಲ್ಪಡುವದೆಂಬದಾಗಿ ಬರೆದದೆ ಅಲ್ಲವೋ? ಆದರೆ ನೀವು ಅದನ್ನು [1]ಕಳ್ಳರ ಗವಿಯಾಗ
ಮಾಡಿದ್ಧೀರಿ, (ಯೆಶಾ. ೫೬. ೭. ಯೆರೆ. ೭. ೧೧.) ಎಂದು ಅವರಿಗೆ ಹೇಳಿ, ಬೋಧಿಸಿದನು.
೧೮ ಆಗ ಶಾಸ್ತ್ರಿಗಳೂ ಪ್ರಧಾನ ಯಾಜಕರೂ ಅದನ್ನು ಕೇಳಿ, ಅವನನ್ನು ಹ್ಯಾಗೆ ಸಂಹರಿಸುವ ಎಂದು, ಹುಡು
ಕಿದರು. ಯಾಕಂದರೆ ಸಮೂಹವೆಲ್ಲಾ ಅವನ ಬೋಧನೆಗೆ ಭ್ರಮಿಸಿದದರಿಂದ, ಅವನಿಗೆ ಭಯ ಪಟ್ಟರು.
೧೯ ಸಾಯಂಕಾಲವಾದಾಗ, ಅವನು [2]ಪಟ್ಣದ ಹೊರಗೆ ಹೋದನು.
೨೦ ಹೊತ್ತಾರೆ, ಅವರು ಹೋಗುತ್ತಿರುವಾಗ, ಆ ಅಂಜೂರದ ಮರವು ಬೇರೊಂದಿಗೆ ಒಣಗಿರುವದನ್ನು ಕಂಡ
೨೧ ರು. ಆಗ ಪೇತ್ರನು ಜ್ಞಾಪಕ ಮಾಡಿ ಕೊಂಡು, ಅವನಿಗೆ, ರಬ್ಬಿಯೇ, ಇಗೋ, ನೀನು ಶಪಿಸಿದ ಅಂಜೂರದ
ಮರವು ಒಣಗಿ ಹೋಯಿತು, ಅಂದನು.
೨೨, ೨೩ ಯೇಸು ಪ್ರತ್ಯುತ್ತರವಾಗಿ ಅವರಿಗೆ ಹೇಳಿದ್ದು, ದೇವರಲ್ಲಿ ನಂಬಿಕೆ ಇಡಿರಿ; ಯಾಕಂದರೆ ನಿಶ್ಚಯ
ವಾಗಿ ನಿಮಗೆ ಹೇಳುತ್ತೇನೆ, ಯಾವನು ತನ್ನ ಹೃದಯದಲ್ಲಿ ಸಂದೇಹ ಪಡದೆ, ತಾನು ಹೇಳುವವುಗಳು ಆಗು
ವವೆಂದು ನಂಬಿ, ಈ ಬೆಟ್ಟಕ್ಕೆ, ಎದ್ದು, ಸಮುದ್ರದಲ್ಲಿ ಬೀಳೆಂದು ಹೇಳುವನೋ, ಅವನು ಹೇಳುವಂಥಾದ್ದು
೨೪ ಅವನಿಗೆ ಆಗುವದು. ಆದದರಿಂದ ನಿಮಗೆ ಹೇಳುತ್ತೇನೆ, ನೀವು ಪ್ರಾರ್ಥಿಸಿ ಬೇಡಿ ಕೊಳ್ಳುವವುಗಳನ್ನೆಲ್ಲಾ
[3]ಹೊಂದುವೆವೆಂದು ನಂಬಿದರೆ, ನಿಮಗೆ ಶಿಕ್ಕುವವು.
೨೫ ಮತ್ತು ಪ್ರಾರ್ಥಿಸುವವರಾಗಿ [4]ನಿಂತು ಕೊಳ್ಳುವಾಗ, ಪರಲೋಕದಲ್ಲಿರುವ ನಿಮ್ಮ ತಂದೆ ಸಹ ನಿಮ್ಮ ತಪ್ಪು
೨೬ ಗಳನ್ನು ನಿಮಗೆ ಮನ್ನಿಸುವ ಹಾಗೆ, ಯಾವನ ಮೇಲೆ ಏನಾದರೂ ಇದ್ದರೆ, ಅದನ್ನು ಮನ್ನಿಸಿರಿ. ನೀವು ಮ
ನ್ನಿಸದೆ ಇದ್ದರೆ, ಪರಲೋಕದಲ್ಲಿರುವ ನಿಮ್ಮ ತಂದೆಯು ಸಹ ನಿಮ್ಮ ತಪ್ಪುಗಳನ್ನು ಮನ್ನಿಸನು.

ಕ್ರಿಸ್ತನ ಅಧಿಕಾರವನ್ನು ಆಕ್ಷೇಪಿಸಿದ್ದು; ಸ್ನಾನಿಕನಾದ ಯೋಹಾನನ ಅಧಿಕಾರವನ್ನು ಉಪಮಾನಿಸಿ ಉತ್ತರ ಕೊಟ್ಟದ್ದು; ಇಬ್ಬರು ಕುಮಾರರನ್ನೂ ದ್ರಾಕ್ಷೇ ತೋಟವನ್ನೂ ಕುರಿತ ಸಾಮ್ಯಗಳು.

೨೭ [5]ಆಗಲವರು ತಿರಿಗಿ ಯೆರೂಸಲೇಮಿಗೆ ಬಂದರು. ಮತ್ತು ಅವನು ದೇವಾಲಯದಲ್ಲಿ ತಿರುಗಾಡುತ್ತಿರುವಾ
೨೮ ಗ, ಪ್ರಧಾನ ಯಾಜಕರೂ ಶಾಸ್ತ್ರಿಗಳೂ ಹಿರಿಯರೂ ಅವನ ಬಳಿಗೆ ಬಂದು, ಇವುಗಳನ್ನು ಯಾವ ಅಧಿ

1. (ಯೆರೆ. ೭. ೧೧.) ಕ್ರಿಸ್ತನು ತನ್ನ ದಿವ್ಯ ಉದ್ಯೋಗವನ್ನು ಪ್ರಾರಂಭಿಸಿದ ಕಾಲದಲ್ಲಿ ಪರಿಶುದ್ಧ ದೇವಾಲಯದಲ್ಲಿ ಲೌಕಿಕ ವ್ಯಾಪಾರವು ನಡಿಸಿದದಕ್ಕಾಗಿ ಗದರಿಸಿದನು. (ಯೋಹಾ. ೨. ೧೬.) ಈಗ ಅದರಿಂದ ಉಂಟಾದ ಸುಳ್ಳು, ದ್ರವ್ಯಾಶೆ ಮುಂತಾದ ಪಾಪಗಳಿಗಾಗಿ ಗದರಿಸುತ್ತಾನೆ. ದೇವಾಲಯವನ್ನು ಹೊಲೆ ಮಾಡಕೂಡದೆಂದು ವೈರಾಗ್ಯವಾಗಿದ್ದ ಪ್ರಧಾನ ಯಾಜಕರು ಇಂಥಾ ಅಶುದ್ಧ ವ್ಯಾಪಾರವು ನಡಿಯುವದಕ್ಕೆ ಸಮ್ಮತಿಸಿದ್ದು ಆಶ್ಚರ್ಯವಾಗಿದೆ. ಈ ವ್ಯಾಪಾರವು ಅನ್ಯ ಜನಾಂಗಗಳ ಪ್ರಾಕಾರದಲ್ಲಿ ನಡೆದದರಿಂದ ಯೆಹೂದ್ಯರಿಗೆ ಜನಾಂಗಗಳ ಮೇಲಿದ್ದ ಅಸಹ್ಯವು ಕಾಣುತ್ತದೆ. ಆ ವ್ಯಾಪಾರವನ್ನು ಕರ್ತನು ತೊಲಗಿಸಿ ಬಿಟ್ಟದ್ದನ್ನು ನೋಡಿದರೆ, ಆತನು ಯೆಹೂದ್ಯರಂತೆ ಜನಾಂಗಗಳನ್ನು ಸಹ ಪ್ರೀತಿ ಮಾಡುತ್ತಾನೆಂದು ತಿಳಿಯ ಬಹುದು. ದೇವರ ಮನೆ "ಎಲ್ಲಾ ಜನಾಂಗಗಳಿಗೆ ಪ್ರಾರ್ಥನೆಯ ಮನೆ" ಎಂದು ಹೇಳುತ್ತಾನೆ.

2. ಯೆರೂಸಲೇಮಿನಲ್ಲಿ ಪಸ್ಕ ಹಬ್ಬಕ್ಕೆ ಬಂದ ಜನರ ಸಂದಣಿ ಅಧಿಕವಾಗಿದದರಿಂದ, ರಾತ್ರಿಯಲ್ಲಿ ಸ್ವಲ್ಪ ವಿಶ್ರಮಿಸಿ ಕೊಳ್ಳುವ

3. ಮೂರಣೆ ದಿನ ಉದಯದಲ್ಲಿ ಪಟ್ಣಕ್ಕೆ ಹೋಗುವ ಮಾರ್ಗದಲ್ಲಿ ಒಣಗಿ ಹೋದ ಅಂಜೂರದ ಮರವನ್ನು ಕಂಡು, ಪೇತ್ರನು ತನ್ನ ಗುರುವಿಗೆ ಹೇಳಲು, ಆತನು ಈ ವಾಕ್ಯಗಳಲ್ಲಿ ಅಡಗಿರುವ ಬೋಧನೆಯನ್ನು ಅವರೆಲ್ಲರಿಗೂ ಕಲಿಸಿದನು. ವಿಶ್ವಾಸವುಳ್ಳ ಭಕ್ತರಿಗೆ ಬೆಟ್ಟದೋಪಾದಿಯಾಗಿ ಬರುವ ತಡೆಗಳೂ ವಿಘ್ನಗಳೂ ಸೂರ್ಯನ ಮುಂದಿನ ಹಿಮದಂತೆ ನಿವರ್ತಿಯಾಗುವವು. ದೇವರ ಚಿತ್ತಕ್ಕೆ ಅನುಕೂಲವಾಗಿ ಅವರು ಬೇಡುವದನ್ನೆಲ್ಲಾ ಹೊಂದುವರು.

4. ಕರ್ತನು ಅಂಜೂರದ ಮರವನ್ನು ಶಪಿಸಿದ್ದನ್ನು ಕಂಡ ಶಿಷ್ಯರು, ತಾವು ಸಹ ತಮ್ಮ ಶತ್ರುಗಳನ್ನು ಶಪಿಸ ಬಹುದೆಂದು ಒಂದು ವೇಳೆ ನೆನಸಿರುವರು. (ಲೂಕ. ೯. ೫೪.) ಅದರಿಂದ ಅವರು ಪ್ರಾರ್ಥಿಸುವಾಗ ತಮ್ಮ ಶತ್ರುಗಳ ಅಪರಾಧಗಳನ್ನು ಮನ್ನಿಸ ಬೇಕೆಂದು ರಕ್ಷಕನು ಆಜ್ಞಾಪಿಸುತ್ತಾನೆ. ಪ್ರೀತಿಯಿಂದ ಪ್ರೇರಿಸಲ್ಪಟ್ಟು ಹೀಗೆ ಮತ್ತೊಬ್ಬರ ತಪ್ಪನ್ನು ಮನ್ನಿಸಲಾರದವರು ಪ್ರಾರ್ಥನೆಯ ಫಲವನ್ನು ಕಳಕೊಳ್ಳುವರು. ಮತ್ತು ದೇವರ ಕೃಪೆಯಿಂದ ಉಂಟಾಗುವ ಪಾಪಕ್ಷಮೆಯನ್ನು ಹೊಂದಲಾರರು.

5. ೨೭—೩೩. ವಚನಗಳ ವ್ಯಾಖ್ಯಾನವನ್ನು ಮತ್ತಾ. ೨೧.



ಕಾರದಿಂದ ಮಾಡುತ್ತೀ? ಇವುಗಳನ್ನು ಮಾಡುವದಕ್ಕೆ ನಿನಗೆ ಈ ಅಧಿಕಾರ ಕೊಟ್ಟವನ್ಯಾರೆಂದು, ಅವನಿಗೆ
ಹೇಳಿದಾಗ;
೨೯ ಯೇಸು ಪ್ರತ್ಯುತ್ತರವಾಗಿ ಅವರಿಗೆ ಹೇಳಿದ್ದೇನಂದರೆ, ನಾನು ಸಹ ನಿಮ್ಮನ್ನು ಒಂದು ಮಾತು ಕೇಳುತ್ತೇನೆ;
ನನಗೆ ಉತ್ತರ ಕೊಡಿರಿ; ಆಗ ನಾನು ಯಾವ ಅಧಿಕಾರದಿಂದ ಇವುಗಳನ್ನು ಮಾಡುತ್ತೇನೆಂದು ನಿಮಗೆ
೩೦ ಹೇಳುವೆನು. ಯೋಹಾನನ ಸ್ನಾನವು ಪರಲೋಕದಿಂದಾಯಿತೋ? ಮನುಷ್ಯರಿಂದಾಯಿತೋ? ನನಗೆ
ಉತ್ತರ ಹೇಳಿರಿ.
೩೧ ಆಗಲವರು ತಮ್ಮೊಳಗೆ ಆಲೋಚನೆ ಮಾಡಿ ಕೊಂಡು, ಹೇಳಿದ್ದೇನಂದರೆ, ನಾವು ಪರಲೋಕದಿಂದ ಅಂದರೆ,
೩೨ ಅವನು, ಯಾಕೆ ಅವನಲ್ಲಿ ನಂಬಿಕೆ ಇಡಲಿಲ್ಲ? ಅನ್ನುವನು; ಮನುಷ್ಯರಿಂದ ಅಂದರೆ, ಜನರಿಗೆ ಭಯ ಪಡು
೩೩ ತ್ತಿದ್ದರು; ಯಾಕಂದರೆ ಯೋಹಾನನು ನಿಜವಾಗಿ ಪ್ರವಾದಿ ಎಂದು, ಎಲ್ಲರು ಎಣಿಸಿ ಕೊಂಡರು. ಹೀಗಿರ
ಲಾಗಿ ಅವರು ಉತ್ತರ ಕೊಟ್ಟು, ಯೇಸುವಿಗೆ, ನಾವರಿಯೆವು, ಅಂದರು. ಮತ್ತು ಯೇಸು ಪ್ರತ್ಯುತ್ತರವಾಗಿ
ಅವರಿಗೆ, ನಾನು ಸಹ ಇವುಗಳನ್ನು ಯಾವ ಅಧಿಕಾರದಿಂದ ಮಾಡುತ್ತೇನೆಂದು ನಿಮಗೆ ಹೇಳುವದಿಲ್ಲ, ಅಂದನು.

12. ಆಗಲವನು [1]ಸಾಮ್ಯಗಳಿಂದ ಅವರಿಗೆ ಹೇಳಲಾರಂಭಿಸಿದ್ದೇನಂದರೆ, ಒಬ್ಬ ಮನುಷ್ಯನು ದ್ರಾಕ್ಷೇ ತೋಟ
ನೆಟ್ಟು, ಸುತ್ತಲು ಬೇಲಿ ಹಾಕಿ, ತೊಟ್ಟೆ ಅಗಿದು, ಗೋಪುರ ಕಟ್ಟಿ, ಅದನ್ನು ಒಕ್ಕಲಿಗರ ವಶಕ್ಕೆ ಕೊಟ್ಟು,
೨ ದೇಶಾಂತರಕ್ಕೆ ಹೋದನು. ಮತ್ತು ಒಕ್ಕಲಿಗರಿಂದ ದ್ರಾಕ್ಷೇ ತೋಟದ ಫಲದಲ್ಲಿ ಪಾಲು ಹೊಂದುವ
೩ ಹಾಗೆ, ತಕ್ಕ ಕಾಲದಲ್ಲಿ ದಾಸನನ್ನು ಒಕ್ಕಲಿಗರ ಬಳಿಗೆ ಕಳುಹಿಸಿದನು. ಆದರೆ ಅವರು ಅವನನ್ನು ಹಿಡು
೪ ಕೊಂಡು, ಹೊಡೆದು, ಬರಿದಾಗಿ ಕಳುಹಿಸಿ ಬಿಟ್ಟರು. ಮತ್ತು ಅವರ ಬಳಿಗೆ ಬೇರೆ ದಾಸನನ್ನು ಕಳು
ಹಿಸಿದನು; ಅವರು ಅವನನ್ನು ಕಲ್ಲೆಸೆದು, ತಲೆಗೆ ಘಾಯ ಮಾಡಿ, ಅವಮಾನದಿಂದ ಕಳುಹಿಸಿ ಬಿಟ್ಟರು.
೫ ಮತ್ತು ಬೇರೊಬ್ಬನನ್ನು ಕಳುಹಿಸಿದನು; ಅವನನ್ನೂ ಕೊಂದು ಹಾಕಿದರು. ಮತ್ತು ಬೇರೆ ಅನೇಕರಲ್ಲಿ ಕೆಲ
೬ ವರನ್ನು ಹೊಡೆದರು; ಕೆಲವರನ್ನು ಕೊಂದು ಹಾಕಿದರು. ಹೀಗಿರುವದರಿಂದ ತನಗೆ [2]ಪ್ರಿಯವಾದ ಒಬ್ಬನೇ
ಮಗನು ಇರಲಾಗಿ, ಕಡೆಯಲ್ಲಿ ಅವನನ್ನು ಸಹ ಅವರ ಬಳಿಗೆ ಕಳುಹಿಸಿ, ನನ್ನ ಮಗನನ್ನು ಲಕ್ಷ್ಯ ಮಾಡು
೭ ವರು, ಅಂದನು. ಆದರೆ ಆ ಒಕ್ಕಲಿಗರು, ಇವನೇ ಬಾಧ್ಯಸ್ಥನು, ಬನ್ನಿ, ಇವನನ್ನು ಕೊಂದು ಹಾಕುವ;
೮ ಆಗ ಬಾಧ್ಯತೆ ನಮ್ಮದಾಗಿರುವದೆಂದು, ತಮ್ಮೊಳಗೆ ಅಂದು ಕೊಂಡು, ಅವನನ್ನು ಹಿಡಿದು, ಕೊಂದು,
೯ ದ್ರಾಕ್ಷೇ ತೋಟದ ಹೊರಗೆ ಹಾಕಿದರು. ಹಾಗಾದರೆ ದ್ರಾಕ್ಷೇ ತೋಟದ ಯಜಮಾನನು ಏನು ಮಾಡು
ವನು? ಅವನು ಬಂದು, ಆ ಒಕ್ಕಲಿಗರನ್ನು ಸಂಹರಿಸಿ, ದ್ರಾಕ್ಷೇ ತೋಟವನ್ನು ಮತ್ತೊಬ್ಬರಿಗೆ ಕೊಡುವನು.
೧೦, ೧೧ ಇದಲ್ಲದೆ ಮನೆ ಕಟ್ಟುವವರು ತಳ್ಳಿದ ಕಲ್ಲೇ ಮೂಲೆಗೆ ತಲೆಕಲ್ಲಾಯಿತು; ಅದು ಕರ್ತನಿಂದುಂಟಾಗಿ,
ನಮ್ಮ ಕಣ್ಣುಗಳಿಗೆ ಆಶ್ಚರ್ಯವಾಗಿದೆ, (ಕೀರ್ತ. ೧೧೮. ೨೨, ೨೩.) ಎಂಬ ಬರಹವನ್ನು ನೀವು ಓದಲಿಲ್ಲವೋ?
೧೨ ಆಗಲವರು, ತಮ್ಮನ್ನು ಕುರಿತು ಈ ಸಾಮ್ಯವನ್ನು ಹೇಳಿದನೆಂದು ತಿಳುಕೊಂಡು, ಅವನನ್ನು ಹಿಡಿಯ ಹು
ಡುಕಿದರು. ಆದರೆ ಸಮೂಹಕ್ಕೆ ಭಯ ಪಟ್ಟು, ಅವನನ್ನು ಬಿಟ್ಟು ಹೋದರು.

1. ಮಾರ್ಕನ ಸುವಾರ್ತೆಯಲ್ಲಿ ಒಂದು ಸಾಮ್ಯ ಮಾತ್ರ ಹೇಳಿ ಇದೆ. ಮತ್ತಾಯನ ಸುವಾರ್ತೆಯಲ್ಲಿ ಇನ್ನೂ ಕೆಲವು ಸಾಮ್ಯಗಳನ್ನು ಕೂಡಿಸಿ ಬರೆದಿದೆ. (೧—೧೨ನ್ನು ಮತ್ತಾ. ೨೧. ೩೩—೪೬. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.)

2. ಸೇವಕರಿಗೂ ದ್ರಾಕ್ಷೇ ತೋಟದ ಸ್ವಂತಗಾರನಾದ ಕುಮಾರನಿಗೂ ಇರುವ ವ್ಯತ್ಯಾಸವನ್ನು ಈ ಸುವಾರ್ತೆಯಲ್ಲಿ ಸ್ಪಷ್ಟವಾಗಿ ತೋರಿಸಿ ಇದೆ. (ಇಬ್ರೀ. ೩. ೫, ೬.) ಇದಕ್ಕೆ ಮುಂಚಿತಾಗಿ ಬಂದವರೆಲ್ಲರೂ ಸೇವಕರು. ಕಡೆಯಲ್ಲಿ ಬಂದವನು ಯೆಹೋವನ ಏಕ ಪುತ್ರನು. ಅವರು ನಂಬಿಕೆಯುಳ್ಳ ರಾಯಬಾರಿಗಳು. ಈತನು ಪ್ರಿಯ ಕುಮಾರನು. ದೇವರು ಆತನಿಗೆ ಸ್ವಂತ ತಂದೆಯು. (ಯೋಹಾ. ೫. ೧೮.) ಆತನು ದೇವರಿಗೆ ಸ್ವಂತ ಕುಮಾರನು. (ರೋಮಾ. ೮. ೩೨. ಇಬ್ರೀ. ೧. ೧—೩; ೩. ೫, ೬.) ಈ ಸಾಮ್ಯದಿಂದ ದೇವರ ಮಹಾ ಪ್ರೀತಿಯೂ, ಮನುಷ್ಯನ ಕಲಹ ಗುಣವೂ ತೋರುತ್ತದೆ. ಬೇರೆ ಯತ್ನಗಳೆಲ್ಲಾ ವ್ಯರ್ಥವಾದಾಗ ದೇವರು ತನ್ನ ಸ್ವಂತ ಕುಮಾರನನ್ನು ಕಳುಹಿಸಿದ್ದು ಮಹಾ ಪ್ರೀತಿಯಲ್ಲವೋ? ದೇವರ ಪ್ರಿಯ ಕುಮಾರನಾದ ಯೇಸುವನ್ನು ಮನುಷ್ಯರು ತಿರಸ್ಕರಿಸಿ ಕೊಂದು ಹಾಕಿದ್ದು ಅವರ ಕಲಹ ಗುಣಕ್ಕೆ ಬಲವಾದ ಸಾಕ್ಷಿಯಾಗಿದೆ.

ತೆರಿಗೆಯ ಹಣ, ಪುನರುತ್ಥಾನ, ದೊಡ್ಡ ಕಟ್ಟಳೆ, ಇವುಗಳನ್ನು ಕುರಿತು ಕ್ರಿಸ್ತನು ಕೊಟ್ಟ ಉತ್ತರ;
ದಾವೀದನ ಮಗನನ್ನು ಕುರಿತು ಆತನು ಕೇಳಿದ ಪ್ರಶ್ನೆ.

೧೩ ಮತ್ತು [1]ಅವನನ್ನು ವಾಕ್ಯದಲ್ಲಿ ಹಿಡಿಯುವ ಹಾಗೆ, ಫರಿಸಾಯರಲ್ಲಿಯೂ ಹೆರೋದ್ಯರಲ್ಲಿಯೂ ಕೆಲವರ
೧೪ ನ್ನು ಅವನ ಬಳಿಗೆ ಕಳುಹಿಸಿದರು. ಇವರು ಬಂದು, ಅವನಿಗೆ, ಬೋಧಕನೇ, ನೀನು ಸತ್ಯವಂತನಾಗಿದ್ದು, ಯಾವನನ್ನೂ ಲಕ್ಷ್ಯ ಮಾಡುವದಿಲ್ಲವೆಂದು ಬಲ್ಲೆವು; ಯಾಕಂದರೆ ಮನುಷ್ಯರ ಮುಖದಾಕ್ಷಿಣ್ಯ ಮಾಡ ದೆ ಸತ್ಯವಾಗಿ ದೇವರ ಮಾರ್ಗವನ್ನು ಬೋಧಿಸುತ್ತೀ. ಕೈಸರನಿಗೆ ತೆರಿಗೆ ಕೊಡ ಬಹುದೋ? ಬಾರದೋ?
೧೫ ಕೊಡೋಣೋ? ಬೇಡವೋ? ಅಂದಾಗ; ಅವನು ಅವರ ಕಪಟ ತಿಳಿದು, ನೀವು ನನ್ನನ್ನು ಶೋಧಿಸುವದೇ
೧೬ ನು? ನಾನು ನೋಡುವ ಹಾಗೆ, ನನಗೆ ದೆನಾರಿಯನ್ನು ತನ್ನಿರಿ, ಅಂದನು. ಅವರು ತಂದ ಮೇಲೆ ಅವನು ಅವರಿಗೆ, ಈ ರೂಪವೂ ಮೇಲ್ಬರಹವೂ ಯಾರವು? ಅಂದಾಗ; ಅವರು ಅವನಿಗೆ ಕೈಸರನವು, ಅಂದರು.
೧೭ ಆಗ ಯೇಸು ಅವರಿಗೆ ಪ್ರತ್ಯುತ್ತರವಾಗಿ, ಕೈಸರನದನ್ನು ಕೈಸರನಿಗೆ, ದೇವರದನ್ನು ದೇವರಿಗೆ, ಸಲ್ಲಿಸಿರಿ, ಅಂದ ನು. ಆಗಲವನಿಗೆ ಆಶ್ಚರ್ಯ ಪಟ್ಟರು.

೧೮ ತರುವಾಯ ಪುನರುತ್ಥಾನವಿಲ್ಲವೆಂದು ಹೇಳುವ ಸದ್ದುಕಾಯರು ಅವನ ಬಳಿಗೆ ಬಂದು, ಅವನನ್ನು ಕೇಳಿದ್ದೇ
೧೯ ನಂದರೆ, ಬೋಧಕನೇ, ಒಬ್ಬನ ಸಹೋದರನು ಸತ್ತು ಹೋಗಿ, ಮಕ್ಕಳಿಲ್ಲದೆ ಹೆಂಡತಿಯನ್ನು ಉಳಿಸಿದರೆ, ಅವನ ಸಹೋದರನು ಅವನ ಹೆಂಡತಿಯನ್ನು ತಕ್ಕೊಂಡು, ತನ್ನ ಸಹೋದರನಿಗೆ ಮಕ್ಕಳನ್ನು ಹುಟ್ಟಿಸ ಬೇಕೆಂದು
೨೦ (ದ್ವಿತೀಯ ನ್ಯಾ. ೨೫. ೫.) ಮೋಶೆಯು ನಮಗೆ ಬರೆದಿದ್ದಾನೆ. ಏಳು ಮಂದಿ ಸಹೋದರರಿದ್ದರು; ಮೊದ
೨೧ ಲಿನವನು ಹೆಂಡತಿಯನ್ನು ತಕ್ಕೊಂಡು, ಮಕ್ಕಳಿಲ್ಲದೆ ಸತ್ತನು. ಮತ್ತು ಎರಡನೆಯವನು ಅವಳನ್ನು ತಕ್ಕೊಂ
೨೨ ಡನು; ಇವನು ಸಹ ಮಕ್ಕಳಿಲ್ಲದೆ ಸತ್ತನು. ಮೂರನೆಯವನೂ ಹಾಗೆಯೇ. ಮತ್ತು ಏಳು ಮಂದಿ ಅವ ಳನ್ನು ತಕ್ಕೊಂಡು, ಮಕ್ಕಳಿಲ್ಲದೆ ಹೋದರು. ಎಲ್ಲರ ತರುವಾಯ ಆ ಸ್ತ್ರೀಯೂ ಸತ್ತು ಹೋದಳು.
೨೩ ಹೀಗಿರುವದರಿಂದ ಪುನರುತ್ಥಾನದಲ್ಲಿ ಅವರು ಎದ್ದಾಗ, ಅವಳು ಅವರಲ್ಲಿ ಯಾವನ ಹೆಂಡತಿಯಾಗಿರುವಳು? ಯಾಕಂದರೆ ಏಳು ಮಂದಿಗೂ ಹೆಂಡತಿಯಾಗಿದ್ದಳಲ್ಲ? ಅಂದರು.
೨೪ ಆಗ ಯೇಸು ಪ್ರತ್ಯುತ್ತರವಾಗಿ ಅವರಿಗೆ ಹೇಳಿದ್ದೇನಂದರೆ, ನೀವು ಬರಹಗಳನ್ನೂ ದೇವರ ಬಲವನ್ನೂ ಅರಿ
೨೫ ಯದ ಕಾರಣ ಮೋಸ ಹೋಗುತ್ತೀರಲ್ಲವೇ? ಯಾಕಂದರೆ ಸತ್ತವರೊಳಗಿಂದ ಏಳುವಾಗ, ಅವರು ಮ
೨೬ ದುವೆ ಮಾಡಿ ಕೊಳ್ಳದೆ, ಮದುವೆ ಮಾಡಿ ಕೊಡದೆ, ಪರಲೋಕದಲ್ಲಿರುವ ದೂತರ ಹಾಗಿರುವರು. ಆದರೆ ಸತ್ತವರು ಏಳುತ್ತಾರೆಂಬ ವಿಷಯ ನೀವು ಮೋಶೆಯ ಪುಸ್ತಕದಲ್ಲಿ ಪೊದೆಯ ಸಂಧಿಯಲ್ಲಿ, ದೇವರು ಅವ ನಿಗೆ, ನಾನು ಅಬ್ರಹಾಮನ ದೇವರೂ ಇಸಾಕನ ದೇವರೂ ಯಾಕೋಬನ ದೇವರೂ ಆಗಿದ್ದೇನೆಂದು
೨೭ (ಹೊರ. ೩. ೬.) ಹೇಳಿದ್ದನ್ನು ಓದಲಿಲ್ಲವೋ? ದೇವರು ಸತ್ತವರಿಗಲ್ಲ, ಬದುಕುವವರಿಗೆ ದೇವರಾಗಿದ್ದಾನೆ; ಹೀಗಿರುವದರಿಂದ ನೀವು ಬಹಳವಾಗಿ ಮೋಸ ಹೋಗುತ್ತೀರಿ.
೨೮ ಆಗ [2]ಶಾಸ್ತ್ರಿಗಳಲ್ಲಿ ಒಬ್ಬನು ಹತ್ತರ ಬಂದು, ಅವರು ತರ್ಕ ಮಾಡುವದನ್ನು ಕೇಳಿ, ಅವನು ಅವರಿಗೆ ಚ ನ್ನಾಗಿ ಉತ್ತರ ಕೊಟ್ಟನೆಂದು ತಿಳಿದು ಕೊಂಡು, ಅವನಿಗೆ, ಎಲ್ಲಾ ಕಟ್ಟಳೆಗಳಲ್ಲಿ [3]ಮೊದಲನೇದು ಯಾವ ದೆಂದು ಕೇಳಿದನು.
೨೯ ಯೇಸು ಅವನಿಗೆ ಪ್ರತ್ಯುತ್ತರವಾಗಿ ಹೇಳಿದ್ದು, ಎಲ್ಲಾ ಕಟ್ಟಳೆಗಳಲ್ಲಿ ಮೊದಲನೇದು ಯಾವದಂದರೆ, ಇಸ್ರ
೩೦ ಯೇಲೇ, ಕೇಳು; ನಮ್ಮ ದೇವರಾದ ಕರ್ತನು ಒಬ್ಬನೇ ಕರ್ತನಾಗಿದ್ದಾನೆ; ಮತ್ತು ನಿನ್ನ ದೇವರಾದ ಕರ್ತ

1. ೧೩—೧೭. ವಚನಗಳ ವ್ಯಾಖ್ಯಾನವನ್ನು ಮತ್ತಾ. ೨೨. ೧೫—೨೨. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

2. ಇವನು ಫರಿಸಾಯರ ಗುಂಪಿಗೆ ಶೇರಿದ ಶಾಸ್ತ್ರಿಯು. ಮತ್ತಾ. ೨೨. ೩೪, ೩೫. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

3. ಯೆಹೂದ್ಯರಲ್ಲಿ ನ್ಯಾಯಪ್ರಮಾಣವನ್ನು ಕುರಿತು ಉಂ

ಟಾಗಿದ್ದ ತರ್ಕಗಳಲ್ಲಿ ಇದು ಸಹ ಒಂದು. (ತೀತ. ೩. ೯.) ಕೆಲ ವರು ಸಬ್ಬತ್ತನ್ನು ಕುರಿತ ಕಟ್ಟಳೆ ಮುಖ್ಯವೆಂದೂ, ಕೆಲವರು ಬಲಿ ಗಳನ್ನು ಕುರಿತ ಕಟ್ಟಳೆ ಮುಖ್ಯವೆಂದೂ, ಕೆಲವರು ಆಚರಣೆಗ ಳನ್ನು ಕುರಿತ ಕಟ್ಟಳೆ ಮುಖ್ಯವೆಂದೂ ವಾಗ್ವಾದ ಮಾಡಿದರು. ರಕ್ಷಕನು ಪ್ರೀತಿಯ ಪ್ರಮಾಣವೇ ಮುಖ್ಯವೆಂದು ...



ನನ್ನು ನಿನ್ನ ಪೂರ್ಣ ಹೃದಯದಿಂದಲೂ, ನಿನ್ನ ಪೂರ್ಣ ಪ್ರಾಣದಿಂದಲೂ, [1]ನಿನ್ನ ಪೂರ್ಣ ಬುದ್ಧಿಯಿಂದಲೂ, ನಿನ್ನ ಪೂರ್ಣ ಶಕ್ತಿಯಿಂದಲೂ, ಪ್ರೀತಿ ಮಾಡ ಬೇಕೆಂಬುವದೇ (ದ್ವಿತೀಯ ನ್ಯಾ. ೬. ೪, ೫.) ಮೊದಲನೇ
೩೧ ಕಟ್ಟಳೆಯು. ಮತ್ತು [2]ನಿನ್ನ ನೆರೆಯವನನ್ನು ನಿನ್ನ ಹಾಗೆಯೇ ಪ್ರೀತಿ ಮಾಡ ಬೇಕೆಂಬುವದು (ಲೇವಿಕ. ೧೯. ೧೮.) ಅದಕ್ಕೆ ಸಮಾನವಾಗಿರುವ ಎರಡನೇದು. ಇವುಗಳಿಗಿಂತ ದೊಡ್ಡ ಕಟ್ಟಳೆ ಯಾವದೂ ಇಲ್ಲ.
೩೨ ಆಗ ಶಾಸ್ತ್ರಿಯು ಅವನಿಗೆ ಹೇಳಿದ್ದು, [3]ಒಳ್ಳೇದು, ಬೋಧಕನೇ, ನಿಜವಾಗಿ ಹೇಳಿದ್ದೀ; ಯಾಕಂದರೆ ದೇವ
೩೩ ರು ಒಬ್ಬನೇ, ಅವನಲ್ಲದೆ ಮತ್ತೊಬ್ಬನು ಇಲ್ಲ. ಮತ್ತು ಅವನನ್ನು ಪೂರ್ಣ ಹೃದಯದಿಂದಲೂ, ಪೂರ್ಣ ಬುದ್ಧಿಯಿಂದಲೂ, ಪೂರ್ಣ ಪ್ರಾಣದಿಂದಲೂ, ಪೂರ್ಣ ಶಕ್ತಿಯಿಂದಲೂ ಪ್ರೀತಿ ಮಾಡಿ, ನೆರೆಯವನನ್ನು ತನ್ನ ಹಾಗೆಯೇ ಪ್ರೀತಿ ಮಾಡುವದು, [4]ಎಲ್ಲಾ ಸರ್ವಾಂಗ ದಹನ ಮೊದಲಾದ ಬಲಿಗಳಿಗಿಂತ ಹೆಚ್ಚಾಗಿದೆ.
೩೪ ಆಗ ಯೇಸು, ಅವನು [5]ಬುದ್ಧಿಯಿಂದ ಉತ್ತರ ಕೊಟ್ಟದ್ದನ್ನು ನೋಡಿ, ನೀನು ದೇವರ ರಾಜ್ಯಕ್ಕೆ ದೂರವಾ ದವನಲ್ಲವೆಂದು, ಅವನಿಗೆ ಹೇಳಿದನು.

ಮತ್ತು ಇನ್ನು ಯಾವನಾದರೂ ಅವನನ್ನು ಪ್ರಶ್ನೆ ಕೇಳ ಧೈರ್ಯ ಪಡಲಿಲ್ಲ.

೩೫ ಮತ್ತು ಯೇಸು ಉತ್ತರ ಕೊಟ್ಟು, [6]ದೇವಾಲಯದಲ್ಲಿ ಬೋಧಿಸುತ್ತಾ, ಹೇಳಿದ್ದೇನಂದರೆ, ಕ್ರಿಸ್ತನು ದಾವೀ
೩೬ ದನ ಮಗನೆಂದು ಶಾಸ್ತ್ರಿಗಳು ಹೇಳುವದು ಹ್ಯಾಗೆ? ಯಾಕಂದರೆ ದಾವೀದನು ತಾನೇ, ಕರ್ತನು ನನ್ನ ಕರ್ತನಿಗೆ, ನಾನು ನಿನ್ನ ಶತ್ರುಗಳನ್ನು ನಿನ್ನ ಪಾದಪೀಠವಾಗಿ ಇಡುವ ಮಟ್ಟಿಗೂ, ನನ್ನ ಬಲಪಾರ್ಶ್ವದಲ್ಲಿ
೩೭ ಕೂಡ್ರು ಎಂದು, (ಕೀರ್ತ. ೧೧೦. ೧.) ಹೇಳಿದನೆಂಬದಾಗಿ, ಪರಿಶುದ್ಧಾತ್ಮದಿಂದ ಹೇಳಿದ್ದಾನೆ. ದಾವೀದನು ತಾನೇ ಅವನಿಗೆ ಕರ್ತನೆಂದು ಹೇಳುತ್ತಾನೆ; ಹಾಗಾದರೆ ಅವನ ಮಗನಾಗಿರುವದು ಹ್ಯಾಗೆ?

ಶಾಸ್ತ್ರಿಗಳನ್ನು ಖಂಡಿಸಿದ್ದು; ವಿಧವೆಯ ಕಾಣಿಕೆಯನ್ನು ಹೊಗಳಿದ್ದು.

೩೮ ಇದಲ್ಲದೆ ಸಮೂಹದ ಜನರು ಅವನನ್ನು ಸಂತೋಷವಾಗಿ ಕೇಳಿದರು. ಆಗಲವನು [7]ತನ್ನ ಬೋಧನೆಯಲ್ಲಿ ಅವರಿಗೆ ಹೇಳಿದ್ದೇನಂದರೆ, ಉದ್ದವಾದ ಅಂಗಿಗಳಲ್ಲಿ ತಿರುಗಾಡುವದರ ಮೇಲೆಯೂ, ಅಂಗಡಿ ಬೀದಿಗಳಲ್ಲಿ
೩೯ ವಂದನೆಗಳ ಮೇಲೆಯೂ, ಸಭೆಮನೆಗಳಲ್ಲಿ ಮೊದಲನೇ ಪೀಠಗಳ ಮೇಲೆಯೂ, ಔತಣಗಳಲ್ಲಿ ಮೊದಲನೇ
೪೦ ಪಙ್ತಿಗಳ ಮೇಲೆಯೂ, ಮನಸ್ಸಿಟ್ಟು, [8]ವಿಧವೆಗಳ ಮನೆಗಳನ್ನು ತಿಂದು ಬಿಟ್ಟು, ನೆವಕ್ಕೋಸ್ಕರ ಉದ್ದವಾದ ಪ್ರಾರ್ಥನೆ ಮಾಡುವ ಶಾಸ್ತ್ರಿಗಳಿಗೆ ಎಚ್ಚರಿಕೆಯಾಗಿರ್ರಿ. ಇವರು ಅಧಿಕವಾದ ಆಜ್ಞೆನಿರ್ಣಯ ಹೊಂದುವರು.

1. ಎಲ್ಲಾ ವಸ್ತುಗಳಿಗಿಂತಲೂ ದೇವರನ್ನು ಮುಖ್ಯವಾಗಿಯೂ ಪೂರ್ಣವಾಗಿಯೂ ಪ್ರೀತಿ ಮಾಡ ತಕ್ಕದ್ದು ಅವಶ್ಯ.

2. ನೆರೆಯವನನ್ನು ಪ್ರೀತಿ ಮಾಡುವದು ಹ್ಯಾಗೆಂದು ಒಳ್ಳೇ ಸಮಾರ್ಯನ ಸಾಮ್ಯದಿಂದ ಕರ್ತನು ಹೇಳಿ ತೋರಿಸಿದನು. (ಲೂಕ. ೧೦. ೨೯—೩೭.) ತನ್ನ ಹಾಗೆಯೇ ನೆರೆಯವನನ್ನು ಮನಃಪೂರ್ವಕವಾಗಿ ಪ್ರೀತಿ ಮಾಡ ಬೇಕು. ದೇವರನ್ನೂ ನೆರೆ ಯವನನ್ನೂ ಪ್ರೀತಿ ಮಾಡುವದು ಪ್ರೀತಿಯ ಪ್ರಮಾಣದ ಒಂದೇ ಕಟ್ಟಳೆಯ ಎರಡು ಭಾಗಗಳಾಗಿವೆ.

3. ಶಾಸ್ತ್ರಿಯು ಹೇಳಿದ ಉತ್ತರವು ಈ ಸುವಾರ್ತೆಯಲ್ಲಿ ಮಾತ್ರ ಉಂಟು. ಇದರಿಂದ ಕರ್ತನು ಹೇಳಿದ ಜ್ಞಾನಾಭಿಪ್ರಾಯವು ಅವನಿಗೆ ಪ್ರಕಟವಾಯಿತೆಂದು ತಿಳಿಯ ಬಹುದು.

4. ಎಲ್ಲಾ ಬಲಿಗಳಿಗಿಂತ ಸರ್ವಾಂಗ ದಹನಬಲಿಗೆ ವಿಶೇಷ ಖರ್ಚು ಹಿಡಿಯುವದು. ಯೆಹೂದ್ಯರ ಆಚರಣೆಗಳನ್ನೆಲ್ಲಾ ಸೂ ಚಿಸುವದಕ್ಕೆ ಸರ್ವಾಂಗ ದಹನಬಲಿ ಎಂದು ಹೇಳಿ ಇದೆ.

ವೇದಪ್ರಮಾಣಗಳನ್ನೆಲ್ಲಾ ಅರಿತಿದ್ದ ಆ ಶಾಸ್ತ್ರಿಯು ಅವುಗಳ ಸಾರವನ್ನು ಗ್ರಹಿಸಿದವನಾಗಿ ವಿವೇಕವಾಗಿ ಮಾತಾಡಿದನು. ಅದ ರಿಂದ ಅವನು ದೇವರ ರಾಜ್ಯಕ್ಕೆ ದೂರವಾದವನಲ್ಲದೆ ಇದ್ದನು. ಆದರೆ ದೇವರ ಚಿತ್ತವನ್ನು ತಿಳಿಯುವದು ಸಾಲದು, ಅದರಂತೆ ನಡಿಯುವದು ಅವಶ್ಯ. ನಾವು ಮೋಕ್ಷರಾಜ್ಯಕ್ಕೆ ಸಮೀಪವಾಗಿ ರುವದು ಸಾಲದು, ಅದರೊಳಗೆ ಪ್ರವೇಶಿಸ ಬೇಕು. ಪ್ರವೇಶಿಸದೆ ಇದ್ದರೆ, ಅದಕ್ಕೆ ಸಮೀಪವಾಗಿರುವದರಿಂದ ಏನೂ ಪ್ರಯೋಜ ನವಿಲ್ಲ.

6. ೩೫—೩೭. ವಚನಗಳ ವ್ಯಾಖ್ಯಾನವನ್ನು ಮತ್ತಾ. ೨೨. ೪೧—೪೬. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

7. ಮತ್ತಾ. ೨೩ನೇ ಸಂಧಿಯಲ್ಲಿ ವಿವರವಾಗಿ ಹೇಳಿರುವ ಬೋಧನೆಯನ್ನು ಇದರಲ್ಲಿ ಕ್ಲುಪ್ತವಾಗಿ ತೋರಿಸಿ ಇದೆ.

8. ಫರಿಸಾಯರು ಭಕ್ತಿವಂತರ ಹಾಗೆ ತೋರಿಸಿ, ಆಧಾರವಿ ಲ್ಲದ ವಿಧವೆಗಳನ್ನು ವಂಚಿಸಿ, ಅವರ ಸೊತ್ತುಗಳನ್ನು ಅಪಹರಿ

೪೧ ಮತ್ತು ಯೇಸು ಬೊಕ್ಕಸಕ್ಕೆ ಎದುರಾಗಿ ಕೂತು ಕೊಂಡು, ಜನರು [1]ಬೊಕ್ಕಸದಲ್ಲಿ ಹಣ ಹಾಕುವ ರೀ
೪೨ ತಿಯನ್ನು ನೋಡುವಾಗ, ಅನೇಕ ಐಶ್ವರ್ಯವಂತರು ಬಹಳ ಹಾಕಿದರು. ಆಗ ಒಬ್ಬ ಬಡ ವಿಧವೆ ಒಂದು
೪೩ ದುಗ್ಗಾಣಿಯಾದ [2]ಎರಡು ಕಾಸು ಹಾಕಿದಳು. ಆಗ ತನ್ನ ಶಿಷ್ಯರನ್ನು ಹತ್ತರ ಕರೆದು, ಅವರಿಗೆ ಹೇಳಿದ್ದೇ
ನಂದರೆ, ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಬೊಕ್ಕಸದಲ್ಲಿ ಹಾಕಿದವರೆಲ್ಲರಿಗಿಂತ ಈ ಬಡ ವಿಧವೆ ಹೆಚ್ಚಾಗಿ
೪೪ ಹಾಕಿದ್ಧಾಳೆ; ಯಾಕಂದರೆ ಎಲ್ಲರು ತಮ್ಮ ಹೆಚ್ಚಿಗೆಯಿಂದ ಹಾಕಿದ್ಧಾರೆ; ಆದರೆ ಇವಳು ತನ್ನ ಕೊರತೆ
ಯಿಂದ ತನಗಿದ್ದದ್ದೆಲ್ಲಾ, ತನ್ನ [3]ಜೀವನವೆಲ್ಲಾ, ಹಾಕಿದ್ಧಾಳೆ.

ಯೆರೂಸಲೇಮಿನ ನಾಶನವನ್ನೂ ತನ್ನ ಎರಡನೇ ಬರುವಿಕೆಯನ್ನೂ ಕ್ರಿಸ್ತನು ಮುಂತಿಳಿಸಿ,
ಎಚ್ಚತ್ತಿರ ಬೇಕೆಂದು ಹೇಳಿದ್ದು.

**13.** [4]ಅವನು ದೇವಾಲಯದೊಳಗಿಂದ ಹೊರಡುವಾಗ, ಅವನ ಶಿಷ್ಯರಲ್ಲಿ ಒಬ್ಬನು ಅವನಿಗೆ, ಬೋಧಕನೇ,
೨ ನೋಡು; [5]ಎಂಥಾ ಕಲ್ಲುಗಳೂ, ಎಂಥಾ ಶಿಲ್ಪದ ಕೆಲಸಗಳೂ! ಅಂದನು. ಯೇಸು ಪ್ರತ್ಯುತ್ತರವಾಗಿ ಅವ
ನಿಗೆ, ಈ ದೊಡ್ಡ ಶಿಲ್ಪದ ಕೆಲಸಗಳನ್ನು ನೋಡುತ್ತೀಯೋ? ಕಲ್ಲಿನ ಮೇಲೆ ಕಲ್ಲು ಕೆಡವಲ್ಪಡದೆ ಬಿಡಲ್ಪಡು
ವದಿಲ್ಲ, ಅಂದನು.

೩ ಮತ್ತು ಅವನು ಇಪ್ಪೇ ಗುಡ್ಡದ ಮೇಲೆ, ದೇವಾಲಯಕ್ಕೆ ಎದುರಾಗಿ ಕೂತು ಕೊಂಡಾಗ, ಪೇತ್ರನೂ
೪ ಯಾಕೋಬನೂ ಯೋಹಾನನೂ ಅಂದ್ರೆಯನೂ ಏಕಾಂತವಾಗಿ, ಇವು ಯಾವಾಗ ಆಗುವವೆಂದೂ,
ಇವೆಲ್ಲಾ ಈಡೇರುವ ಕಾಲಕ್ಕೆ ಲಕ್ಷಣವೇನೆಂದೂ, ಅವನನ್ನು ಕೇಳಿದರು.

೫ ಯೇಸು ಅವರಿಗೆ ಪ್ರತ್ಯುತ್ತರವಾಗಿ ಹೇಳಲಾರಂಭಿಸಿದ್ದೇನಂದರೆ, ನಿಮ್ಮನ್ನು ಯಾರೂ ಮೋಸಗೊಳಿಸದ
೬ ಹಾಗೆ ನೋಡಿ ಕೊಳ್ಳಿರಿ. ಯಾಕಂದರೆ ಅನೇಕರು ನನ್ನ ಹೆಸರಿನಲ್ಲಿ ಬಂದು, ನಾನೇ ಕ್ರಿಸ್ತನೆಂದು ಹೇಳಿ,
೭ ಅನೇಕರನ್ನು ಮೋಸಗೊಳಿಸುವರು. ಆದರೆ ನೀವು ಯುದ್ಧಗಳನ್ನೂ ಯುದ್ಧಗಳ ಸುದ್ದಿಗಳನ್ನೂ ಕೇಳುವಾ
೮ ಗ, ಕಳವಳ ಪಡ ಬೇಡಿರಿ; ಯಾಕಂದರೆ ಅವು ಆಗ ಬೇಕು; ಆದರೆ ಅಂತ್ಯವು ಇನ್ನೂ ಇಲ್ಲ. ಹ್ಯಾಗಂದರೆ
ಜನಾಂಗದ ಮೇಲೆ ಜನಾಂಗವೂ, ರಾಜ್ಯದ ಮೇಲೆ ರಾಜ್ಯವೂ, ಏಳುವದು; ಮತ್ತು ಸ್ಥಳ ಸ್ಥಳಗಳಲ್ಲಿ ಭೂ
ಕಂಪಗಳೂ ಬರಗಳೂ ಉಪದ್ರಗಳೂ ಇರುವವು; ಇವೇ ವೇದನೆಗಳ ಆರಂಭವು.

1. ಮತ್ತಾಯನ ಸುವಾರ್ತೆಯಲ್ಲಿ ಇಲ್ಲದ ಈ ಸಂಗತಿಯನ್ನು ಈ ಸುವಾರ್ತೆಯಲ್ಲಿಯೂ ಲೂಕನ ಸುವಾರ್ತೆಯಲ್ಲಿಯೂ ಹೇಳಿ ಇದೆ. ಕಾಣಿಕೆಯ ಪೆಟ್ಟಿಗೆ ದೇವಾಲಯದ ಎರಡನೇ ಪ್ರಾಕಾರದಲ್ಲಿತ್ತು. ಅದರಲ್ಲಿ ಜನರು ಕಾಣಿಕೆ ಹಾಕುವದಕ್ಕೆ ಹದಿಮೂರು ಪೆಟ್ಟಿಗೆಗಳು ಇಡಲ್ಪಟ್ಟಿದ್ದವು. (೨ ಅರ. ೧೨. ೯.)

2. ಇದು ಎಲ್ಲಾದಕ್ಕಿಂತ ಕಡಿಮೆಯಾದ ಕಾಣಿಕೆ. ಇದಕ್ಕಿಂತ ಕಡಿಮೆಯಾಗಿ ಹಾಕ ಕೂಡದು. (ಮತ್ತಾ. ೫. ೨೬. ವಚನದ ವ್ಯಾಖ್ಯಾನದಲ್ಲಿ ನೋಡ ಬೇಕು.)

3. ಐಶ್ವರ್ಯವಂತರು ಅಧಿಕವಾಗಿ ಹಾಕಿದಾಗ್ಯೂ, ಈ ವಿಧವೆ ಹಾಕಿದ್ದೇ ಅಧಿಕವಾದದ್ದೆಂದು ಅನ್ನುತ್ತಾನೆ. ಅವರು ತಮ್ಮ ಸಂಪತ್ತಿನಲ್ಲಿ ಕೆಲವನ್ನು ಮಾತ್ರ ಹಾಕಿದರು. ಅವಳು ತನಗುಂಟಾಗಿದ್ದದ್ದನ್ನೆಲ್ಲಾ ಹಾಕಿದಳು. ಆ ದಿನದ ಭೋಜನಕ್ಕೆ ಆ ಎರಡು ಕಾಸಿಗಿಂತ ಅಧಿಕವಾಗಿ ಅವಳ ಬಳಿಯಲ್ಲಿ ಇರಲಿಲ್ಲ. ಅದರಲ್ಲಿ ಒಂದು ಕಾಸನ್ನಾದರೂ ಮಿಗಿಸಿ ಇಟ್ಟು ಕೊಳ್ಳದೆ ಎರಡು ಕಾಸನ್ನೂ ಹಾಕಿ ಬಿಟ್ಟಳು. "ಮರ ನೆಟ್ಟವನು ನೀರು ಹಾಕನೋ?" ಎಂದು ದೈವಪರಾಮರಿಕೆಯನ್ನು ಅವಳು ಪೂರ್ಣವಾಗಿ ನಂಬಿದ್ದರಿಂದಲೂ, ಆತನ ಪಾದಗಳನ್ನು ಅವಳು ತನ್ನ ಹೃದಯದಲ್ಲಿ ಧರಿಸಿ ಕೊಂಡು ಧ್ಯಾನಿಸಿದ್ದರಿಂದಲೂ, ಹೀಗೆ ಅವಳು ತನ್ನನ್ನು ಬೊಂಕಿ ಧರ್ಮ ಮಾಡಿದಳು. ನಾವು ಮಾಡುವ ಧರ್ಮವನ್ನೂ ಸರ್ವಜ್ಞನಾದ ದೇವರು ಹತ್ತರವಿದ್ದು ನೋಡುತ್ತಾನೆ. ಹೆಚ್ಚಾಗಿ ಕೊಡುವದನ್ನಲ್ಲ, ತನ್ನನ್ನು ಎಣಿಸದೆ ದಾನ ಮಾಡುವ ಸತ್ಕ್ರಿಯೆಯನ್ನು ಹೊಗಳುತ್ತಾನೆ. ಕಡೆಯಾಗಿ ದೇವಾಲಯವನ್ನು ಬಿಟ್ಟು ಹೋಗುವಾಗ ಆ ಬಡ ವಿಧವೆಯನ್ನು ಕುರಿತು ಈ ಆದರಣೆಯ ಮಾತುಗಳನ್ನು ಹೇಳಿದನು.

4. ಈ ಸಂಧಿಯು ಮತ್ತಾಯನ ೨೪ನೇ ಸಂಧಿಗೆ ಸಮವಾಗಿರುವದರಿಂದ ಅದರ ವ್ಯಾಖ್ಯಾನ ನೋಡ ಬೇಕು. ೩೪—೩೭. ವರಿಗೂ ಮತ್ತಾಯ. ೨೪. ೪೩—೫೧; ೨೫. ಸಂಧಿಗಳಲ್ಲಿ ಅಡಕವಾಗಿರುವ ಸತ್ಯ ಬೋಧನೆಗಳ ಸಾರವಾಗಿದೆ. (ಮತ್ತಾ. ೨೪. ೧. ವಚನದ ವ್ಯಾಖ್ಯಾನದಲ್ಲಿ ನೋಡ ಬೇಕು.)

5. ಯೆರೂಸಲೇಮಿನ ದೇವಾಲಯದ ಗೋಡೆಯಲ್ಲಿದ್ದ ಕಲ್ಲುಗಳು ಬಿಳೀ ಕಲ್ಲುಗಳಾಗಿಯೂ, ೪೦, ೪೫ ಮೊಳ ಉದ್ದವಾಗಿಯೂ ಇದ್ದವು.



೯ ಆದರೆ ನಿಮಗೆ ನೀವೇ ನೋಡಿ ಕೊಳ್ಳಿರಿ; ಯಾಕಂದರೆ ನಿಮ್ಮನ್ನು ಮಂತ್ರಿಸಭೆಗಳಿಗೂ, ಸಭೆಮನೆಗಳಿಗೂ,
ಒಪ್ಪಿಸುವರು. [1]ನೀವು ಹೊಡೆಯಲ್ಪಟ್ಟು, ನನ್ನ ನಿಮಿತ್ತ ಅವರಿಗೆ ಸಾಕ್ಷಿಯಾಗಿ ಅಧಿಪತಿಗಳ ಮುಂದೆಯೂ,
೧೦ ಅರಸರ ಮುಂದೆಯೂ, ನಿಲ್ಲಿಸಲ್ಪಡುವಿರಿ. ಮತ್ತು ಜನಾಂಗಗಳಿಗೆಲ್ಲಾ ಮೊದಲಾಗಿ ಸುವಾರ್ತೆಯು ಸಾರ
೧೧ ಲ್ಪಡ ಬೇಕು. ಆದರೆ ಅವರು ನಿಮ್ಮನ್ನು ತಕ್ಕೊಂಡು ಹೋಗಿ ಒಪ್ಪಿಸುವಾಗ, ನೀವು, ಏನು ಮಾತಾಡ ಬೇ
ಕೆಂದು ಮುಂಚೆ ಚಿಂತಿಸಿ; ಆಲೋಚನೆ ಮಾಡ ಬೇಡಿರಿ; ಆದರೆ ಆ ತಾಸಿನಲ್ಲಿ ನಿಮಗೆ ಯಾವದು ಕೊಡಲ್ಪ
ಡುತ್ತದೆಯೋ, ಅದನ್ನು ಮಾತಾಡಿರಿ; ಯಾಕಂದರೆ ಮಾತಾಡುವವರು ನೀವಲ್ಲ, [2]ಪರಿಶುದ್ಧಾತ್ಮವೇ.
೧೨ ಇದಲ್ಲದೆ ಸಹೋದರನು ಸಹೋದರನನ್ನು, ತಂದೆಯು ಮಗನನ್ನು, ಮರಣಕ್ಕೆ ಒಪ್ಪಿಸುವನು; ಮತ್ತು ಮ
೧೩ ಕ್ಕಳು ಹೆತ್ತವರಿಗೆ ವಿರೋಧವಾಗಿ ಎದ್ದು, ಅವರನ್ನು ಮರಣಕ್ಕೆ ಒಪ್ಪಿಸುವರು. ಮತ್ತು ನನ್ನ ಹೆಸರಿನ
ನಿಮಿತ್ತ ಎಲ್ಲರಿಂದ ಹಗೆ ಮಾಡಲ್ಪಡುವಿರಿ; ಆದರೆ ಅಂತ್ಯದ ಪರ್ಯಂತರ ತಾಳಿ ಕೊಳ್ಳುವವನ್ಯಾವನೋ,
ಅವನೇ ರಕ್ಷಿಸಲ್ಪಡುವನು.
೧೪ ಇದಲ್ಲದೆ ಪ್ರವಾದಿಯಾದ ದಾನಿಯೇಲನು ಹೇಳಿದ ಹಾಳು ಮಾಡುವ ಅಸಹ್ಯವು ಇರ ಬಾರದ ಸ್ಥಳದಲ್ಲಿ
ನಿಂತಿರುವದನ್ನು ನೀವು ನೋಡಲು—ಓದುವವನು ತಿಳುಕೊಳ್ಳಲಿ—ಆಗ ಯೆಹೂದದಲ್ಲಿರುವವರು ಬೆಟ್ಟಗಳಿಗೆ
೧೫ ಓಡಿ ಹೋಗಲಿ. ಮನೆಯ ಮೇಲಿರುವವನು ಮನೆಗೆ ಇಳಿದು ಹೋಗದೆ, ತನ್ನ ಮನೆಯೊಳಗಿಂದ ಏನಾ
೧೬ ದರೂ ತೆಗೆದು ಕೊಂಡು ಹೋಗುವದಕ್ಕೆ ಒಳಗೆ ಹೋಗದೆ, ಇರಲಿ; ಮತ್ತು ಹೊಲದಲ್ಲಿರುವವನು ತನ್ನ
ಅಂಗಿಯನ್ನು ತೆಗೆದು ಕೊಳ್ಳುವದಕ್ಕೆ ಹಿಂದಕ್ಕೆ ತಿರುಗದಿರಲಿ.
೧೭,೧೮ ಆದರೆ ಆ ದಿವಸಗಳಲ್ಲಿ ಗರ್ಭಿಣಿಗಳಿಗೂ ಮೊಲೆ ಕೊಡುವವರಿಗೂ ಅಯ್ಯೋ! ಇದಲ್ಲದೆ ನಿಮ್ಮ ಪಲಾ
೧೯ ಯನವು ಹಿಮಕಾಲದಲ್ಲಿ ಆಗದ ಹಾಗೆ, ಪ್ರಾರ್ಥನೆ ಮಾಡಿರಿ; ಯಾಕಂದರೆ ಆ ದಿವಸಗಳು, ದೇವರು ಸೃಷ್ಟಿ
ಸಿದ ಸೃಷ್ಟಿಯಾರಭ್ಯ ಇಂದಿನ ವರಿಗೂ ಉಂಟಾಗದಂಥ, ಮತ್ತು ಉಂಟಾಗುವದಕ್ಕೆ ಇರದಂಥ, ಉಪದ್ರ
೨೦ ವಾಗಿರುವವು; ಮತ್ತು ಕರ್ತನು ಆ ದಿವಸಗಳನ್ನು ಅಡಕ ಮಾಡದೆ ಇದ್ದರೆ, ಯಾವ ಮಾಂಸವಾದರೂ
ರಕ್ಷಿಸಲ್ಪಡದು; ಆದರೆ ತಾನು ಆದು ಕೊಂಡ ಆಯಲ್ಪಟ್ಟವರಿಗೋಸ್ಕರ ಆ ದಿವಸಗಳನ್ನು ಅಡಕ ಮಾಡಿದ್ಧಾನೆ.
೨೧ ಮತ್ತು ಆವಾಗ, ಇಗೋ, ಇಲ್ಲಿ ಕ್ರಿಸ್ತನು! ಇಲ್ಲವೆ, ಅಗೋ, ಅಲ್ಲಿ! ಎಂದು ಯಾರಾದರೂ ನಿಮಗೆ ಹೇ
೨೨ ಳಿದರೆ, ನಂಬ ಬೇಡಿರಿ; ಯಾಕಂದರೆ ಸುಳ್ಳು ಕ್ರಿಸ್ತರೂ ಸುಳ್ಳು ಪ್ರವಾದಿಗಳೂ ಎದ್ದು, ಅದು ಸಾಧ್ಯವಾ
ದರೆ ಆಯಲ್ಪಟ್ಟವರನ್ನು ಸಹ ಮೋಸಗೊಳಿಸುವ ಹಾಗೆ, ಗುರುತುಗಳನ್ನೂ ಅದ್ಭುತಗಳನ್ನೂ ತೋರಿಸುವರು.
೨೩ ಆದರೆ ನೀವು ನೋಡಿ ಕೊಳ್ಳಿರಿ! ಇಗೋ, ನಿಮಗೆ ಎಲ್ಲವುಗಳನ್ನು ಮುಂಚೆ ಹೇಳಿದ್ದೇನೆ.
೨೪ ಇದಲ್ಲದೆ ಆ ದಿವಸಗಳಲ್ಲಿ ಆ ಉಪದ್ರವಾದ ಮೇಲೆ ಸೂರ್ಯನು ಕತ್ತಲಾಗುವನು; ಚಂದ್ರನು ತನ್ನ ಪ್ರಕಾ
೨೫ ಶವನ್ನು ಕೊಡನು; ಮತ್ತು ಆಕಾಶದ ನಕ್ಷತ್ರಗಳು ಬೀಳುವವು; ಮತ್ತು ಆಕಾಶಗಳಲ್ಲಿರುವ ಬಲಗಳು
೨೬ ಕದಲುವವು. ಆಗ ಮನುಷ್ಯನ ಮಗನು ಮೇಘಗಳಲ್ಲಿ ಬಹಳ ಬಲ ಮಹಿಮೆಗಳ ಸಂಗಡ ಬರುವದನ್ನು
೨೭ ನೋಡುವರು. ಆಗಲವನು ತನ್ನ ದೂತರನ್ನು ಕಳುಹಿಸಿ, ತಾನು ಆದು ಕೊಂಡವರನ್ನು ಭೂಮಿಯ ಕೊ
ನೆಯಿಂದ ಆಕಾಶದ ಕೊನೆಯ ಪರ್ಯಂತರ ನಾಲ್ಕು ದಿಕ್ಕುಗಳೊಳಗಿಂದ ಕೂಡಿಸುವನು.
೨೮ ಇದಲ್ಲದೆ ಅಂಜೂರದ ಮರದಿಂದ ಸಾಮ್ಯವನ್ನು ಕಲಿತು ಕೊಳ್ಳಿರಿ; ಅದರ ಕೊಂಬೆಯು ಈಗಲೇ ಹಸೀ
೨೯ ದಾಗಿ ಎಲೆಗಳು ಚಿಗುರಿದರೆ, ಬಿಸಲುಕಾಲವು ಸಮೀಪವೆಂದು ತಿಳುಕೊಳ್ಳುತ್ತೀರಿ. ಅದೇ ಪ್ರಕಾರ ಇವು
೩೦ ಗಳು ಆಗುವದನ್ನು ನೀವು ನೋಡಿದರೆ, ಅದು ಬಾಗಲಿನ ಸಮೀಪವೆಂದು ತಿಳುಕೊಳ್ಳಿರಿ. ನಿಶ್ಚಯವಾಗಿ
೩೧ ನಿಮಗೆ ಹೇಳುತ್ತೇನೆ, ಇವುಗಳೆಲ್ಲಾ ಆಗುವ ಮಟ್ಟಿಗೂ ಈ ಸಂತತಿಯು ಗತಿಸಿ ಹೋಗದು. ಆಕಾಶವೂ
ಭೂಮಿಯೂ ಗತಿಸಿ ಹೋಗುವವು; ಆದರೆ ನನ್ನ ವಾಕ್ಯಗಳು ಗತಿಸಿ ಹೋಗವು.

1. ಸಭೆಮನೆಗಳಿಗೆ ತೆಗೆದು ಕೊಂಡು ಹೋಗಿ ಹೊಡೆಯಲ್ಪಡುವಿರಿ ಎಂಬುವ ಅರ್ಥವು. ಸಭೆಮನೆಯ ಯಜಮಾನರಿಗೆ ಅಪರಾಧಿಗಳನ್ನು ಹೊಡೆದು ದಂಡಿಸುವ ಅಧಿಕಾರವಿತ್ತು.

2. ಮತ್ತಾ. ೧೦. ೧೯—೨೦. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

ಕ್ರಿಸ್ತನು ಪಸ್ಕವನ್ನು ಆಚರಿಸಿದ್ದು; ಯೂದನನ್ನು ತೋರಿಸಿದ್ದು; ರಾತ್ರಿಭೋಜನವನ್ನು ಸ್ಥಾಪಿಸಿದ್ದು.
ಶಿಷ್ಯರು ಓಡಿ ಹೋಗುವದನ್ನೂ ಪೇತ್ರನು ಬೊಂಕುವದನ್ನೂ ಮುಂತಿಳಿಸಿದ್ದು.

೧೨ ಇದಲ್ಲದೆ ಅವರು [1]ಪಸ್ಕವನ್ನು ಅರ್ಪಿಸುವ ದಿನವಾದ ಹುಳಿಯಿಲ್ಲದ ರೊಟ್ಟಿಗಳ ಮೊದಲನೇ ದಿವಸದಲ್ಲಿ, ಅವನ ಶಿಷ್ಯರು ಅವನಿಗೆ, ನೀನು ಪಸ್ಕವನ್ನು ಉಣ್ಣುವ ಹಾಗೆ ನಾವು ಎಲ್ಲಿಗೆ ಹೋಗಿ ಸಿದ್ಧ ಮಾಡ ಬೇಕೆಂದು ಹೇಳಿದಾಗ,

೧೩ ಅವನು ತನ್ನ ಶಿಷ್ಯರಲ್ಲಿ ಇಬ್ಬರನ್ನು ಕಳುಹಿಸಿ, ಅವರಿಗೆ ಹೇಳಿದ್ದೇನಂದರೆ, ಪಟ್ಣಕ್ಕೆ ಹೋಗಿರಿ; ಅಲ್ಲಿ ನೀರಿನ
೧೪ ಗಡಿಗೆಯನ್ನು ಹೊರುವ ಮನುಷ್ಯನು ನಿಮಗೆದುರಾಗಿ ಬರುವನು; ಅವನನ್ನು ಹಿಂಬಾಲಿಸಿರಿ; ಮತ್ತು ಅವನು ಪ್ರವೇಶಿಸುವ ಮನೆಯ ಯಜಮಾನನಿಗೆ, ಬೋಧಕನು, ನಾನು ನನ್ನ ಶಿಷ್ಯರ ಸಂಗಡ ಪಸ್ಕವನ್ನು ಉಣ್ಣ
೧೫ ತಕ್ಕ ಸಾಲೆ ಎಲ್ಲಿ? ಎಂದು ಹೇಳುತ್ತಾನೆಂಬದಾಗಿ ಹೇಳಿರಿ. ಅವನು ನಿಮಗೆ ಸಾಮಗ್ರಿ ಇರುವ ಸಿದ್ಧವಾದ ದೊಡ್ಡ ಮೇಲ್ಮಾಳಿಗೆಯನ್ನು ತೋರಿಸುವನು; ಅಲ್ಲಿ ನಮಗೆ ಸಿದ್ಧ ಮಾಡಿರಿ.

೧೬ ಆಗಲವನ ಶಿಷ್ಯರು ಹೊರಟು, ಪಟ್ಣಕ್ಕೆ ಹೋಗಿ, ಅವನು ತಮಗೆ ಹೇಳಿದ ಹಾಗೆ ಕಂಡು, ಪಸ್ಕವನ್ನು ಸಿದ್ಧ ಮಾಡಿದರು.

೧೭, ೧೮ ಮತ್ತು ಸಾಯಂಕಾಲವಾದಾಗ, ಅವನು ಹನ್ನೆರಡು ಮಂದಿಯ ಸಂಗಡ ಬಂದನು. [2]ಅವರು ಕೂತು ಕೊಂಡು ಉಣ್ಣುವಾಗ, ಯೇಸು ಹೇಳಿದ್ದೇನಂದರೆ, ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ನಿಮ್ಮಲ್ಲಿ ಒಬ್ಬನು,
೧೯ ನನ್ನ ಸಂಗಡ ಉಣ್ಣುವವನು, ನನ್ನನ್ನು ಒಪ್ಪಿಸಿ ಕೊಡುವನು. ಅವರು ದುಃಖ ಪಟ್ಟು, ಒಬ್ಬನು, ನಾನೋ?
೨೦ ಬೇರೊಬ್ಬನು, ನಾನೋ? ಎಂದು ಒಬ್ಬೊಬ್ಬನಾಗಿ ಅವನಿಗೆ ಹೇಳಲಾರಂಭಿಸಿದರು. ಅವನು ಉತ್ತರ ಕೊಟ್ಟು
೨೧ ಅವರಿಗೆ ಹೇಳಿದ್ದೇನಂದರೆ, ಹನ್ನೆರಡು ಮಂದಿಯೊಳಗೆ ನನ್ನ ಸಂಗಡ ಪಾತ್ರೆಯಲ್ಲಿ ಅದ್ದುವ ಒಬ್ಬನೇ. ಮನುಷ್ಯನ ಮಗನು, ಅವನನ್ನು ಕುರಿತು ಬರೆದಿರುವ ಪ್ರಕಾರ, ಹೋಗಿ ಬಿಡುತ್ತಾನೆ; ಆದರೆ ಯಾವನ ಮೂಲವಾಗಿ ಮನುಷ್ಯನ ಮಗನು ಒಪ್ಪಿಸಲ್ಪಡುತ್ತಾನೋ, ಆ ಮನುಷ್ಯನಿಗೆ ಅಯ್ಯೋ! ಆ ಮನುಷ್ಯನು ಹುಟ್ಟದೆ ಇದ್ದರೆ, ಅವನಿಗೆ ವಾಸಿ.

೨೨ [3]ಅವರು ಉಣ್ಣುವಾಗ, ಯೇಸು ರೊಟ್ಟಿಯನ್ನು ತೆಗೆದು ಕೊಂಡು, ಸ್ತೋತ್ರ ಮಾಡಿ, ಮುರಿದು, ಅವರಿಗೆ
೨೩ ಕೊಟ್ಟು, ತಕ್ಕೊಳ್ಳಿರಿ, ತಿನ್ನಿರಿ, ಇದು ನನ್ನ ಶರೀರವಾಗಿದೆ, ಅಂದನು. ಆ ಮೇಲೆ ಪಾತ್ರೆಯನ್ನು ತೆಗೆದು
೨೪ ಕೊಂಡು, ಸ್ತೋತ್ರ ಮಾಡಿ, ಅವರಿಗೆ ಕೊಟ್ಟನು. ಅವರೆಲ್ಲರು ಅದರಲ್ಲಿ ಕುಡಿದರು. ಮತ್ತು ಅವರಿಗೆ ಹೇ
೨೫ ಳಿದ್ದು, ಇದು ಅನೇಕರಿಗೋಸ್ಕರ ಚೆಲ್ಲಲ್ಪಟ್ಟ, ಹೊಸ ಒಡಂಬಡಿಕೆಯ ನನ್ನ ರಕ್ತವಾಗಿದೆ. ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ನಾನು ದೇವರ ರಾಜ್ಯದಲ್ಲಿ ಅದನ್ನು ಹೊಸದಾಗಿ ಕುಡಿಯುವ ಆ ದಿನದ ವರಿಗೂ ದ್ರಾಕ್ಷೇ ರಸವನ್ನು ಇನ್ನು ಕುಡಿಯೆನು.

೨೬, ೨೭ ತರುವಾಯ ಅವರು ಕೀರ್ತನೆ ಹಾಡಿ, ಇಪ್ಪೇ ಗುಡ್ಡಕ್ಕೆ ಹೊರಟರು. ಮತ್ತು ಯೇಸು ಅವರಿಗೆ ಹೇಳಿದ್ದು, ನೀವೆಲ್ಲರು ಈ ರಾತ್ರಿ ನನ್ನಲ್ಲಿ ಆಟಂಕ ಪಡುವಿರಿ; ಯಾಕಂದರೆ ಕುರುಬನನ್ನು ಹೊಡೆಯುವೆನು, ಕು
೨೮ ರಿಗಳು ಚದರಿ ಹೋಗುವವೆಂದು, (ಜೆಕ. ೧೩. ೭.) ಬರೆದದೆ. ಆದರೆ ನಾನು ಎದ್ದ ಮೇಲೆ, ನಿಮ್ಮ ಮುಂದಾಗಿ ಗಲಿಲಾಯಕ್ಕೆ ಹೋಗುವೆನು.

೨೯, ೩೦ ಆದರೆ ಪೇತ್ರನು ಅವನಿಗೆ, ಎಲ್ಲರು ಆಟಂಕ ಪಟ್ಟರೂ, ನಾನಿಲ್ಲ, ಅಂದಾಗ; ಯೇಸು ಅವನಿಗೆ, ನಿಶ್ಚಯವಾಗಿ ನಿನಗೆ ಹೇಳುತ್ತೇನೆ, [4]ಈ ಹೊತ್ತು, ಈ ರಾತ್ರಿಯಲ್ಲಿ ಕೋಳಿ [5]ಎರಡು ಸಾರಿ ಕೂಗುವದಕ್ಕಿಂತ

1. ೧೨—೧೬. ವಚನಗಳ ವ್ಯಾಖ್ಯಾನವನ್ನು ಲೂಕ. ೨೨. ೭—೩೦. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

2. ೧೮—೨೬. ವಚನಗಳ ವ್ಯಾಖ್ಯಾನವನ್ನು ಮತ್ತಾ. ೨೬. ೨೧—೨೫. ಯೋಹಾ. ೧೩. ೨೧—೩೦. ವಚನಗಳ ವ್ಯಾಖ್ಯಾನಗಳಲ್ಲಿ ನೋಡ ಬೇಕು.

3. ೨೨—೨೫. ವಚನಗಳ ವ್ಯಾಖ್ಯಾನವನ್ನು ಮತ್ತಾ. ೨೬. ೨೬—೨೯. ವಚನಗಳ ವ್ಯಾಖ್ಯಾನದಲಿ ನೋಡ ಬೇಕು.

4. ಆತನು "ಈ ಹೊತ್ತು" ಅಂದದ್ದು ಇದೇ ದಿನದ ರಾತ್ರಿ ಎಂಬುವ ಅಭಿಪ್ರಾಯವು.

5. ಕರ್ತನ ಮಾತುಗಳನ್ನೂ ಪೇತ್ರನು ಬೊಂಕಿದ್ದನ್ನೂ ಮಾರ್ಕನು ವಿಶೇಷವಾಗಿ ಹೇಳುತ್ತಾನೆ. ಕೋಳಿ ಎರಡು ಸಾರಿ ಕೂಗುವದನ್ನು ಕುರಿತು ಬರೆದಿದ್ದಾನೆ. ಕೋಳಿ, ಅಕ್ರಮವಾಗಿ ಅರ್ಧ ರಾತ್ರಿಯಲ್ಲಿಯೂ, ಕ್ರಮವಾಗಿ ಮೂರನೇ ಝಾವದಲ್ಲಿಯೂ ಬೆಳಗಾಗುವದಕ್ಕಿಂತ ಮುಂಚೆಯೂ ಕೂಗುವದುಂಟು. ಬೇರೆ



೩೧ ಮುಂಚೆ, ಮೂರು ಸಾರಿ ನನ್ನನ್ನು ಕುರಿತು ಬೊಂಕುವಿ, ಅಂದನು. ಆದರೆ ಅವನು ಬಹು ಹೆಚ್ಚಾಗಿ, ನಾನು ನಿನ್ನ ಸಂಗಡ ಸಾಯ ಬೇಕಾದರೂ, ಹ್ಯಾಗೂ ನಿನ್ನನ್ನು ಕುರಿತು ಬೊಂಕೆನು, ಅಂದನು. ಅದೇ ಪ್ರಕಾರ ಎಲ್ಲರು ಹೇಳಿದರು.

ಗೆತ್ಸೇಮನೆಯಲ್ಲಿ ಕ್ರಿಸ್ತನು ವ್ಯಾಕುಲ ಪಟ್ಟದ್ದು; ಶತ್ರುಗಳಿಂದ ಹಿಡಿಯಲ್ಪಟ್ಟದ್ದು.

೩೨ [1]ತರುವಾಯ ಅವರು ಗೆತ್ಸೇಮನೆ ಎಂಬ ಸ್ಥಳಕ್ಕೆ ಬಂದಾಗ, ಅವನು ತನ್ನ ಶಿಷ್ಯರಿಗೆ ನಾನು ಪ್ರಾರ್ಥನೆ ಮಾಡುವ ತನಕ ಇಲ್ಲಿ ಕೂತು ಕೊಳ್ಳಿರಿ, ಎಂದು ಹೇಳಿ,

೩೩ ಪೇತ್ರನನ್ನೂ ಯಾಕೋಬನನ್ನೂ ಯೋಹಾನನನ್ನೂ ಕರಕೊಂಡು, ಭಯಭ್ರಾಂತನಾಗಲೂ ವ್ಯಸನ ಪಡ
೩೪ ಲೂ ಆರಂಭಿಸಿ, ನನ್ನ ಪ್ರಾಣವು ಮರಣದ ವರಿಗೂ ದುಃಖಾಕ್ರಾಂತವಾಗಿದೆ; ಇಲ್ಲಿ ಇದ್ದು ಎಚ್ಚರಿಕೆಯಾಗಿರ್ರಿ, ಅಂದನು.

೩೫ ಆಗ ಸ್ವಲ್ಪ ದೂರ ಹೋಗಿ, ನೆಲದಲ್ಲಿ ಬಿದ್ದು, ಸಾಧ್ಯವಾಗಿದ್ದರೆ, ಆ ಘಳಿಗೆಯು ತನ್ನನ್ನು ಬಿಟ್ಟು ಹೋಗ
೩೬ ಬೇಕೆಂದು ಪ್ರಾರ್ಥಿಸಿ, [2]ಅಪ್ಪಾ, ತಂದೆಯೇ, ನಿನಗೆ ಎಲ್ಲಾ ಸಾಧ್ಯವಾಗಿದೆ; ಈ ಪಾತ್ರೆಯನ್ನು ನನ್ನಿಂದ
೩೭ ತೊಲಗಿಸು; ಆದಾಗ್ಯೂ ನನ್ನ ಚಿತ್ತವಲ್ಲ, ನಿನ್ನದೇ ಆಗಲಿ, ಅಂದನು. ತರುವಾಯ ಬಂದು, ಅವರು ನಿದ್ದೆ ಮಾಡುವದನ್ನು ಕಂಡು, ಪೇತ್ರನಿಗೆ, ಸೀಮೋನನೇ, ನಿದ್ದೆ ಮಾಡುತ್ತೀಯೋ? ಒಂದು ತಾಸಾದರೂ ಎಚ್ಚರಿಕೆ
೩೮ ಯಾಗಿರಲಾರಿಯಾ? ನೀವು ಶೋಧನೆಯಲ್ಲಿ ಪ್ರವೇಶಿಸದ ಹಾಗೆ ಎಚ್ಚರಿಕೆಯಾಗಿದ್ದು, ಪ್ರಾರ್ಥನೆ ಮಾಡಿರಿ; ಆತ್ಮವು ಸಿದ್ಧವಾಗಿದೆ, ಆದರೆ ಮಾಂಸವು ಬಲಹೀನವಾಗಿದೆ, ಅಂದನು.

೩೯, ೪೦ ಮತ್ತು ತಿರಿಗಿ ಹೋಗಿ, ಅದೇ ಮಾತನ್ನು ಹೇಳುತ್ತಾ ಪ್ರಾರ್ಥಿಸಿದನು. ಮತ್ತು ತಿರುಗಿ ಕೊಂಡು, ಅವರು ನಿದ್ದೆ ಮಾಡುವದನ್ನು ಕಂಡನು; ಯಾಕಂದರೆ ಅವರ ಕಣ್ಣುಗಳು ಭಾರವಾಗಿದ್ದವು; ಮತ್ತು ಅವನಿಗೆ ಏನು ಉತ್ತರ ಕೊಡ ಬೇಕೆಂದು, ತಿಳಿಯದೆ ಇದ್ದರು.

೪೧ ಮತ್ತು ಮೂರನೇ ಸಾರಿ ಬಂದು, ಅವರಿಗೆ ಹೇಳಿದ್ದೇನಂದರೆ, ಇನ್ನು ನಿದ್ದೆ ಮಾಡಿ ವಿಶ್ರಮಿಸಿ ಕೊಳ್ಳಿರಿ; ಸಾಕಾಯಿತು; ಘಳಿಗೆ ಬಂತು; ಇಗೋ, ಮನುಷ್ಯನ ಮಗನು ಪಾಪಿಷ್ಠರ ಕೈಗಳಿಗೆ ಒಪ್ಪಿಸಲ್ಪಡುತ್ತಾನೆ.
೪೨ ಏಳಿರಿ, ಹೋಗುವ; ಇಗೋ, ನನ್ನನ್ನು ಒಪ್ಪಿಸುವವನು ಸಮೀಪಕ್ಕೆ ಬಂದಿದ್ದಾನೆ.
೪೩ ಅವನು ಇನ್ನು ಮಾತಾಡುತ್ತಿರುವಾಗ, ಸಂಗಡಲೇ ಹನ್ನೆರಡು ಮಂದಿಯಲ್ಲಿ ಒಬ್ಬನಾದ ಯೂದನೂ, ಅವನ ಸಂಗಡ ಕತ್ತಿಗಳನ್ನೂ ದೊಣ್ಣೆಗಳನ್ನೂ ಹಿಡಿದ ದೊಡ್ಡ ಸಮೂಹವೂ, ಪ್ರಧಾನ ಯಾಜಕರ ಶಾಸ್ತ್ರಿಗಳ
೪೪ ಹಿರಿಯರ ಕಡೆಯಿಂದ ಬಂದರು. ಆದರೆ ಅವನನ್ನು ಒಪ್ಪಿಸುವವನು, ನಾನು ಯಾವನಿಗೆ ಮುದ್ದಿಡುತ್ತೇನೋ, ಅವನೇ; ಅವನನ್ನು ಹಿಡುಕೊಂಡು, ಭದ್ರ ಮಾಡಿ, ತಕ್ಕೊಂಡು ಹೋಗಿರಿ, ಎಂದು ಅವರಿಗೆ ಗುರು
೪೫ ತು ಹೇಳಿ ಕೊಟ್ಟಿದ್ದನು. ಮತ್ತು ಅವನು ಬಂದ ಕೂಡಲೆ, ಅವನ ಹತ್ತರ ಹೋಗಿ, ರಬ್ಬಿಯೇ, ರಬ್ಬಿಯೇ,
೪೬ ಎಂದು ಹೇಳಿ, ಅವನಿಗೆ ಮುದ್ದಿಟ್ಟನು. ಆಗಲವರು ಅವನ ಮೇಲೆ ಕೈ ಹಾಕಿ, ಅವನನ್ನು ಹಿಡಿದರು.
೪೭ ಇದಲ್ಲದೆ ಹತ್ತರ ನಿಂತವರಲ್ಲಿ ಒಬ್ಬನು, ತನ್ನ ಕತ್ತಿಯನ್ನು ಹಿಡಿದು, ಪ್ರಧಾನ ಯಾಜಕನ ದಾಸನನ್ನು ಹೊಡದು, ಅವನ ಕಿವಿಯನ್ನು ಹರಿಯ ಕಡಿದನು.

೪೮ ಆಗ ಯೇಸು ಪ್ರತ್ಯುತ್ತರವಾಗಿ ಅವರಿಗೆ ಹೇಳಿದ್ದು, ಕಳ್ಳನ ಹಾಗೆ ನನ್ನನ್ನು ಕತ್ತಿಗಳಿಂದಲೂ ದೊಣ್ಣೆಗಳಿಂದ
೪೯ ಲೂ ಹಿಡಿಯ ಹೊರಟಿರೋ? ದಿನಾಲು ನಿಮ್ಮ ಬಳಿಯ ದೇವಾಲಯದಲ್ಲಿ ಬೋಧಿಸುತ್ತಾ ಇದ್ದೆನು; ನೀವು ನನ್ನನ್ನು ಹಿಡಿಯಲಿಲ್ಲ. ಆದರೆ ಬರಹಗಳು ಈಡೇರುವ ಹಾಗೆಯೇ ಆಗುತ್ತದೆ.

ಸುವಾರ್ತೆಗಳಲ್ಲಿ ಕೋಳಿ ಕೂಗುವದನ್ನು ಕುರಿತು ಸಾಧಾರಣವಾಗಿ ಹೇಳಿರುವದು ಎರಡನೇ ಸಾರಿ ಕೂಗುವದನ್ನು ಕುರಿತು ಹೇಳಲ್ಪಟ್ಟದೆ. ಆದದರಿಂದ ರಾತ್ರಿ ಮೂರು ಘಂಟೆಯ ತರುವಾಯ ಮೂರನೇ ಝಾವಕ್ಕೆ ಕೋಳಿ ಕೂಗುವ ಹೊತ್ತೆಂದು ಹೇಳುವರು. (ಮಾರ್ಕ. ೧೩. ೩೫.) ಬೇರೆ ಸುವಾರ್ತೆಗಳಲ್ಲಿ ಸಾಧಾರಣವಾಗಿ ಹೇಳಿದನು ಈ ಸುವಾರ್ತೆಯಲ್ಲಿ ವಿವರವಾಗಿ ಹೇಳಿ ಇದೆ.

1. ೩೨—೫೦. ವಚನಗಳ ವ್ಯಾಖ್ಯಾನವನ್ನು ಮತ್ತಾ. ೨೬. ೩೬—೫೬. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

2. ಮಾರ್ಕನು ಬೇರೆ ಕೆಲವು ವಾಕ್ಯಗಳಲ್ಲಿ ಹೇಳಿದ ಪ್ರಕಾರ ಈ ವಚನದಲ್ಲಿಯೂ, "ಅಬ್ಬಾ" ಎಂಬ ಅರಮೆಯ ಭಾಷೆಯ ಶಬ್ದ

೫೦, ೫೧ ಆಗ ಎಲ್ಲರೂ ಅವನನ್ನು ಬಿಟ್ಟು, ಓಡಿ ಹೋದರು. ಮತ್ತು ಒಬ್ಬ [1]ಯೌವನಸ್ಥನು ಬರೀ ಮೈಗೆ ನಾರು
ಮಡಿ ಸುತ್ತಿ ಕೊಂಡವನಾಗಿ ಅವನನ್ನು ಹಿಂಬಾಲಿಸುವಾಗ, ಆ ಯೌವನಸ್ಥರು ಅವನನ್ನು ಹಿಡಿದರು.
೫೨ ಆದರೆ ಅವನು ನಾರುಮಡಿಯನ್ನು ಬಿಟ್ಟು ಬಿಟ್ಟು, [2]ಬೆತ್ತಲೆಯಾಗಿ ಅವರ ಕೈಯೊಳಗಿಂದ ತಪ್ಪಿಸಿ ಕೊಂಡು,
ಓಡಿ ಹೋದನು.

ಕ್ರಿಸ್ತನು ಪ್ರಧಾನ ಯಾಜಕನ ಮುಂದೆಯೂ, ಸನೇದ್ರಿಮ್ ಸಂಘದವರ ಮುಂದೆಯೂ ವಿಚಾರಿಸಲ್ಪಟ್ಟದ್ದು;
ಪೇತ್ರನು ಕ್ರಿಸ್ತನನ್ನು ಬೊಂಕಿದ್ದು.

೫೩ [3]ಆಗಲವರು ಯೇಸುವನ್ನು ಪ್ರಧಾನ ಯಾಜಕನ ಬಳಿಗೆ ತಕ್ಕೊಂಡು ಹೋದರು. ಇವನ ಸಂಗಡ ಪ್ರಧಾನ
೫೪ ಯಾಜಕರೂ, ಹಿರಿಯರೂ, ಶಾಸ್ತ್ರಿಗಳೂ, ಎಲ್ಲರು ಕೂಡಿ ಕೊಂಡರು. ಇದಲ್ಲದೆ ಪೇತ್ರನು ದೂರದಿಂದ
ಅವನನ್ನು ಪ್ರಧಾನ ಯಾಜಕನ ಮಠದೊಳಗೆ ಹಿಂಬಾಲಿಸಿ, ಊಳಿಗದವರ ಸಂಗಡ ಕೂತು ಕೊಂಡು, ಬೆಂ
ಕಿಯ ಹತ್ತರ ಛಳಿ ಕಾಸಿ ಕೊಳ್ಳುತ್ತಿದ್ದನು.
೫೫ ಪ್ರಧಾನ ಯಾಜಕರೂ, ಮಂತ್ರಿಸಭೆಯೆಲ್ಲವೂ, ಯೇಸುವನ್ನು ಕೊಲ್ಲುವದಕ್ಕೆ ಅವನಿಗೆ ವಿರೋಧವಾಗಿ
೫೬ ಸಾಕ್ಷಿಯನ್ನು ಹುಡುಕಿ, ಕಂಡು ಕೊಳ್ಳದೆ ಹೋದರು. ಯಾಕಂದರೆ ಅನೇಕರು ಅವನಿಗೆ ವಿರೋಧವಾಗಿ
೫೭ ಅಪಸಾಕ್ಷಿ ಹೇಳಿದರು; ಆದರೆ ಅವರ ಸಾಕ್ಷಿಗಳು ಒಪ್ಪಿಗೆ ಆಗಲಿಲ್ಲ. ಮತ್ತು ಕೆಲವರು ಎದ್ದು, ಅವನಿಗೆ
೫೮ ವಿರೋಧವಾಗಿ ಅಪಸಾಕ್ಷಿ ಹೇಳಿ, ನಾನು ಕೈಕೆಲಸವಾದ ಈ ದೇವಾಲಯವನ್ನು ಕೆಡವಿ, ಮೂರು
ದಿನದೊಳಗೆ ಕೈಕೆಲಸವಲ್ಲದ ಬೇರೊಂದು ಕಟ್ಟುವೆನೆಂದು, ಅವನು ಹೇಳಿದ್ದನ್ನು ಕೇಳಿದ್ಧೇವೆ, ಅಂದರು.
೫೯ ಹಾಗೂ ಅವರ ಸಾಕ್ಷಿಯು ಒಪ್ಪಿಗೆ ಆಗಲಿಲ್ಲ.
೬೦ ಆಗ ಪ್ರಧಾನ ಯಾಜಕನು ಎದ್ದು, ಮಧ್ಯದಲ್ಲಿ ನಿಂತು, ಯೇಸುವಿಗೆ, ನೀನು ಏನೂ ಉತ್ತರ ಕೊಡುವದಿ
೬೧ ಲ್ಲವೋ? ಇವರು ನಿನ್ನ ಮೇಲೆ ಸಾಕ್ಷಿ ಕೊಡುವದೇನು? ಎಂದು ಕೇಳಿದಾಗ, ಅವನು ಏನೂ ಉತ್ತರ ಕೊಡ
ದೆ ಸುಮ್ಮನೆ ಇದ್ದನು.
ತಿರಿಗಿ ಪ್ರಧಾನ ಯಾಜಕನು, ನೀನು ಸ್ತುತಿಸ ತಕ್ಕವನ ಮಗನಾಗಿರುವ ಕ್ರಿಸ್ತನಾಗಿದ್ಧೀಯೋ? ಎಂದು
೬೨ ಅವನನ್ನು ಕೇಳಿದಾಗ; ಯೇಸು, ಇದ್ಧೇನೆ: ಇದಲ್ಲದೆ ಮನುಷ್ಯನ ಮಗನು ಬಲದ ಬಲಪಾರ್ಶ್ವದಲ್ಲಿ ಕೂತು
ಕೊಂಡು, ಆಕಾಶದ ಮೇಘಗಳ ಸಂಗಡ ಬರುವದನ್ನು ನೋಡುವಿರಿ, ಅಂದನು.
೬೩ ಆಗ ಪ್ರಧಾನ ಯಾಜಕನು ತನ್ನ ವಸ್ತ್ರಗಳನ್ನು ಹರಕೊಂಡು, ಇನ್ನ್ಯಾಕೆ ನಮಗೆ ಸಾಕ್ಷಿ ಬೇಕು?
೬೪ ದೂಷಣೆ ಕೇಳಿದಿರಲ್ಲ? ನಿಮಗೆ ಹ್ಯಾಗೆ ತೋಚುತ್ತದೆ? ಅಂದಾಗ, ಅವರೆಲ್ಲರು, ಅವನು ಮರಣಕ್ಕೆ ಪಾತ್ರ
ನೆಂದು, ನಿರ್ಣಯಿಸಿದರು.
೬೫ ಆಗ ಕೆಲವರು ಅವನ ಮೇಲೆ ಉಗುಳುವದಕ್ಕೂ, ಅವನ ಮುಖಕ್ಕೆ ಮುಸುಕು ಹಾಕಿ, ಅವನನ್ನು ಬಡಿದು,
ಪ್ರವಾದನೆ ಹೇಳು, ಅನ್ನುವದಕ್ಕೂ, ಆರಂಭ ಮಾಡಿದರು. ಮತ್ತು ಊಳಿಗದವರು ಅಂಗೈಯಿಂದ ಅವನನ್ನು
ಬಡಿದರು.
೬೬ ಇದಲ್ಲದೆ ಪೇತ್ರನು [4]ಕೆಳಗಿನ ಅಂಗಳದಲ್ಲಿ ಇರುವಾಗ, ಪ್ರಧಾನ ಯಾಜಕನ ಚಾಕರಿಯವರಲ್ಲಿ ಒಬ್ಬಳು
೬೭ ಬಂದು, ಪೇತ್ರನು ಛಳಿ ಕಾಸಿ ಕೊಳ್ಳುವದನ್ನು ನೋಡಿ, ಅವನ ಮೇಲೆ ಕಣ್ಣಿಟ್ಟು, ನೀನು ಸಹ ನಜರೇತಿನವ
೬೮ ನಾದ ಯೇಸುವಿನ ಸಂಗಡ ಇದ್ದಿ, ಅಂದಳು. ಆದರೆ ಅವನು ಬೊಂಕಿ, ನಾನರಿಯೆ, ನೀನು ಏನು ಹೇಳು

1. ಈ ಯೌವನಸ್ಥನು ಯಾರೆಂದು ನಿಶ್ಚಯಿಸ ಹೇತುವೆ ಇಲ್ಲ.

2. ಬೆತ್ತಲೆಯಾಗಿ ಅಂದರೆ ಮೇಲಿನ ವಸ್ತ್ರವಿಲ್ಲದೆ ಹೋದ ನೆಂಬ ಅರ್ಥ. (ಯೆಶಾ. ೨೦. ೨, ೩. ಯೋಹಾ. ೨೧. ೭.) ಈ ಯೌವನಸ್ಥನು ಜನಸಂದಣಿಯಿಂದ ವಾಡಿಕೆಯ ಪ್ರಕಾರ ವಸ್ತ್ರ ಧರಿಸಿ ಕೊಳ್ಳದೆ, ಮೇಲಿನ ವಸ್ತ್ರವನ್ನು ಹೊದ್ದು ಕೊಂಡು ಬಂದಿರುವನು. ಜನರು ಅವನನ್ನು ಹಿಡಿಯ ಬಂದಾಗ, ಅವನು ಅದನ್ನು ಬಿಟ್ಟು ಬಿಟ್ಟು ಓಡಿ ಹೋದನು. ಇವನು ನಾರುಮಡಿಯನ್ನು ಹೊದ್ದು ಕೊಂಡಿದ್ದನೆಂಬುವದನ್ನು ನೋಡುವಾಗ ಬಡವನಲ್ಲವೆಂದು ತೋರುತ್ತದೆ.

3. ೫೩—೬೫. ವಚನಗಳ ವ್ಯಾಖ್ಯಾನವನ್ನು ಮತ್ತಾ. ೨೬. ೫೭—೬೮. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

4. ಮತ್ತಾ. ೨೬. ೩. ಕ್ರಿಸ್ತನನ್ನು ನ್ಯಾಯ ವಿಚಾರಿಸಿದ್ದು ಉಪ್ಪರಿಗೆಯ ಮೇಲೆ ಎಂದು ತೋರುತ್ತದೆ. ಅಲ್ಲಿಂದ ಕೆಳಗೆ ಇದ್ದ ಅಂಗಳವನ್ನು ನೋಡ ತಕ್ಕದ್ದಾಗಿರ ಬಹುದು.



೬೯ ತ್ತೀಯೋ, ನನಗೆ ತಿಳಿಯುವದಿಲ್ಲ, ಎಂದು ಹೇಳಿ, ವಟಾರಕ್ಕೆ ಹೊರಟಾಗ, ಕೋಳಿ ಕೂಗಿತು. ಮತ್ತು
ಚಾಕರಿಯವಳು ತಿರಿಗಿ ಅವನನ್ನು ನೋಡಿ, ಹತ್ತರ ನಿಂತವರಿಗೆ, ಇವನು ಅವರಲ್ಲಿ ಒಬ್ಬನು, ಅನ್ನಲಾಗಿ, ಅವ
೭೦ ನು ತಿರಿಗಿ ಬೊಂಕಿದನು. ಮತ್ತು ಸ್ವಲ್ಪ ಹೊತ್ತಿನ ಮೇಲೆ ಹತ್ತರ ನಿಂತವರು, ನಿಜವಾಗಿ ಅವರಲ್ಲಿ ಒಬ್ಬನಾ
೭೧ ಗಿದ್ಧೀ, ನೀನು ಗಲಿಲಾಯದವನೇ, ನಿನ್ನ ಭಾಷೆ ಹಾಗದೆ, ಎಂದು ಪೇತ್ರನಿಗೆ ಹೇಳಿದಾಗ; ಅವನು, ನೀವು
ಹೇಳುವ ಆ ಮನುಷ್ಯನನ್ನು ನಾನರಿಯೆನೆಂದು, ಶಪಿಸಿ ಕೊಳ್ಳಲೂ, ಆಣೆ ಇಟ್ಟು ಕೊಳ್ಳಲೂ ಆರಂಭಿಸಿದನು.
೭೨ ಆಗ ಕೋಳಿ ಎರಡನೇ ಸಾರಿ ಕೂಗಿತು; ಮತ್ತು ಪೇತ್ರನು, ಕೋಳಿ ಎರಡು ಸಾರಿ ಕೂಗುವದಕ್ಕಿಂತ ಮುಂಚೆ
ಮೂರು ಸಾರಿ ನನ್ನನ್ನು ಕುರಿತು ಬೊಂಕುವಿ ಎಂದು, ಕರ್ತನು ತನಗೆ ಹೇಳಿದ ಮಾತನ್ನು [1]ಜ್ಞಾಪಕ ಮಾಡಿ
ಕೊಂಡು, ಬಹಳವಾಗಿ ಅತ್ತನು.

ಕ್ರಿಸ್ತನು ಪಿಲಾತನ ಮುಂದೆ ವಿಚಾರಿಸಲ್ಪಟ್ಟು, ಮರಣತೀರ್ಪು ಹೊಂದಿದ್ದು; ರಾಣುವೆಯವರಿಂದ ಹಾಸ್ಯ ಮಾಡಲ್ಪಟ್ಟು,
ಹೊಡಿಯಲ್ಪಟ್ಟು, ಶಿಲುಬೆಯ ಮೇಲೆ ಮರಣ ಹೊಂದಿದ್ದು.

**15.** [2]**ಬೆ**ಳಿಗ್ಯೆ ಪ್ರಧಾನ ಯಾಜಕರು, ಹಿರಿಯರೂ ಶಾಸ್ತ್ರಿಗಳೂ ಸಮಸ್ತ ಮಂತ್ರಿಸಭೆಯೂ ಸಹಿತವಾಗಿ,
ಆಲೋಚನೆ ಮಾಡಿ ಕೊಂಡು, ಯೇಸುವನ್ನು ಕಟ್ಟಿ ತಕ್ಕೊಂಡು ಹೋಗಿ, ಪಿಲಾತನಿಗೆ ಒಪ್ಪಿಸಿದರು.
೨ ಪಿಲಾತನು, ನೀನು ಯೆಹೂದ್ಯರ ಅರಸನಾಗಿದ್ಧೀಯೋ? ಎಂದು ಅವನನ್ನು ಕೇಳಿದಾಗ; ಅವನು ಉತ್ತರ
ಕೊಟ್ಟು, ನೀನು ಹೇಳುವದು ಸರಿ, ಅಂದನು.
೩, ೪ ಇದಲ್ಲದೆ ಪ್ರಧಾನ ಯಾಜಕರು ಅವನ ಮೇಲೆ ಬಹಳ ದೂರುಗಳನ್ನು ಹೇಳಿದರು. ಆಗ ಪಿಲಾತನು,
ಏನೂ ಉತ್ತರ ಹೇಳುವದಿಲ್ಲವೋ? ಇಗೋ, ನಿನ್ನ ಮೇಲೆ ಎಷ್ಟು ಸಾಕ್ಷಿ ಹೇಳುತ್ತಾರೆಂದು, ತಿರಿಗಿ ಅವನನ್ನು
೫ ಕೇಳಿದ್ದಕ್ಕೆ, ಯೇಸು ಇನ್ನೇನೂ ಉತ್ತರ ಕೊಡಲಿಲ್ಲ. ಆದದರಿಂದ ಪಿಲಾತನು ಆಶ್ಚರ್ಯ ಪಟ್ಟನು.
೬ ಆದರೆ ಹಬ್ಬದಲ್ಲಿ ಅವನು, [3]ಅವರು ಬೇಡಿ ಕೊಳ್ಳುವಂಥ ಒಬ್ಬ ಶೆರೆಯವನನ್ನು ಅವರಿಗೆ ಬಿಡಿಸುವನು.
೭ ಹೀಗಿರಲಾಗಿ, ಬರಬ್ಬನೆಂಬವನು, ತನ್ನ ಸಂಗಡ ಕಲಹ ಎಬ್ಬಿಸಿ, ಕಲಹದಲ್ಲಿ ನರಹತ್ಯ ಮಾಡಿದವರ ಸಂಗಡ
೮ ಕಟ್ಟಲ್ಪಟ್ಟಿದ್ದನು. ಆಗ ಸಮೂಹವು ಗದ್ದಲ ಮಾಡಿ, ಅವನು ಯಾವಾಗಲೂ ತಮಗೆ ಮಾಡಿದ ಪ್ರಕಾರ
೯ ಮಾಡ ಬೇಕೆಂದು, ಬೇಡಿ ಕೊಳ್ಳಲಾರಂಭಿಸಿದರು. ಆದರೆ ಪಿಲಾತನು ಅವರಿಗೆ ಪ್ರತ್ಯುತ್ತರವಾಗಿ, ನಾನು
೧೦ ಯೆಹೂದ್ಯರ ಅರಸನನ್ನು ನಿಮಗೆ ಬಿಡಿಸ ಬೇಕೋ? ಅಂದನು. ಯಾಕಂದರೆ ಪ್ರಧಾನ ಯಾಜಕರು ಹೊ
ಟ್ಟೆಕಿಚ್ಚಿನಿಂದ ಅವನನ್ನು ಒಪ್ಪಿಸಿದರೆಂದು, ತಿಳುಕೊಂಡಿದ್ದನು.
೧೧ ಆದರೆ ಪ್ರಧಾನ ಯಾಜಕರು, ಅವನನ್ನಲ್ಲ, ಬರಬ್ಬನನ್ನೇ ತಮಗೆ ಬಿಡಿಸುವ ಹಾಗೆ, ಸಮೂಹವನ್ನು ಎಬ್ಬಿಸಿ
೧೨ ದರು. ಆಗ ಪಿಲಾತನು ಉತ್ತರ ಕೊಟ್ಟು, ಹಾಗಾದರೆ ಯೆಹೂದ್ಯರ ಅರಸನೆಂದು ನೀವು ಹೇಳುವವನಿಗೆ
೧೩ ನಾನೇನು ಮಾಡ ಬೇಕೆಂದು, ಅವರಿಗೆ ತಿರಿಗಿ ಹೇಳಿದಾಗ; ಅವರು, ಶಿಲುಬೆಗೆ ಹಾಕು! ಎಂದು ತಿರಿಗಿ ಕೂಗಿ
೧೪ ದರು. ಪಿಲಾತನು ಅವರಿಗೆ, ಅವನು ಕೆಟ್ಟದ್ದೇನು ಮಾಡಿದ್ಧಾನೆ? ಅಂದಾಗ, ಅವರು ಬಹು ಹೆಚ್ಚಾಗಿ, ಅವ
೧೫ ನನ್ನು ಶಿಲುಬೆಗೆ ಹಾಕು, ಎಂದು ಕೂಗಿದರು. ಹೀಗಿರಲಾಗಿ ಪಿಲಾತನು, ಸಮೂಹವನ್ನು ಮೆಚ್ಚಿಸ ಬೇ

1. ಕರ್ತನು ಹೇಳಿದ್ದ ಎಚ್ಚರಿಕೆಯನ್ನೂ ಅದಕ್ಕೆ ವಿರೋಧವಾಗಿ ತಾನು ಮಾಡಿದ ಪಾಪವನ್ನೂ ಪೇತ್ರನು ನೆನಸಿ ಕೊಂಡು, ಅಳುವದಕ್ಕೆ ಪ್ರಾರಂಭಿಸಿದನು. ಮೂಲ ಭಾಷೆಯ ಅರ್ಥದ ಪ್ರಕಾರ ಅತ್ತುಕೊಂಡೇ ಇದ್ದನೆಂದು ಹೇಳ ಬಹುದು. ತನ್ನ ದುಷ್ಟ ಪಾಪವನ್ನು ನೆನಸಿ ಆಗ ಅಳ ಪ್ರಾರಂಭಿಸಿದವನು ತರುವಾಯ ಅದನ್ನು ನೆನಸುವಾಗಲೆಲ್ಲಾ ಅಳುತ್ತಾ ಇದ್ದನು. ನಾವು ಮಾಡುವ ಹರಿಕೆಗಳಿಂದಲೂ ನಿರ್ಣಯಗಳಿಂದಲೂ, ನಾವು ಶೋಧನೆಗೂ ಪಾಪಕ್ಕೂ ತಪ್ಪಿಸಿ ಕೊಳ್ಳ ಕೂಡದೆಂದು ಪೇತ್ರನ ದೃಷ್ಟಾಂತದಿಂದ ಪ್ರತ್ಯಕ್ಷವಾಗಿದೆ. ಅವುಗಳಿಗೆ ತಪ್ಪಿಸಿ ಕೊಳ್ಳ ಬೇಕಾದರೆ, ಕರ್ತನು ಹೇಳಿದಂತೆ ಎಚ್ಚತ್ತಿದ್ದು ಪ್ರಾರ್ಥಿಸ ಬೇಕು.

2. ಈ ಸಂಧಿಯ ವ್ಯಾಖ್ಯಾನವನ್ನು ಮತ್ತಾ. ೨೭. ಲೂಕ. ೨೩. ಯೋಹಾ. ೧೮. ಸಂಧಿಗಳಲ್ಲಿ ಕಾಣ ಬಹುದು.

3. ಲೂಕನ ಸುವಾರ್ತೆಯಲ್ಲಿ ಬರಬ್ಬನನ್ನು ಬಿಡಿಸ ಬೇಕೆಂದು ಜನರು ಬೇಡಿ ಕೊಂಡರೆಂದೂ, ಮತ್ತಾಯನ ಸುವಾರ್ತೆಯಲ್ಲಿ ಪಿಲಾತನೇ ಜನರನ್ನು ಕೇಳಿದನೆಂದೂ, ಸ್ವಲ್ಪ ವ್ಯತ್ಯಾಸವಾಗಿದೆ. ಈ ಸುವಾರ್ತೆಯಲ್ಲಿ ಅದು ವಿಶದವಾಗಿದೆ. ಜನರು ಹೀಗೆ ಬೇಡಿ ಕೊಳ್ಳುವ ವಾಡಿಕೆ ಉಂಟು. ಆ ವಾಡಿಕೆಯಿಂದ ಪಿಲಾತನು ಅವರನ್ನು ಕೇಳಿದನು. ಬರಬ್ಬನು ಕಲಹಗಾರನೂ ಕೊಲೆಗಾರನೂ ಎಂಬದು ಈ ಸುವಾರ್ತೆಯಲ್ಲಿ ಸ್ಪಷ್ಟವಾಗಿದೆ.

ಕೆಂದು, ಬರಬ್ಬನನ್ನು ಅವರಿಗೆ ಬಿಡಿಸಿ, ಯೇಸುವನ್ನು ಬಾರುಗಳಿಂದ ಹೊಡಿಸಿ, ಶಿಲುಬೆಗೆ ಹಾಕುವದಕ್ಕೆ
ಒಪ್ಪಿಸಿದನು.
೧೬ ರಾಣುವೆಯವರು ಅವನನ್ನು ಕಾವಲಿಮನೆಯಾದ [1]ಆಸ್ಥಾನದೊಳಗೆ ತಕ್ಕೊಂಡು ಹೋಗಿ, ಕಾವಲಿಯ
೧೭ ವರನ್ನೆಲ್ಲಾ ಕೂಡ ಕರೆದು, ಅವನಿಗೆ ರಕ್ತಾಂಬರವನ್ನು ಹೊದ್ದಿಸಿ, ಮುಳ್ಳಿನ ಕಿರೀಟವನ್ನು ಹೆಣೆದು,
೧೮ ಅವನ ಮೇಲಿಟ್ಟು, ಯೆಹೂದ್ಯರ ಅರಸನೇ, ಶುಭವಾಗಲಿ ಎಂದು, ಅವನನ್ನು ವಂದಿಸಲಾರಂಭಿಸಿ,
೧೯ ಅವನ ತಲೆಯ ಮೇಲೆ ಬೆತ್ತದಿಂದ ಹೊಡೆದು, ಅವನ ಮೇಲೆ ಉಗುಳಿ, ಮೊಣಕಾಲೂರಿ, ಅವನಿಗೆ
೨೦ ನಮಸ್ಕರಿಸಿದರು. ಮತ್ತು ಅವನನ್ನು ಹಾಸ್ಯ ಮಾಡಿದ ಮೇಲೆ, ರಕ್ತಾಂಬರವನ್ನು ಅವನಿಂದ ತೆಗೆದು, ಸ್ವಂತ
ವಸ್ತ್ರಗಳನ್ನು ಅವನಿಗೆ ಹೊದ್ದಿಸಿ, ಅವನನ್ನು ಶಿಲುಬೆಗೆ ಹಾಕುವದಕ್ಕೆ ತಕ್ಕೊಂಡು ಹೋಗುವಾಗ,
೨೧ ಹೊಲದಿಂದ ಬಂದಂಥ, ಅಲೆಕ್ಸಾಂದ್ರನಿಗೂ ರೂಫನಿಗೂ ತಂದೆಯಾದಂಥ, ಕುರೇನ್ಯನಾದ ಸೀಮೋನನೆಂಬ
ವನನ್ನು, ಅವನ ಶಿಲುಬೆ ಹೊತ್ತು ಕೊಂಡು ಹೋಗುವ ಹಾಗೆ, ಬಲವಂತ ಮಾಡಿದರು.
೨೨ ಅವನನ್ನು ಕಪಾಲಸ್ಥಳವೆಂಬ ಗೊಲ್ಗೊಥ ಎಂದು ಕರೆಯಲ್ಪಟ್ಟ ಸ್ಥಳಕ್ಕೆ ತಕ್ಕೊಂಡು ಹೋದ ಮೇಲೆ,
೨೩ ಬೋಳ ಕಲಿಸಿದ ದ್ರಾಕ್ಷೇ ರಸವನ್ನು ಅವನಿಗೆ ಕುಡಿಯ ಕೊಟ್ಟರು; ಆದರೆ ಅವನು ತೆಗೆದು ಕೊಳ್ಳಲಿಲ್ಲ.
೨೪ ಅವನನ್ನು ಶಿಲುಬೆಗೆ ಹಾಕಿದ ಮೇಲೆ, ಅವನ ವಸ್ತ್ರಗಳಲ್ಲಿ ಯಾವದು ಯಾವನಿಗೆ ಶಿಕ್ಕುವದೆಂದು, ಅವುಗ
ಳಿಗೋಸ್ಕರ ಚೀಟು ಹಾಕಿ, ಪಾಲು ಹಂಚಿ ಕೊಂಡರು.
೨೫ ಅವನನ್ನು ಶಿಲುಬೆಗೆ ಹಾಕುವಾಗ [2]ಮೂರನೇ ತಾಸಾಗಿತ್ತು.
೨೬ ಮತ್ತು [3]**ಯೆಹೂದ್ಯರ ಅರಸನು** ಎಂಬದಾಗಿ ಅವನ ದೂರಿನ ಮೇಲ್ಬರಹವು ಮೇಲೆ ಬರೆಯಲ್ಪಟ್ಟಿತು.
೨೭ ಮತ್ತು ಅವನ ಸಂಗಡ ಇಬ್ಬರು ಕಳ್ಳರನ್ನು, ಅವನ ಬಲಪಾರ್ಶ್ವದಲ್ಲಿ ಒಬ್ಬನನ್ನು, ಎಡಪಾರ್ಶ್ವದಲ್ಲಿ ಒಬ್ಬನನ್ನು,
೨೮ ಶಿಲುಬೆಗೆ ಹಾಕಿದರು. ಅವನು ಅನೀತಿವಂತರ ಸಂಗಡ ಎಣಿಸಲ್ಪಟ್ಟನೆಂಬ ಬರಹವು (ಯೆಶಾ. ೫೩. ೧೨.)
ಹೀಗೆ ಈಡೇರಿತು.
೨೯ ಇದಲ್ಲದೆ ಹಾದು ಹೋಗುವವರು ತಮ್ಮ ತಲೆಗಳನ್ನು ಅಲ್ಲಾಡಿಸಿ, ಅಯ್ಯೋ! ದೇವಾಲಯವನ್ನು ಕೆಡವಿ,
೩೦ ಮೂರು ದಿವಸಗಳಲ್ಲಿ ಕಟ್ಟುವವನೇ, ನಿನ್ನನ್ನು ನೀನೇ ರಕ್ಷಿಸಿ ಕೊಂಡು, ಶಿಲುಬೆಯಿಂದ ಇಳಿದು ಬಾ, ಎಂದು
೩೧ ಹೇಳಿ, ಅವನನ್ನು ದೂಷಿಸಿದರು. ಅದೇ ಪ್ರಕಾರ ಪ್ರಧಾನ ಯಾಜಕರು ಸಹ ಶಾಸ್ತ್ರಿಗಳ ಸಂಗಡ ಹಾಸ್ಯ
೩೨ ಮಾಡಿ, ಅವನು ಅನ್ಯರನ್ನು ರಕ್ಷಿಸಿದನು, ತನ್ನನ್ನು ರಕ್ಷಿಸಿ ಕೊಳ್ಳಲಾರನು; ನಾವು ನೋಡಿ, ವಿಶ್ವಾಸಿಸುವ
ಹಾಗೆ, ಇಸ್ರಯೇಲನ ಅರಸನಾದ ಕ್ರಿಸ್ತನು ಈಗಲೇ ಶಿಲುಬೆಯಿಂದ ಇಳಿದು ಬರಲಿ, ಎಂದು ತಮ್ಮಲ್ಲಿ ಹೇಳಿ
ಕೊಂಡರು. ಅವನ ಸಂಗಡ ಶಿಲುಬೆಗೆ ಹಾಕಲ್ಪಟ್ಟವರು ಸಹ ಅವನನ್ನು ನಿಂದಿಸಿದರು.
೩೩ ಆದರೆ ಆರನೇ ತಾಸಾದಾಗ ಒಂಭತ್ತನೇ ತಾಸಿನ ವರಿಗೂ ದೇಶವೆಲ್ಲಾದರ ಮೇಲೆ ಕತ್ತಲಾಯಿತು.
೩೪ ಮತ್ತು ಒಂಭತ್ತನೇ ತಾಸಿನಲ್ಲಿ ಯೇಸು ಮಹಾ ಶಬ್ದದಿಂದ, [4]ಎಲೊಹೀ, ಎಲೊಹೀ, ಲಮ್ಮ ಸಬಖ್ತಾನಿ—ಅದೇ
ನಂದರೆ, ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈ ಬಿಟ್ಟೆದ್ದೀ?—ಎಂದು (ಕೀರ್ತ. ೨೨. ೧.) ಕೂಗಿದನು.

1. ಹೆರೋದನ ಅರಮನೆಯಾಗಿದ್ದ ಆ ಕಟ್ಟುವಿಕೆಯು ರೋಮಾಯರ ಅಧಿಪತಿ ವಾಸಿಸುವ ಸ್ಥಳವಾಗಿಯೂ, ನ್ಯಾಯ ವಿಚಾರಿಸುವ ಸ್ಥಳವಾಗಿಯೂ ಇತ್ತು.

2. ಇಲ್ಲಿ ಹೇಳಲ್ಪಡುವ ಕಾಲವು, ೩೩. ವಚನ. ಮತ್ತಾ. ೨೭. ೪೫. ಲೂಕ. ೨೩. ೪೪. ವಚನಗಳಿಗೆ ಸರಿಯಾಗಿದ್ದರೂ, ಯೋಹಾ. ೧೯. ೧೪. ವಚನಕ್ಕೆ ಭೇದವಾಗಿದೆ. ಸುವಾರ್ತಿಕರೆಲ್ಲರೂ ಮೂರನೇ ಆರನೇ ಒಂಭತ್ತನೇ ತಾಸುಗಳೆಂದು ದಿವಸವನ್ನು ವಿಭಾಗಿಸುತ್ತಾರೆ. ಯೋಹಾನನು ಬೇರೆ ಪ್ರಕಾರ ಕಾಲವನ್ನು ಎಣಿಸಿರಬಹುದು. ಹ್ಯಾಗೂ ಮೂರನೇ ಆರನೇ ತಾಸುಗಳಿಗೆ ಮಧ್ಯೆ ಇರುವ ಕಾಲದಲ್ಲಿ ನಡಿದಂತೆ ಹೇಳಿರ ಬಹುದು. ಯೆಹೂದ್ಯರ ಮೂರನೇ ತಾಸು ನಮ್ಮ ಒಂಭತ್ತು ಘಂಟೆಗೆ ಸರಿಯಾಗಿದೆ.

3. ಇದು ಲೂಕನ ಸುವಾರ್ತೆಯಲ್ಲಿ ಹೇಳಿದ ಪ್ರಕಾರ, ಗ್ರೇಕ, ಲಥಿನ, ಇಬ್ರೀಯ ಅಕ್ಷರಗಳಲ್ಲಿ ಬರೆಯಲ್ಪಟ್ಟಿತು. ಮತ್ತಾಯನಲ್ಲಿ "ಯೆಹೂದ್ಯರ ಅರಸನಾದ ಯೇಸು" ಎಂದೂ, ಮಾರ್ಕನಲ್ಲಿ "ಯೆಹೂದ್ಯರ ಅರಸು" ಎಂದೂ, ಲೂಕನಲ್ಲಿ "ಇವನು ಯೆಹೂದ್ಯರ ಅರಸನು" ಎಂದೂ, ಯೋಹಾನನಲ್ಲಿ "ಯೆಹೂದ್ಯರ ಅರಸನಾಗಿರುವ ನಜರೇತಿನವನಾದ ಯೇಸು" ಎಂದೂ ಹೇಳಿ ಇದೆ. ಮಾತುಗಳು ಸ್ವಲ್ಪ ಭೇದವಾಗಿದ್ದಾಗ್ಯೂ, ಅರ್ಥ ಒಂದೇ.

4. ಮತ್ತಾಯನ ಸುವಾರ್ತೆಯಲ್ಲಿ ಇಬ್ರೀಯ ಭಾಷೆಯ ಪ್ರಕಾರ "ಎಲೀ" ಎಂದೂ, ಈ ಸುವಾರ್ತೆಯಲ್ಲಿ ಅರಮೆಯ ಭಾಷೆಯ ಪ್ರಕಾರ "ಎಲೊಹೀ" ಎಂದೂ ಹೇಳಿ ಇದೆ.



೩೫ ಹತ್ತರ ನಿಂತವರಲ್ಲಿ ಕೆಲವರು ಅದನ್ನು ಕೇಳಿ, ಇಗೋ, ಎಲೀಯನನ್ನು ಕರೆಯುತ್ತಾನೆ, ಅಂದರು.
೩೬ ಆದರೆ ಒಬ್ಬನು ಓಡಿ, ಪಾಚಿಯನ್ನು ಹುಳಿ ರಸದಿಂದ ತುಂಬಿಸಿ, ಬೆತ್ತಕ್ಕೆ ಶಿಕ್ಕಿಸಿ, ಅವನಿಗೆ ಕುಡಿಯ ಕೊಟ್ಟು,
ತಾಳಿರಿ, ಎಲೀಯನು ಅವನನ್ನು ಇಳಿಸುವದಕ್ಕೆ ಬರುವನೇನೋ, ನೋಡುವ, ಅಂದನು.
೩೭ ಮತ್ತು ಯೇಸು ದೊಡ್ಡ ಶಬ್ದದಿಂದ ಕೂಗಿ, ಪ್ರಾಣ ಬಿಟ್ಟನು.
೩೮ ಆಗ ದೇವಾಲಯದ ತೆರೆಯು ಮೇಲಿನಿಂದ ಕೆಳಗಿನ ಪರ್ಯಂತರ ಎರಡಾಗಿ ಹರಿದು ಹೋಯಿತು.
೩೯ ಮತ್ತು ಅವನೆದುರಾಗಿ ಹತ್ತರ ನಿಂತ ಶತಾಧಿಪತಿ, ಅವನು ಹಾಗೆ ಕೂಗಿ, ಪ್ರಾಣ ಬಿಡುವದನ್ನು ನೋಡಿ,
ನಿಶ್ಚಯವಾಗಿ ಈ ಮನುಷ್ಯನು ದೇವರ ಮಗನಾಗಿದ್ದನು, ಅಂದನು.
೪೦ ಇದಲ್ಲದೆ ದೂರದಿಂದ ನೋಡುವ ಸ್ತ್ರೀಯರು ಇದ್ದರು. ಅವರಲ್ಲಿ, ಅವನು ಗಲಿಲಾಯದಲ್ಲಿ ಇದ್ದಾಗ
ಅವನನ್ನು ಹಿಂಬಾಲಿಸಿ, ಅವನನ್ನು ಸೇವಿಸಿದ ಮಗ್ದಲದವಳಾದ ಮರಿಯಳೂ, [1]ಚಿಕ್ಕ ಯಾಕೋಬ ಯೋ
೪೧ ಸೆಯರ ತಾಯಿಯಾದ ಮರಿಯಳೂ, [2]ಸಲೋಮೆಯೂ, ಅವನ ಸಂಗಡ ಯೆರೂಸಲೇಮಿಗೆ ಏರಿ ಹೋದ
ಬೇರೆ ಅನೇಕ ಹೆಂಗಸರೂ ಇದ್ದರು.

ಕ್ರಿಸ್ತನ ಶರೀರವು ಹೂಣಿಡಲ್ಪಟ್ಟದ್ದು.

೪೨ ಮತ್ತು [3]ಸಬ್ಬತಿನ ಮುಂಚಿನ ದಿವಸವಾದ ಸಿದ್ಧ ಮಾಡುವ ದಿವಸವಾಗಿದ್ದದರಿಂದ, ಆಗಲೇ ಸಾಯಂಕಾ
೪೩ ಲವಾದ ಕಾರಣ, ಘನವುಳ್ಳ ಮಂತ್ರಿಯು, ತಾನೂ ದೇವರ ರಾಜ್ಯವನ್ನು ನಿರೀಕ್ಷಿಸಿ ಕೊಳ್ಳುವವನು, ಆಗಿರುವ
ಅರಿಮಥಾಯದವನಾದ ಯೋಸೇಫನು ಬಂದು, [4]ಧೈರ್ಯವಾಗಿ ಪಿಲಾತನ ಬಳಿಗೆ ಪ್ರವೇಶಿಸಿ, ಯೇಸುವಿನ
೪೪ ಶರೀರವನ್ನು ಕೇಳಿ ಕೊಂಡನು. ಆದರೆ ಪಿಲಾತನು, ಅವನು ಆಗಲೇ ಸತ್ತನೋ? ಎಂದು [5]ಆಶ್ಚರ್ಯ ಪಟ್ಟು,
೪೫ ಶತಾಧಿಪತಿಯನ್ನು ಕರೆದು, ಅವನು ಸತ್ತು ಹೋದನೋ? ಎಂದು ವಿಚಾರಿಸಿದನು. ಶತಾಧಿಪತಿಯಿಂದ
ಅದನ್ನು ತಿಳಿದು ಕೊಂಡ ಮೇಲೆ, ಶರೀರವನ್ನು ಯೋಸೇಫನಿಗೆ ಕೊಟ್ಟು ಬಿಟ್ಟನು.
೪೬ ಇವನು ನಾರುಮಡಿ ತೆಗೆದು ಕೊಂಡು, ಅವನನ್ನು ಇಳಿಸಿ, ನಾರುಮಡಿಯಲ್ಲಿ ಸುತ್ತಿ, ಬಂಡೆಯಲ್ಲಿ ಅಗಿದಿ
೪೭ ರುವ ಸಮಾಧಿಯಲ್ಲಿ ಇಟ್ಟು, ಸಮಾಧಿಯ ಬಾಗಲಿಗೆ ಕಲ್ಲನ್ನು ಹೊರಳಿಸಿದನು. ಆದರೆ ಮಗ್ದಲದವಳಾದ
ಮರಿಯಳೂ, ಯೋಸೆಯ ತಾಯಿಯಾದ ಮರಿಯಳೂ, ಅವನನ್ನು ಎಲ್ಲಿ ಇಡುತ್ತಾರೆಂದು ನೋಡಿದರು.

ಕ್ರಿಸ್ತನು ಪುನರುತ್ಥಾನವಾದದ್ದು.

16. ಮತ್ತು [6]ಸಬ್ಬತು ಆದ ಮೇಲೆ ಮಗ್ದಲದವಳಾದ ಮರಿಯಳೂ, ಯಾಕೋಬನ ತಾಯಿಯಾದ ಮರಿ
ಯಳೂ, ಸಲೋಮೆಯೂ, ಅವನನ್ನು [7]ಅಭಿಷೇಕಿಸುವ ಹಾಗೆ ಸುಗಂಧಗಳನ್ನು ಕೊಂಡು ಕೊಂಡರು.

1. ಮತ್ತಾ. ೧೦. ೩. ವಚನದ ವ್ಯಾಖ್ಯಾನ ನೋಡ ಬೇಕು.

2. ಮತ್ತಾ. ೨೦. ೨೦. ವಚನದ ವ್ಯಾಖ್ಯಾನದಲ್ಲಿ ನೋಡ ಬೇಕು. ಕೃಪಾಮೂರ್ತಿಯಾದ ಕ್ರಿಸ್ತನ ಶಿಲುಬೆಯ ಬಳಿಯಲ್ಲಿ ನಿಂತು, ಆತನ ಅಪರಿಮಿತ ಪ್ರೀತಿಯನ್ನು ಧ್ಯಾನಿಸಿ, ಆತನಿಗೆ ಸೇವೆ ಮಾಡಿದವರ ಹೆಸರುಗಳು ಎಂದೆಂದಿಗೂ ಶಾಶ್ವತವಾಗಿ ಪ್ರಕಾಶಿಸುವವು.

3. ಯೋಹಾ. ೧೯. ೩೧. ವಚನದ ವ್ಯಾಖ್ಯಾನ ನೋಡ ಬೇಕು.

4. ಇದಕ್ಕೆ ಮುಂಚೆ ಇವನು ಯೆಹೂದ್ಯರಿಗೆ ಭಯ ಪಟ್ಟವನಾಗಿದ್ದನು. (ಯೋಹಾ. ೧೯. ೩೮.) ಕ್ರಿಸ್ತನ ಶ್ರಮೆಯನ್ನೂ ಮರಣವನ್ನೂ ನೋಡಿ, ಅವನ ಮನಸ್ಸು ಕರಗಿ, ಭಯವನ್ನು ಬಿಟ್ಟು, ಆತನ ಮೇಲಿದ್ದ ವಿಶ್ವಾಸ ಪ್ರೀತಿ ಆಸಕ್ತಿಗಳಿಂದ ಧೈರ್ಯ ಪಟ್ಟು, ಪಿಲಾತನ ಬಳಿಗೆ ಹೋಗಿ, ಆತನ ಶರೀರವನ್ನು ಕೇಳಿದನು. ಇವನು ದೇವರ ರಾಜ್ಯವನ್ನು ನಿರೀಕ್ಷಿಸುತ್ತಾ ಇದ್ದವನೆಂದು ಈ ಸುವಾರ್ತೆಯಲ್ಲಿ ಮಾತ್ರ ಹೇಳಿ ಇದೆ.

5. ಶಿಲುಬೆಗೆ ಹಾಕಲ್ಪಟ್ಟವರು ಸಂಗಡಲೇ ಸಾಯಲಾರರು. ... ದರೆ ಕ್ರಿಸ್ತನು ಹೊಂದಿದ ಮನೋಸಂಕಟದಿಂದಲೂ, ಆತನು ಶರೀರದಲ್ಲಿ ಹೊಂದಿದ ನಾನಾ ಉಪದ್ರಗಳಿಂದಲೂ ಆತನ ಪ್ರಾಣವು ಜಾಗ್ರತೆಯಾಗಿ ಹೋಯಿತು.

6. ೧—೮. ವಚನಗಳ ವರಿಗೂ ಕರ್ತನು ಪುನರುತ್ಥಾನವಾದ ವಿಷಯವಾಗಿ, ಆತನ ಶರೀರಕ್ಕೆ ಸುಗಂಧಗಳನ್ನು ಹಾಕುವದಕ್ಕೆ ಹೋದ ಸ್ತ್ರೀಯರ ಸಾಕ್ಷಿಯುಂಟು. ಸಮಾಧಿ ತೆರೆದಿರುವದನ್ನು ಕಂಡು, ಅವರು ಆಶ್ಚರ್ಯ ಪಟ್ಟರು. (೧—೪.) ಸಮಾಧಿಯೊಳಗೆ ಕುಳಿತಿದ್ದ ದೂತನು, ಕರ್ತನು ಎದ್ದಿದ್ದಾನೆಂದೂ, ಆತನು ತಾನು ಹೇಳಿದ ಹಾಗೆ ಗಲಿಲಾಯದಲ್ಲಿ ತನ್ನ ಶಿಷ್ಯರಿಗೆ ಪ್ರಸನ್ನನಾಗುವನೆಂದೂ ಹೇಳಿದನು. (೫—೭.) ಅವರು ಅದನ್ನು ಕೇಳಿ ಅಧಿಕ ಭಯದಿಂದಲೂ ಆಶ್ಚರ್ಯದಿಂದಲೂ ಸಮಾಧಿಯನ್ನು ಬಿಟ್ಟು ಹೋದರು. (೮. ವ. ೧—೮ಕ್ಕೆ ಮತ್ತಾ. ೨೮. ೧, ೫—೮. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.)

7. (ಯೋಹಾ. ೧೯. ೪೦.) ಅವರು ಸಬ್ಬತು ಪ್ರಾರಂಭಿಸುವದಕ್ಕಿಂತ ಮುಂಚೆ ಶುಕ್ರವಾರದ ಸಾಯಂಕಾಲದಲ್ಲಿ ಸುಗಂಧಗ

೨ ಇವರು ಸಬ್ಬತಿನ ಮಾರಣೆ ದಿವಸ ಅರುಣೋದಯದಲ್ಲಿ, ಸೂರ್ಯನು ಉದಯಿಸುವಾಗಲೇ, ಸಮಾಧಿಯ
೩ ಬಳಿಗೆ ಬಂದು, ಸಮಾಧಿಯ ಬಾಗಲಿಂದ ನಮಗೆ ಕಲ್ಲನ್ನು ಯಾರು ತೆಗೆದು ಹೊರಳಿಸುವರೆಂದು, ತಮ್ಮೊ
೪ ಳಗೆ ಹೇಳಿ ಕೊಂಡು, ಕಣ್ಣು ಎತ್ತುವಾಗ, [1]ಮಹಾ ದೊಡ್ಡ ಕಲ್ಲು ಹೊರಳಿಸಿ ತೆಗೆಯಲ್ಪಟ್ಟಿರುವದನ್ನು
ನೋಡಿದರು.

೫ ಆಗ ಸಮಾಧಿಯೊಳಗೆ ಪ್ರವೇಶಿಸಿ, ಬಿಳೀ ಅಂಗಿ ತೊಟ್ಟು ಕೊಂಡಿರುವ ಒಬ್ಬ [2]ಯೌವನಸ್ಥನು ಬಲಪಾ
೬ ರ್ಶ್ವದಲ್ಲಿ ಕೂತಿರುವದನ್ನು ನೋಡಿ, ಭಯ ಭ್ರಾಂತರಾದರು. ಆದರೆ ಅವನು ಅವರಿಗೆ ಹೇಳಿದ್ದು, ಭಯ
ಭ್ರಾಂತರಾಗ ಬೇಡಿರಿ; ಶಿಲುಬೆಗೆ ಹಾಕಲ್ಪಟ್ಟ ನಜರೇತಿನವನಾದ ಯೇಸುವನ್ನು ಹುಡುಕುತ್ತೀರಿ; ಅವನು
೭ ಎದ್ದಿದ್ದಾನೆ; ಇಲ್ಲಿ ಇಲ್ಲ, ಇಗೋ, ಅವನು ಇಡಲ್ಪಟ್ಟ ಸ್ಥಳವು; ಆದರೆ ಹೋಗಿ, ಅವನ ಶಿಷ್ಯರಿಗೂ, [3]ಪೇ
ತ್ರನಿಗೂ, ಅವನು ನಿಮ್ಮ ಮುಂದೆ ಗಲಿಲಾಯಕ್ಕೆ ಹೋಗುತ್ತಾನೆಂದು ಹೇಳಿರಿ; ಅವನು ನಿಮಗೆ ಹೇಳಿದ
೮ ಹಾಗೆ, ಅಲ್ಲಿ ಅವನನ್ನು ನೋಡುವಿರಿ. ಆಗಲವರು ಬೇಗ ಹೊರಟು, ಸಮಾಧಿಯಿಂದ ಓಡಿ ಹೋದರು;
ಇದಲ್ಲದೆ ಅವರು ನಡುಗಿನಿಂದಲೂ ಭ್ರಮೆಯಿಂದಲೂ ಹಿಡಿಯಲ್ಪಟ್ಟವರಾಗಿ, ಭಯ ಪಟ್ಟದರಿಂದ ಯಾರಿಗೂ
ಏನೂ ಹೇಳಲಿಲ್ಲ.

ಕರ್ತನು ಶಿಷ್ಯರಿಗೆ ದರ್ಶನ ಕೊಟ್ಟದ್ದು; ಅವರಿಗೆ ಕಟ್ಟಳೆ ಕೊಟ್ಟದ್ದು.

೯ ಹೀಗಿರಲಾಗಿ ಅವನು [4]ಸಬ್ಬತಿನ ಮಾರಣೇ ದಿವಸದ ಬೆಳಿಗ್ಯೆ ಸತ್ತವರೊಳಗಿಂದ ಎದ್ದು, ತಾನು ಏಳು ದೆವ್ವಗ
೧೦ ಳನ್ನು ಹೊರಡಿಸಿದ್ದ [5]ಮಗ್ದಲದವಳಾದ ಮರಿಯಳಿಗೆ ಮೊದಲು ಕಾಣಿಸಿ ಕೊಂಡನು. ಅವಳು ಹೋಗಿ, ದುಃಖ
೧೧ ಪಟ್ಟು ಅಳುವವರಾದ ಅವನ ಸಂಗಡ ಇದ್ದವರಿಗೆ ತಿಳಿಸಿದಳು. ಅವನು ಬದುಕುತ್ತಾನೆಂದೂ, ಅವಳಿಗೆ ಕಾ
ಣಿಸಿ ಕೊಂಡನೆಂದೂ ಕೇಳಿ, ಅವರು ನಂಬಲಿಲ್ಲ.

೧೨ ಇವುಗಳಾದ ಮೇಲೆ ಅವರಲ್ಲಿ ಇಬ್ಬರು ತಿರುಗಾಡಿ, ಹಳ್ಳಿಗೆ ಹೋಗುವಾಗ, ಅವನು [6]ಬೇರೆ ರೂಪವಾಗಿ
೧೩ ಕಾಣಿಸಿ ಕೊಂಡನು. ಅವರು ಬಂದು, ಮಿಕ್ಕಾದವರಿಗೆ ತಿಳಿಸಿದರು; [7]ಅವರನ್ನೂ ನಂಬಲಿಲ್ಲ.

೧೪ ಆ ಮೇಲೆ ಊಟಕ್ಕೆ ಕೂತು ಕೊಂಡವರಾದ ಹನ್ನೊಂದು ಮಂದಿಗೆ ಕಾಣಿಸಿ ಕೊಂಡು, ಎದ್ದಿದ್ದ ತನ್ನನ್ನು
ನೋಡಿದವರನ್ನು, ಅವರು ನಂಬದೆ ಹೋದ ಕಾರಣ, ಅವರ ಅವಿಶ್ವಾಸವನ್ನೂ ಹೃದಯದ ಕಾಠಿಣ್ಯವನ್ನೂ
ಗದರಿಸಿದನು.

ಮೇಲೆ ಶನಿವಾರ ಸಾಯಂಕಾಲದಲ್ಲಿ ಅವುಗಳನ್ನು ಸಿದ್ಧ ಮಾಡಿ ಕೊಂಡಿರುವರು.

1. ಕಲ್ಲು ದೊಡ್ಡದಾಗಿದ್ದದರಿಂದ, ಯಾರು ಅದನ್ನು ಹೊರಳಿಸುವರೆಂಬ ಚಿಂತೆ ಇತ್ತು. ಪ್ರಾತಃಕಾಲದ ಮಂದ ಬೆಳಕಿನಲ್ಲಿ ಅದನ್ನು ದೂರದಿಂದ ನೋಡಿದಾಗ ಅದು ಹೊರಳಿಸಲ್ಪಟ್ಟದ್ದು ಕಾಣಬಂತು.

2. ಇವನು ಮನುಷ್ಯರೂಪವಾಗಿ ಕಾಣಲ್ಪಟ್ಟ ದೇವದೂತನು. (ಉತ್ಪ. ೧೯. ೧೫, ೧೬. ಅಪೊ. ಕ್ರಿ. ೧. ೧೦.)

3. ತನ್ನ ಕರ್ತನನ್ನು ಅರಿಯೆನೆಂದು ಬೊಂಕಿದ ಪೇತ್ರನ ಮನಸ್ಸು ಕಳವಳ ಪಟ್ಟಿರುವದು. ಅವನ ಕಳವಳ ತೀರುವಂತೆಯೂ, ಅವನಿಗೆ ಆದರಣೆಯುಂಟಾಗುವಂತೆಯೂ, ಬೇರೆ ಶಿಷ್ಯರ ಹೆಸರು ಹೇಳದೆ, ಅವನ ಹೆಸರನ್ನು ಹೇಳಿ, ಈ ಮಾತುಗಳನ್ನು ಅವನಿಗೆ ತಿಳಿಸ ಬೇಕೆಂದು ದೂತನು ಹೇಳಿದನು. ಗುಣ ಪಟ್ಟ ಪಾಪಿಷ್ಠರಿಗೆ ರಕ್ಷಕನ ಕೃಪೆಯೂ ಆದರಣೆಯೂ ದೊರಕುವವು.

4. ೯—೨೦. ವಚನಗಳ ಮಟ್ಟಿಗೂ ಕ್ರಿಸ್ತನು ತನ್ನ ಶಿಷ್ಯರಿಗೆ ಪ್ರಸನ್ನನಾದದ್ದೂ, (೯—೧೪.) ಆತನು ಅವರಿಗೆ ಕೊಟ್ಟ ಕಟ್ಟಳೆಯೂ, (೧೫—೧೮.) ಆತನು ಪರಲೋಕಕ್ಕೆ ಏರಿ ಹೋದದ್ದೂ, (೧೯. ವ.) ಅಪೊಸ್ತಲರ ಪ್ರಸಂಗದಿಂದ ಉಂಟಾದ ಫಲವೂ, (೨೦. ವ.) ಈ ಭಾಗದಲ್ಲಿ ಅಡಗಿ ಇರುತ್ತದೆ.

5. ಯೋಹಾ. ೨೦. ೧೧—೧೭. ವಚನಗಳ ವ್ಯಾಖ್ಯಾನ ನೋಡ ಬೇಕು.

6. ಕ್ರಿಸ್ತನು ಅವರಿಗೆ ಯಾವ ರೂಪವಾಗಿ ಪ್ರಸನ್ನನಾದನೋ ತಿಳಿಯಲಿಲ್ಲ. ಆತನು ರೊಟ್ಟಿಯನ್ನು ಮುರಿದು ಆಶೀರ್ವದಿಸಿ ಕೊಟ್ಟಾಗಲೇ ಅವರು ಆತನನ್ನು ತಮ್ಮ ಕರ್ತನೆಂದು ತಿಳಿದು ಕೊಂಡರು. (ಲೂಕ. ೨೪. ೩೧—೩೫.)

7. ತೋಮನು ಅವರನ್ನು ನಂಬಲಿಲ್ಲವೆಂಬುವದು ನಿಶ್ಚಯ. (ಯೋಹಾ. ೨೦. ೨೪, ೨೫.) ಇನ್ನು ಕೆಲವು ಶಿಷ್ಯರು ನಂಬದೆ ಇರುವರು. ಆದಾಗ್ಯೂ ಅವರ ಸಂದೇಹ ತೀಘ್ರವಾಗಿ ನಿವರ್ತಿಯಾಯಿತು. ಲೂಕ. ೨೪. ೩೪—೪೭. ಈ ವಚನಗಳಲ್ಲಿ ಅವರು ನಂಬಲಿಲ್ಲವೆಂದು ಆಗಾಗ್ಯೆ ಹೇಳಿ ಇದೆ. ಕಡೆಯಲ್ಲಿ ಅವರು ನಂಬಿದ್ದನ್ನು ನೋಡಿದರೆ, ಅವರು ನಂಬಿದ ಕಾರ್ಯ ನಿಜವೆಂಬುವದಕ್ಕೆ, ಏನೂ ಸಂದೇಹವಿಲ.



೧೫ ಮತ್ತು ಅವರಿಗೆ ಹೇಳಿದ್ದೇನಂದರೆ, [1]ಸಮಸ್ತ ಲೋಕಕ್ಕೆ [2]ಹೋಗಿ, [3]ಸಮಸ್ತ ಸೃಷ್ಟಿಗೆ ಸುವಾರ್ತೆ ಪ್ರಸಂಗಿ
೧೬ ಸಿರಿ; ವಿಶ್ವಾಸಿಸಿ ಸ್ನಾನ ಹೊಂದುವವನು ರಕ್ಷಿಸಲ್ಪಡುವನು; ಆದರೆ [4]ವಿಶ್ವಾಸಿಸದವನು ಆಜ್ಞೆನಿರ್ಣಯ
೧೭ ಪಡುವನು. ಇದಲ್ಲದೆ [5]ಈ ಲಕ್ಷಣಗಳು ವಿಶ್ವಾಸಿಸುವವರನ್ನು ಹಿಂಬಾಲಿಸುವವು; ಯಾವವಂದರೆ, ನನ್ನ
೧೮ ಹೆಸರಿನಲ್ಲಿ ದೆವ್ವಗಳನ್ನು ಹೊರಡಿಸುವರು; ಹೊಸ ಭಾಷೆಗಳಲ್ಲಿ ಮಾತಾಡುವರು; ಸರ್ಪಗಳನ್ನು ಎತ್ತುವರು;
[6]ಮರಣಕರವಾದದ್ದೇನಾದರೂ ಕುಡಿದರೂ, ಅವರಿಗೆ ನಷ್ಟವಾಗುವದಿಲ್ಲ; ಅಸೌಖ್ಯವಾಗಿರುವವರ ಮೇಲೆ
ಕೈಗಳನ್ನಿಡುವರು, ಆಗ ಗುಣವಾಗುವರು.

೧೯ ಆ ಮೇಲೆ ಕರ್ತನು ಅವರ ಸಂಗಡ ಮಾತಾಡಿದ ತರುವಾಯ, ಆಕಾಶಕ್ಕೆ ಎತ್ತಲ್ಪಟ್ಟು, ದೇವರ ಬಲಪಾ
ರ್ಶ್ವದಲ್ಲಿ ಕೂತು ಕೊಂಡನು.

೨೦ ಆದರೆ ಅವರು ಹೊರಟು, ಎಲ್ಲಾ ಕಡೆಯಲ್ಲಿಯೂ ಪ್ರಸಂಗಿಸಿದರು; ಕರ್ತನು [7]ಸಹಾಯ ಮಾಡಿ, ಹಿಂ
ಬಾಲಿಸುವ ಲಕ್ಷಣಗಳಿಂದ ವಾಕ್ಯವನ್ನು ಸ್ಥಿರ ಪಡಿಸಿದನು. ಆಮೆನ್.

1. ೧೫—೧೮. ವಚನಗಳಲ್ಲಿ ಕರ್ತನು ಬೇರೆ ಬೇರೆ ಸಮಯಗಳಲ್ಲಿ ಹೇಳಿದ ಉಪದೇಶಗಳ ಒಟ್ಟು ಅಡಗಿ ಇದೆ ಎಂದು ತೋರುತ್ತದೆ. (ಮತ್ತಾ. ೨೮. ೧೮—೨೦. ಲೂಕ. ೨೪. ೪೯. ಅಪೊ. ಕ್ರಿ. ೧. ೪—೮.)

2. ಮತ್ತಾ. ೨೮. ೧೯. ವಚನದ ವ್ಯಾಖ್ಯಾನ ನೋಡ ಬೇಕು.

3. ಸುವಾರ್ತೆಯ ದೊಡ್ಡ ಬೆಳಕು ಭೂಲೋಕದಲ್ಲೆಲ್ಲಿಯೂ ಪ್ರಕಾಶಿಸುವ ತನಕ ಅದನ್ನು ಪ್ರಸಂಗಿಸ ಬೇಕಾದದ್ದು ಸಭೆಯ ಮುಖ್ಯ ಕೆಲಸವೆಂಬುವದು ಇದರಿಂದ ತಿಳಿಯ ಬಹುದು.

4. ಸುವಾರ್ತೆ ಸತ್ಯವೆಂದು ಅಂಗೀಕರಿಸದೆ, ಅದನ್ನು ಅನುಸರಿಸಿ ನಡಿಯದವನೇ ವಿಶ್ವಾಸಿಸದವನು. ಅಂಥವನು, ಸ್ನಾನ ಹೊಂದಿದಾಗ್ಯೂ ಹೊಂದದೆ ಇದ್ದಾಗ್ಯೂ, ಕೆಟ್ಟೇ ಹೋಗುವನು.

5. ಅದ್ಭುತಗಳನ್ನು ಮಾಡುವ ವರವು ಅಪೊಸ್ತಲರಿಗೆ ಮಾತ್ರವಲ್ಲ, ಅವರಿಂದ ಆದಿ ಕ್ರೈಸ್ತರಿಗೆ ಕೂಡ ಇತ್ತೆಂದು ತೋರುತ್ತದೆ. ಈ ವರವು ಯಾವಾಗ ನಿಂತು ಹೋಯಿತೋ ತಿಳಿಯಲಿಲ್ಲ. ಸೂರ್ಯನು ಅಸ್ತಮಿಸುವಾಗ ಕ್ರಮೇಣ ಇಳಿದು ಹೋಗುವ ಪ್ರಕಾರ, ಈ ಅದ್ಭುತವರವು ಕಡಿಮೆಯಾಗುತ್ತಾ ಬಂದು, ಪೂರ್ಣವಾಗಿ ಮರೆಯಾಯಿತು. ಆರಂಭದಲ್ಲಿ ಅವಶ್ಯವಾಗಿದ್ದ ಈ ವರವು ಮಾರ್ಗ ಪೂರ್ಣವಾಗಿ ಸ್ಥಾಪಿಸಲ್ಪಟ್ಟ ಮೇಲೆ ಬೇಕಾಗಿರುವದಿಲ್ಲ.

6. ವಿಷವಿಟ್ಟು ಕೊಲ್ಲುವದು ಆ ಕಾಲದಲ್ಲಿ ವಾಡಿಕೆಯಾಗಿತ್ತು. ಇಂಥಾ ಮರಣಕ್ಕೆ ಯಾರು ತಪ್ಪಿಸಿ ಕೊಂಡರೋ ವೇದದಲ್ಲಿ ಹೇಳಲಿಲ್ಲ. ಬೇರೆ ಅದ್ಭುತಗಳಿಗಿಂತ ಇದು ವಿಶೇಷವಾದದ್ದಲ್ಲ.

7. ತನ್ನ ವಾಗ್ದತ್ತದ ಹಾಗೆ ಅವರ ಸಂಗಡ ಕ್ರಿಯೆ ನಡಿಸಿದನು. ಸುವಾರ್ತೆಯನ್ನು ಸಾರಲೂ, ಕೇಳಿದವರು ನಂಬಲೂ ತಕ್ಕ ಹಾಗೆ ತನ್ನ ಆತ್ಮದ ವರ ಪಾಲಿಸಿದನು. ಅದರಿಂದ ಅವರು ಸಿದ್ಧಿ ಹೊಂದಿದರು. ಆಮೆನ್.